# ಅಧ್ಯಾಯ – ೧೬

# ಇತರೆ ಸಮಾಜ ಸೇವೆಗಳು

**ಭಾ**ರತವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಿರುವ ರಾಷ್ಟ್ರವಾಗಿದ್ದು, ಸಮಾಜ ಕಲ್ಯಾಣ ಯೋಜನೆಗಳ ಮೂಲಕ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಲು ಶ್ರಮಿಸುತ್ತ ಬಂದಿದೆ. ಆದ್ದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣಕ್ಕಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತಿವೆ. ಅದಕ್ಕನುಗುಣವಾಗಿ ರಾಷ್ಟ್ರವು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನವನ್ನು ಅಭಿವೃದ್ಧಿ ಪಡಿಸುವ ಮೂಲಕ ರಾಜ್ಯದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಕರ್ನಾಟಕ ಸರ್ಕಾರದ ಧ್ಯೇಯವಾಗಿದೆ. ದಲಿತರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಕಾರ್ಮಿಕರು, ಅಂಗವಿಹೀನರು, ಮುಂತಾದವರ ಏಳಿಗೆಗಾಗಿ ಕೈಗೊಳ್ಳುವ ಕಾರ್ಯಗಳೆಲ್ಲವೂ ಸಮಾಜ ಸೇವೆಯ ವಿವಿಧ ವಿಧಾನಗಳಾಗಿವೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳೂ ಈ ನಿಟ್ಟಿನಲ್ಲಿ ತಮ್ಮ ಕಾರ್ಯಯೋಜನೆಯನ್ನು ರೂಪಿಸಿಕೊಂಡು, ಸುಖೀ ಹಾಗೂ ಪ್ರಗತಿಪರ ರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಪ್ರಯತ್ನಿಸುತ್ತಿವೆ. ಈ ಅಧ್ಯಾಯವು ಉಡುಪಿ ಜಿಲ್ಲೆಯಲ್ಲಿ, ಜನತೆಗೆ ಒದಗಿಸಿಕೊಟ್ಟಿರುವ ಸಾಮಾಜಿಕ ಮೂಲಭೂತ ಸೌಕರ್ಯಗಳನ್ನು, ಹಾಗೂ ಅವುಗಳ ಪ್ರಗತಿಯ ಹಂತವನ್ನು ಲಭ್ಯ ಅಂಕಿ ಅಂಶಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸುತ್ತದೆ. ಜಿಲ್ಲೆಯ ವಿವಿಧೆಡೆ, ಸರ್ಕಾರದ ವತಿಯಿಂದ ಒದಗಿಸಲ್ಪಟ್ಟಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳ ಯಶಸ್ಸಿನ ಅಂಶಗಳ ಪಕ್ಷಿ ನೋಟವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

## ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿಯವರ ಸರ್ವತೋಮುಖ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಯು, ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ರಾಜ್ಯಗಳ ಪುನರ್ವ್ಯವಸ್ಥೆಗೆ ಮುನ್ನ, ರಾಜ್ಯದಲ್ಲಿ ಶಿಕ್ಷಣ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ನಿಮ್ನ ವರ್ಗದ ಜನತೆಯ ಶಿಕ್ಷಣ ಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ರಾಜ್ಯದ ಕೆಲವು ಜಿಲ್ಲೆಯಲ್ಲಿ ಶಾಲೆಗಳನ್ನು ತೆರೆಯಲಾಯಿತಲ್ಲದೆ, ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನವನ್ನೂ ಬಿಡುಗಡೆ ಮಾಡಲಾಯಿತು. ಬೋಧನಾ ಶುಲ್ಕ ವಿನಾಯಿತಿ, ವಿದ್ಯಾರ್ಥಿವೇತನ, ಪುಸ್ತಕ ಹಾಗೂ ಇತರ ಸಲಕರಣೆಗಳ ವಿತರಣೆ, ಸರ್ಕಾರಿ ಪ್ರೌಢಶಾಲೆ

ಮತ್ತು ಕಾಲೇಜುಗಳಲ್ಲಿ ಪ್ರವೇಶಕ್ಕೆ ಮೀಸಲಾತಿ ಮತ್ತು ಇನ್ನೂ ಇತರ ರೀತಿಯ ಸೌಲಭ್ಯಗಳನ್ನು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿತ್ತು. ಮದ್ರಾಸ್ ಪ್ರಾಂತದಲ್ಲೂ ನಿಮ್ನ ವರ್ಗಗಳ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯಲಾಯಿತು. ಅಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಹೊಲೆಯ ಮತ್ತು ಕೊರಗ ಜಾತಿಯವರಿಗೆ ಪ್ರತ್ಯೇಕವಾಗಿ ಏಳು ಶಾಲೆಗಳು ಕುದ್ಮಲ್ ರಂಗರಾಯರ ಪ್ರಯತ್ನದಿಂದಾಗಿ ೧೮೮೩ರಲ್ಲಿ ಆರಂಭಿಸಲ್ಪಟ್ಟವು. ೧೯೨೧–೧೯೪೭ರ ಕಾಲಾವಧಿಯಲ್ಲಿ ಕಾರ್ಮಿಕ ಇಲಾಖೆಯು ನಿಮ್ನ ವರ್ಗದ ಶಿಕ್ಷಣದ ಮೇಲ್ವಿಚಾರಣೆಯ ಹೊಣೆ ಹೊತ್ತಿದ್ದರಿಂದ, ಈ ಇಲಾಖೆಯು ಪರಿಶಿಷ್ಟ ಜನಾಂಗದವರ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯಿತು. ನಿಮ್ನ ವರ್ಗಗಳ ಆಯುಕ್ತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ; ಆರ್ಥಿಕ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ವಸತಿ ಮೊದಲಾದ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದರು. ರಾಜ್ಯಗಳ ಪುನರ್ವಿಂಗಡಣೆಯ ನಂತರ ಸಮಾಜ ಕಲ್ಯಾಣ ಇಲಾಖೆಯಿಂದಲೇ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯವನ್ನು ನಿರ್ವಹಿಸಲಾಗುತ್ತಿತ್ತು. ೧೯೭೭ರ ಅಕ್ಟೋಬರ್ ತಿಂಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯೂ; ೧೯೯೮ ಡಿಸೆಂಬರ್‌ನ ಆದೇಶದಲ್ಲಿ ಅಲ್ಪ ಸಂಖ್ಯಾತರ ಇಲಾಖೆಯೂ ಮತ್ತು ೧೯೯೯ ರಲ್ಲಿ ಪರಿಶಿಷ್ಟ ವರ್ಗಗಳ ಇಲಾಖೆಯೂ ಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟಿದ್ದರಿಂದ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಮಾತ್ರವೇ ಸೀಮಿತಗೊಂಡಿವೆ.

ಆಯುಕ್ತರು, ಈ ಇಲಾಖೆಯ ಮುಖ್ಯಸ್ಥರಾಗಿದ್ದು ಇವರ ಸಹಾಯಕ್ಕೆ ಮೂರು ಜಂಟಿ ನಿರ್ದೇಶಕರು, ಐದು ಉಪ ನಿರ್ದೇಶಕರು, ಒಬ್ಬರು ಸಹಾಯಕ ನಿರ್ದೇಶಕರು ಮತ್ತು ಒಬ್ಬ ಲೆಕ್ಕಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇಲಾಖೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಾರೆ.

೨೦೦೧ರ ಜನಗಣತಿಯಂತೆ ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ೮೫.೬೪ ಲಕ್ಷವಿರುತ್ತದೆ. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೧೬.೨೦ ಆಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆಯು ೧೧,೧೨,೨೪೩ ಇದ್ದು, ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ೬೭೬೮೯ ಆಗಿದ್ದಿತು. ಇದು, ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇಕಡ ೬.೦೯ ಆಗುತ್ತದೆ. ರಾಜ್ಯದ ಎಲ್ಲ ಪರಿಶಿಷ್ಟ ಜಾತಿಯ ಪ್ರಗತಿಗಾಗಿ ಸರ್ಕಾರವು, ೧೯೫೧ರಿಂದ ೧೯೫೬ರ ವರೆಗಿನ ಮೊದಲನೇ ಯೋಜನಾವಧಿಯಲ್ಲಿ ೧೧೫.೯೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದು, ಈ ಮೊತ್ತವನ್ನು ಹಂತಹಂತವಾಗಿ ಹೆಚ್ಚಿಸುತ್ತ ೨೦೦೨–೨೦೦೭ನೇ ಸಾಲಿನ ಹತ್ತನೇ ಯೋಜನಾವಧಿಯಲ್ಲಿ ೬೦,೨೧೮.೨೭ ಲಕ್ಷ ರೂಪಾಯಿಗಳನ್ನು ಒದಗಿಸಲು ನಿಗದಿಸಿದೆ. ಆಯವ್ಯಯದ ಈ ಮೊತ್ತದಂತೆಯೇ ಇವರಿಗಾಗಿ ಅನುಷ್ಠಾನ ಗೊಳಿಸುತ್ತಿರುವ ಕಾರ್ಯಕ್ರಮಗಳೂ ಬಹಳಷ್ಟು ಹೆಚ್ಚಾಗಿವೆ. ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯಿಂದ ಯೋಜನೆ ಮತ್ತು ಯೋಜನೇತರದಡಿಯ ಎಲ್ಲ ಕಾರ್ಯಕ್ರಮಗಳೂ ಸೇರಿ, ರಾಜ್ಯ ವಲಯದಲ್ಲಿ ೩೧ ಕಾರ್ಯಕ್ರಮಗಳನ್ನೂ, ಜಿಲ್ಲಾ ವಲಯದಲ್ಲಿ ೩೧ ಕಾರ್ಯಕ್ರಮಗಳನ್ನೂ ಒಟ್ಟು ೬೨ ಕಾರ್ಯಕ್ರಮಗಳನ್ನು ಈ ಜಾತಿಯವರ ಶೈಕ್ಷಣಿಕ, ಆರ್ಥಿಕ ಮತ್ತು ಇತರ ರೀತಿಯ ಬೆಳವಣಿಗೆಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಇವಲ್ಲದೆ ಹಲವು ರೀತಿಯ ಉಪಕಾರ್ಯಕ್ರಮಗಳೂ ಜಾರಿಗೊಳ್ಳುತ್ತಿವೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ಐದರಿಂದ ಹತ್ತನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ ನಿಲಯಗಳಲ್ಲಿ ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ ೪೦೦/–ರ ಲೆಕ್ಕದಲ್ಲಿ ಭೋಜನವನ್ನು ಒದಗಿಸುವುದಲ್ಲದೆ, ಉಚಿತ ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ಉಡುಪು, ಹಾಸಿಗೆ, ಹೊದಿಕೆ, ಸೋಪು, ಎಣ್ಣೆ, ವೈದ್ಯಕೀಯ,

ಪುಸ್ತಕ ಭಂಡಾರದ ನೆರವು, ಕ್ರೀಡಾ ಸಾಮಗ್ರಿ ಮತ್ತಿತರ ಅಗತ್ಯಗಳನ್ನು ಪೂರೈಸಲಾಗುತ್ತದೆ. ಜಿಲ್ಲೆಯಲ್ಲಿ ಹತ್ತು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳನ್ನೂ, ಏಳು ಬಾಲಕಿಯರ ನಿಲಯಗಳನ್ನೂ ನಡೆಸಲಾಗುತ್ತಿದ್ದು ಅವುಗಳ ವಿವರಗಳನ್ನು ಕೋಷ್ಟಕ ೧೬.೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧ : ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರ**

| ಕ್ರ. ಸಂ. | ವರ್ಷ | ಮೆಟ್ರಿಕ್ ಪೂರ್ವ ನಿಲಯಗಳ ಸಂಖ್ಯೆ | | | ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ | | | ಆದ ವೆಚ್ಚ ಲಕ್ಷ ರೂ.ಗಳಲ್ಲಿ |
|---|---|---|---|---|---|---|---|---|
| | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | |
| **ಉಡುಪಿ ತಾಲೂಕು** | | | | | | | | |
| ೧ | ೨೦೦೨-೦೩ | ೪ | ೪ | ೮ | ೨೦೦ | ೨೦೩ | ೪೦೩ | ೨೦.೧೫ |
| ೨ | ೨೦೦೩-೦೪ | ೪ | ೪ | ೮ | ೨೦೦ | ೨೦೩ | ೪೦೩ | ೨೨.೧೬ |
| ೩. | ೨೦೦೪-೦೫ | ೪ | ೪ | ೮ | ೨೦೦ | ೨೦೩ | ೪೦೩ | ೨೪.೧೫ |
| **ಕುಂದಾಪುರ ತಾಲೂಕು** | | | | | | | | |
| ೧ | ೨೦೦೨-೦೩ | ೩ | ೧ | ೪ | ೧೬೫ | ೫೦ | ೨೧೫ | ೧೯.೬೭ |
| ೨ | ೨೦೦೩-೦೪ | ೩ | ೧ | ೪ | ೧೬೫ | ೫೦ | ೨೧೫ | ೧೮.೯೧ |
| ೩ | ೨೦೦೪-೦೫ | ೩ | ೧ | ೪ | ೧೬೫ | ೫೦ | ೨೧೫ | ೨೧.೨೮ |
| **ಕಾರ್ಕಳ ತಾಲೂಕು** | | | | | | | | |
| ೧ | ೨೦೦೨-೦೩ | ೩ | ೨ | ೫ | ೭೬ | ೧೨೧ | ೧೯೭ | ೮.೫೩ |
| ೨ | ೨೦೦೩-೦೪ | ೩ | ೨ | ೫ | ೧೦೫ | ೧೨೦ | ೨೨೫ | ೮.೯೭ |
| ೩ | ೨೦೦೪-೦೫ | ೩ | ೨ | ೫ | ೭೫ | ೯೮ | ೧೭೩ | ೯.೬೧ |

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಗ್ರಾಮಾಂತರ ಪ್ರದೇಶಗಳಿಂದ ಬಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲ ಮಾಡಿಕೊಡುವುದಕ್ಕಾಗಿ ಇಲಾಖಾ ವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಈ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ. ಆದರೆ ಈ ಜಿಲ್ಲೆಯಲ್ಲಿ ೨೦೦೨-೨೦೦೫ರ ಅವಧಿಯಲ್ಲಿ ಯಾವುದೇ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗಿಲ್ಲ.

## ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ನಿಯಮಾವಳಿಯನ್ವಯ ಕುಟುಂಬದ ವಾರ್ಷಿಕ ವರಮಾನ ಹತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಎಲ್ಲ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ಅರ್ಹ ವಿದ್ಯಾರ್ಥಿಗಳಿಗೆ ಪೂರ್ಣ ವಿದ್ಯಾರ್ಥಿ ವೇತನವನ್ನು ಹಾಗೂ ಶುಲ್ಕ ಮರು ಪಾವತಿಸುವ ಸಲುವಾಗಿ ನೀಡಲಾಗುತ್ತದೆ. ಈ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳು ಓದುತ್ತಿರುವ ತರಗತಿಯ ಮಟ್ಟಕ್ಕನುಸಾರವಾಗಿ ನಿಗದಿತವಾಗಿರುವ ದರಗಳಲ್ಲಿ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ವಿದ್ಯಾರ್ಥಿ ವೇತನದ ದರಗಳನ್ನು ಕೋಷ್ಟಕ ೧೬.೨ರಲ್ಲಿ ಕೊಡಲಾಗಿದೆ.

## ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪಡೆಯಲು ಅನರ್ಹರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಇಲಾಖೆಯ ಮೂಲಕ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ವಿವಿಧ ವಿದ್ಯಾರ್ಥಿ ವೇತನದ ಮೊತ್ತವನ್ನು ನಿಗದಿಸಲಾಗಿದ್ದು, ತಿಂಗಳಿಗೆ ರೂ. ೪೦/- ರಿಂದ ರೂ. ೭೫/- ರವರೆಗೆ ವಿದ್ಯಾರ್ಥಿಗಳ ತರಗತಿಗಳಿಗನುಸಾರವಾಗಿ ನೀಡಲಾಗುತ್ತದೆ.

**ಕೋಷ್ಟಕ : ೧೬.೨ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ವಿವರಗಳು**

| ಕೋರ್ಸ್‌ಗಳ ವಿವರ | ನಿಲಯಾರ್ಥಿಗಳಲ್ಲದವರಿಗೆ | ನಿಲಯಾರ್ಥಿಗಳಿಗೆ |
|---|---|---|
| ಗ್ರೂಪ್ ೧: ವೈದ್ಯಕೀಯ, ತಾಂತ್ರಿಕ (ಬಿ.ಇ.), ವ್ಯವಸಾಯ(ಬಿ.ಎಸ್.ಸಿ.,ಎಜಿ),ಪಶುವೈದ್ಯ (ಬಿ.ವಿ.ಎಸ್.ಸಿ) ಬಿ.ಡಿ.ಎಸ್. ಮುಂತಾದುವು. | ೩೩೦ | ೭೪೦ |
| ಗ್ರೂಪ್೨: ಮೊದಲನೇ ಗ್ರೂಪ್‌ನಲ್ಲಿ ಸೇರದಿರುವ ವಿಜ್ಞಾನ, ವಾಣಿಜ್ಯ, ಕಲೆ ಮುಂತಾದ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಹಾಗೂ ಇತರ ಡಿಪ್ಲಮೊ ಕೋರ್ಸ್‌ಗಳು ಮುಂತಾದುವು. | ೩೩೦ | ೫೧೦ |
| ಗ್ರೂಪ್ ೩ : ಪದವಿ ಕೋರ್ಸ್‌ಗಳು (ಬಿ.ಎ.,ಬಿ.ಕಾಂ, ಬಿ.ಎಸ್.ಸಿ,ಇತ್ಯಾದಿ)ಮೊದಲ ಮತ್ತು ಎರಡನೇ ವರ್ಷ | ೧೮೫ | ೩೫೫ |
| ಗ್ರೂಪ್ ೪: ಪಿ.ಯು.ಸಿ ಮತ್ತು ಇತರ ಪದವಿ ಕೋರ್ಸ್‌ಗಳ ಮೊದಲನೇ ವರ್ಷ. | ೧೪೦ | ೨೩೫ |

## ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಚರ್ಮ ಹದ ಮಾಡುವ, ಚರ್ಮ ಸುಲಿಯುವ ಮತ್ತಿತರ ಬಗೆಯ ಅನೈರ್ಮಲ್ಯ ಕಸುಬುಗಳನ್ನು ಮಾಡುವವರ ಮಕ್ಕಳೂ, ಉತ್ತಮ ವಿದ್ಯಾಭ್ಯಾಸವನ್ನು ಹೊಂದಲು ಮತ್ತು ವಿದ್ಯೆ ಪಡೆಯುವಲ್ಲಿ ಅವರಿಗೆ ಆರ್ಥಿಕವಾಗಿ ನೆರವಾಗಲು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ ನೀಡಲಾಗುತ್ತದೆ. ಇಲಾಖೆಯ ನಿಲಯಾರ್ಥಿಗಳಲ್ಲದವರಿಗೆ, ಒಂದರಿಂದ ಐದನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ೪೦/- ರೂಪಾಯಿಯಂತೆ; ಆರರಿಂದ ಎಂಟನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ೬೦/- ರೂಪಾಯಿಯಂತೆ; ಒಂಬತ್ತರಿಂದ ಹತ್ತನೇ ತರಗತಿಯಲ್ಲಿ ಇರುವವರಿಗೆ ತಿಂಗಳಿಗೆ ೬೦/- ರೂಪಾಯಿಯಂತೆ ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ನಿಲಯಾರ್ಥಿಗಳಾಗಿದ್ದರೆ ಮೂರನೇ ತರಗತಿಯಿಂದ ಎಂಟನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ೩೦೦/- ರೂಪಾಯಿಯಂತೆ; ಒಂಬತ್ತನೇ ತರಗತಿಯಿಂದ ಹತ್ತನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ೩೭೫/- ರೂಪಾಯಿಯಂತೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ಆದರೆ ಈ ಉಡುಪಿ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಅನುದಾನ ಬಿಡುಗಡೆಯಾಗದ ಕಾರಣ ಈ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗಿರುವುದಿಲ್ಲ.

## ಪುರಸ್ಕಾರ ಬಹುಮಾನ ಹಣ

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ, ಆಯಾ ತರಗತಿಗಳಿಗೆ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ಬಹುಮಾನವನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಉತ್ಸಾಹ ಹೆಚ್ಚಿಸಲು ಮತ್ತು ಚೆನ್ನಾಗಿ ಓದುವವರಿಗೆ ಉತ್ತೇಜನ ನೀಡಿ ಓದು ಮುಂದುವರಿಸುವಲ್ಲಿ ಆಸಕ್ತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಕಾರವು ನಿಗದಿಸಿರುವ ಬಹುಮಾನದ ದರಗಳನ್ನು ಕೆಳಗಿನ ಕೋಷ್ಟಕ–೧೬.೩ರಲ್ಲೂ, ಈ ಕಾರ್ಯಕ್ರಮದಡಿ ಜಿಲ್ಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನ ವಿವರಗಳನ್ನು ಕೋಷ್ಟಕ – ೧೬.೪ ರಲ್ಲೂ ನೀಡಲಾಗಿದೆ.

## ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಚಿಕ್ಕ ವಯಸ್ಸಿನಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸ, ಅಕ್ಷರಾಭ್ಯಾಸ ಮತ್ತು ಕ್ರಮಬದ್ಧವಾಗಿ ಸರಿಯಾದ ಸಮಯಕ್ಕೆ ಆಹಾರ ಸೇವಿಸುವ ಅಭ್ಯಾಸಗಳನ್ನು ರೂಢಿಸಲು, ನರ್ಸರಿ ಮತ್ತು ಮಹಿಳಾ

**ಕೋಷ್ಟಕ ೧೬.೩ : ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಕಾರ ನಿಗದಿಸಿರುವ ಬಹುಮಾನ ದರ**

| ಕ್ರ.ಸಂ. | ಪರೀಕ್ಷೆಗಳ ವಿವರ | ನಿಗದಿತ ಬಹುಮಾನದ ಮೊತ್ತ ರೂ.ಗಳಲ್ಲಿ |
|---|---|---|
| ೧ | ಎಸ್.ಎಸ್.ಎಲ್.ಸಿ. | ೫೦೦/- |
| ೨ | ಎರಡನೇ ಪಿ.ಯು.ಸಿ / ಮೂರು ವರ್ಷದ ಡಿಪ್ಲೊಮಾ | ೭೫೦/- |
| ೩ | ಪದವಿಗಳು | ೧೦೦೦/- |
| ೪ | ಸ್ನಾತಕೋತ್ತರ ಪದವಿಗಳು | ೧೨೫೦/- |
| ೫ | ವೈದ್ಯಕೀಯ | ೧೫೦೦/- |
| ೬ | ತಾಂತ್ರಿಕ ಪದವಿ | ೧೫೦೦/- |
| ೭ | ವ್ಯವಸಾಯ ಮತ್ತು ಪಶುವೈದ್ಯ ಪದವಿ | ೧೫೦೦/- |

**ಕೋಷ್ಟಕ ೧೬.೪ : ಜಿಲ್ಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನ ವಿವರ**

| ಕ್ರ.ಸಂ. | ತಾಲೂಕು | ನಿಗದಿತ ಬಹುಮಾನದ ಮೊತ್ತ | ಖರ್ಚಿನ ಮೊತ್ತ | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧ | ಉಡುಪಿ | ರೂ. ೫೦೦/- | ೨೩,೦೦೦/- | ೪೬ |
| ೨ | ಕುಂದಾಪುರ | ರೂ. ೫೦೦/- | ೭೦೦೦/- | ೧೪ |
| ೩ | ಕಾರ್ಕಳ | ರೂ. ೫೦೦/- | ೨೦೦೦/- | ೦೪ |

ಕಲ್ಯಾಣ ಕೇಂದ್ರಗಳನ್ನು ಇಲಾಖೆಯು ನಡೆಸುತ್ತಿದೆ. ಈ ಕೆಂದ್ರಗಳಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ನೀಡಲಾಗುತ್ತದೆ. ಅಲ್ಲದೆ ಪ್ರತೀ ಮಧ್ಯಾಹ್ನ ಉಪಾಹಾರವನ್ನೂ, ವರ್ಷಕ್ಕೆ ಎರಡು ಜೊತೆ ಉಡುಪು, ಸೋಪು ಮತ್ತು ಎಣ್ಣೆಗಳನ್ನು ಮಕ್ಕಳ ಬಳಕೆಗೆ ಉಚಿತವಾಗಿ ನೀಡಲಾಗುತ್ತದೆ. ಈ ಜಿಲ್ಲೆಯ ಉಡುಪಿಯಲ್ಲಿರುವ ಈ ಕೇಂದ್ರಗಳ ಮಕ್ಕಳಿಗಾಗಿ ೨೦೦೨-೦೩ನೇ ಸಾಲಿನಲ್ಲಿ ೫.೩೦ ಲಕ್ಷ ರೂ.ಗಳನ್ನೂ; ೨೦೦೩-೦೪ನೇ ಸಾಲಿನಲ್ಲಿ ಆರು ಲಕ್ಷ ರೂ.ಗಳನ್ನೂ; ೨೦೦೪-೦೫ನೇ ಸಾಲಿನಲ್ಲಿ ಆರೂವರೆ ಲಕ್ಷ ರೂ.ಗಳನ್ನೂ ಖರ್ಚು ಮಾಡಲಾಗಿದೆ.

## ಶೈಕ್ಷಣಿಕ ಪ್ರವಾಸಕ್ಕೆ ನೆರವು

ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದು, ಆರ್ಥಿಕ ಅನುಕೂಲವಿಲ್ಲದ ಕಾರಣಕ್ಕೆ, ಈ ಪ್ರವಾಸದಿಂದ ದೊರೆಯುವ ಅನುಭವ ಮತ್ತು ಜ್ಞಾನಗಳನ್ನು ಪಡೆಯದೇ ಉಳಿಯುವಂತಾಗಬಾರದೆಂಬ ದೃಷ್ಟಿಯಿಂದ, ತಾಂತ್ರಿಕ ಮತ್ತು ಇತರ ವೃತ್ತಿ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ, ಪ್ರವಾಸ ಕಡ್ಡಾಯವಾಗಿದ್ದರೆ, ಸಾವಿರ ರೂಪಾಯಿಗಳಿಗೆ ಮೀರದಂತೆ ಈ ಕಾರ್ಯಕ್ರಮದಡಿ ಅಧ್ಯಯನ ಪ್ರವಾಸ ವೆಚ್ಚವೆಂದು ಮಂಜೂರು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮದಡಿ ಯಾರೂ ಪ್ರಯೋಜನ ಪಡೆದಿರುವುದಿಲ್ಲ.

## ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಾಮಗ್ರಿಗಳನ್ನು ಒದಗಿಸುವುದು

ತಾಂತ್ರಿಕ ತರಗತಿಗಳಲ್ಲಿ ಓದುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅಗತ್ಯ ಸಾಧನೆ -ಸಾಮಗ್ರಿಗಳನ್ನು ಕೊಂಡುಕೊಳ್ಳುವುದರಲ್ಲಿ ಆಗಬಹುದಾದ ಸಮಸ್ಯೆಗಳನ್ನು ತಪ್ಪಿಸಲು ಮತ್ತು ನಿರಾಳವಾಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು, ಡ್ರಾಯಿಂಗ್ ಬೋರ್ಡ್, ಕ್ಯಾಲ್ಕುಲೇಟರ್ ಮುಂತಾಗಿ ಅವರ ಓದಿಗೆ ಅವಶ್ಯಕವಾದ ಪರಿಕರಗಳನ್ನು ರೂಪಾಯಿ ೭೦೦/- ರ ಮಿತಿಗೆ ಒಳಪಟ್ಟು ಸರಬರಾಜು ಮಾಡುವ ಕಾರ್ಯಕ್ರಮವೂ ಈ ಇಲಾಖೆಯಲ್ಲಿದೆ.

**ಕಾನೂನು ಪದವೀಧರರಿಗೆ ಶಿಷ್ಯವೇತನ ಹಾಗೂ ವಕೀಲ ವೃತ್ತಿ ಆರಂಭಿಸಲು ಧನ ಸಹಾಯ**

ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ಹೆಚ್ಚಿನ ಜ್ಞಾನ ಹೊಂದುವಂತೆ ಮಾಡಲು, ಪ್ರತೀ ಮಾಸಿಕ ಒಂದು ಸಾವಿರ ರೂ.ಗಳಂತೆ ಶಿಷ್ಯವೇತನವನ್ನು ನೀಡಿ, ನಾಲ್ಕು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸುವುದಕ್ಕೆ ಮತ್ತು ಈ ಸಂಬಂಧ ವಕೀಲರ ಸಂಘದಲ್ಲಿ ಹೆಸರು ನೊಂದಾಯಿಸಿಕೊಳ್ಳಲು, ಕಾನೂನು ಗ್ರಂಥಗಳನ್ನು ಕೊಳ್ಳಲು ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಒಂದು ಸಲ ಐದು ಸಾವಿರ ರೂಪಾಯಿಗಳ ಸಹಾಯ ಧನ ನೀಡುವ ಕಾರ್ಯಕ್ರಮವೂ ಜಾರಿಯಲ್ಲಿದೆ.

**ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು**

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ, ಅವರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಜಿಲ್ಲಾ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋ ರಿಕ್ಷಾ ಚಾಲನೆ ಕಲಿಸಲು ಮೂರು ತಿಂಗಳ ತರಬೇತಿ ಕೊಡಿಸಿ, ಅವರಿಗೆ ವಾಹನ ಪರವಾನಗಿಯನ್ನೂ ಕೊಡಿಸಲಾಗುವುದು. ಅಲ್ಲದೆ ತರಬೇತಿಯ ಅವಧಿಯಲ್ಲಿ, ನಗರದವರಿಗೆ ರೂ.೧೫೦2-ರಂತೆ ಹಾಗೂ ಗ್ರಾಮವಾಸಿಗಳಿಗೆ ರೂ.೩೦೦2-ರಂತೆ ಶಿಷ್ಯ ವೇತನವನ್ನೂ ಕೊಡಲಾಗುವುದು. ಜಿಲ್ಲೆಯ ಪ್ರಾದೇಶಿಕ ಅಧಿಕಾರಿಗಳು ನಿಗದಿ ಪಡಿಸುವ ದರಗಳಲ್ಲಿ ತರಬೇತಿ ಶುಲ್ಕವನ್ನು ತರಬೇತಿ ನೀಡಿದ ಡ್ರೈವಿಂಗ್ ಶಾಲೆಗಳಿಗೆ ಇಲಾಖೆಯು ನೀಡುತ್ತದೆ.

ಮೇಲಿನವಲ್ಲದೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಇತರ ಸಾಮಾನ್ಯ ವಿಷಯಗಳ ಬಗ್ಗೆ ಅಂಶಕಾಲಿಕ ಬೋಧಕರನ್ನು ನೇಮಿಸಿ ವಿಶೇಷ ಬೋಧನೆ; ಎಂ.ಫಿಲ್ ಹಾಗೂ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಪ್ ನೀಡುವ ಕಾರ್ಯಕ್ರಮ; ಲೋಕಸೇವಾ ಆಯೋಗಗಳು ಮತ್ತು ಇತರ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ, ಐ.ಎ.ಎಸ್/ಐ.ಪಿ.ಎಸ್ ಪರೀಕ್ಷೆಗಳಿಗೆ ಹಾಜರಾಗ ಬಯಸುವ ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಗೆಲ್ಲುವ ಮಟ್ಟಕ್ಕೆ ಕೊಂಡೊಯ್ಯಲು, ಪೂರ್ವ ತರಬೇತಿ ನೀಡುವ ಪರೀಕ್ಷಾ ತರಬೇತಿ ಕೇಂದ್ರಗಳು; ವೈದ್ಯಕೀಯ, ತಾಂತ್ರಿಕ, ಪಶುವೈದ್ಯ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುಸ್ತಕ ಭಂಡಾರಗಳು; ಮೂರು ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ಪುಸ್ತಕ ಖರೀದಿಗಾಗಿ ಹಣ ಪೂರೈಕೆ; ಬೆಳಗಾಂ ಸೈನಿಕ ಶಾಲೆಗೆ ಸೇರಿಸಲು ಅರ್ಹ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ: ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್; ಸ್ವಯಂ ಉದ್ಯೋಗ ಕೈಗೊಳ್ಳುವ ಸಾಮರ್ಥ್ಯ ಬೆಳೆಸಲು ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು; ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ; ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ: ಕಾನೂನು ಪದವೀಧರರಿಗೆ ಶಿಷ್ಯವೇತನ ಮತ್ತು ವಕೀಲಿ ವೃತ್ತಿ ಆರಂಭಿಸಲು ಧನ ಸಹಾಯ; ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಧನಸಹಾಯ; ನವಚೇತನ ಯೋಜನೆ; ದೌರ್ಜನ್ಯಕ್ಕೆ ಒಳಗಾದವರಿಗೆ ಧನ ಸಹಾಯ; ಮುಂತಾದ ಕಾರ್ಯಕ್ರಮಗಳನ್ನೂ ಸಹ ಪರಿಶಿಷ್ಟ ಜನಾಂಗದವರ ಬೆಳವಣಿಗೆಗಾಗಿ ಇಲಾಖೆಯಿಂದ ಕಾರ್ಯಗತಗೊಳಿಸಲಾಗುತ್ತಿದೆ.

**ವಿಶೇಷ ಘಟಕ ಯೋಜನೆ**

ಪರಿಶಿಷ್ಟ ಜನಾಂಗದವರ ಸಾಮಾಜಿಕ, ಆರ್ಥಿಕ ಮತ್ತು ಇತರ ಸರ್ವ ರೀತಿಯ ಬೆಳವಣಿಗೆಗಾಗಿ ಈ ಯೋಜನೆಯನ್ನು ರೂಪಿಸಲಾಗಿದೆ. ಸುಮಾರು ೩೯ ಅಭಿವೃದ್ಧಿ ಇಲಾಖೆಗಳು/ನಿಗಮಗಳು ತಮ್ಮ ಯೋಜನಾ ಆಯವ್ಯಯದ ಶೇಕಡ ೧೫ನ್ನು ಈ ಯೋಜನೆಗೆ ವಿನಿಯೋಗಿಸಬೇಕಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಕುಟುಂಬಗಳಿಗೆ ಕುಡಿಯುವ ನೀರಿನ ಪೂರೈಕೆ, ವಿದ್ಯುದೀಕರಣ, ವಸತಿ, ಸಂಪರ್ಕ ರಸ್ತೆಗಳು ಇವೇ ಮುಂತಾದ ಅತ್ಯಗತ್ಯ ಮೂಲಭೂತ ಸೌಲಭ್ಯಗಳನ್ನು ಈ ವಿಶೇಷ

ಘಟಕ ಯೋಜನೆಯಡಿ ಒದಗಿಸಿಕೊಡಲಾಗುತ್ತದೆ. ಈ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯನ್ನು ೧೯೭೯ರಿಂದ ಆರಂಭಿಸಲಾಗಿದೆ. ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ, ಸಾರಿಗೆ ಸಂಪರ್ಕ ಇಲಾಖೆಗಳು ಈ ಜಿಲ್ಲೆಯ ವಿಶೇಷ ಘಟಕ ಯೋಜನೆಗೆ ಸಹಕರಿಸಿವೆ. ತೋಟಗಾರಿಕೆ ಇಲಾಖೆಯ ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ಅಥವಾ ಹಣ್ಣಿನ ತೋಟದ ಅಭಿವೃದ್ಧಿಗೆಂದು ೨೭೦೦/– ರೂ.ಗಳನ್ನೂ, ಎರಡು ವರ್ಷಗಳ ನಿರ್ವಹಣಾ ವೆಚ್ಚವನ್ನೂ ಮತ್ತು ಕಾಲುವೆ ಬದಿಯಲ್ಲಿ ತೆಂಗಿನ ಸಸಿಗಳನ್ನು ನೆಡಿಸಲು ಕೃಷಿ ಕಾರ್ಮಿಕರಿಗೆ ಸಹಾಯವನ್ನೂ ನೀಡಲಾಗುತ್ತದೆ. ಅಲ್ಲದೆ ಇವುಗಳ ಇಳುವರಿಯನ್ನು ಕೂಡ ಫಲಾನುಭವಿಗಳಿಗೇ ನೀಡಲಾಗುತ್ತದೆ. ತೋಟಗಾರಿಕೆಗೆ ಅಗತ್ಯವಾಗಿ ಬೇಕಾದ ಸಿಂಪಡಿಕೆ ಸಾಧನಗಳನ್ನು ಸಹ ಒದಗಿಸಲಾಗುವುದು. ಪಶು ಸಂಗೋಪನೆ ಇಲಾಖೆಯ ಫಲಾನುಭವಿಗಳಿಗೆ ಒಂದು ಜೊತೆ ಕರೆಯುವ ಹಸು ಮತ್ತು ಎಮ್ಮೆ, ಕುರಿ ಘಟಕ ಅಥವಾ ಹಂದಿ ಘಟಕಗಳನ್ನು ಸಾಲದ ರೂಪದಲ್ಲಿ ನಬಾರ್ಡ್ ನಿಯಮಗಳಿಗನುಸಾರ ಇಲಾಖೆಯಿಂದ ಒದಗಿಸಲಾಗುತ್ತದೆ. ಪಶುಗಳು ಖರೀದಿ, ಅವುಗಳ ಆಹಾರ, ವಿಮೆ, ವೈದ್ಯಕೀಯ ಸೇವೆ, ಶೆಡ್ಡಿನ ನಿರ್ಮಾಣ ವೆಚ್ಚ, – ಇವುಗಳನ್ನೂ ಇದು ಒಳಗೊಂಡಿರುತ್ತದೆ.

## ಕೃಷಿ ಕಾಲೋನಿಗಳು

ಪರಿಶಿಷ್ಟ ಜಾತಿಯವರಿಗಾಗಿ ಕೃಷಿ ಕಾಲೊನಿಗಳನ್ನು ಈ ಹಿಂದೆ ಕಟ್ಟಿಸಿ ಕೊಡಲಾಗಿದೆ. ಕುಂದಾಪುರ ತಾಲೂಕಿನಲ್ಲಿ ಇಂಥ ಕೃಷಿ ಕಾಲೋನಿಗಳಿವೆ. ಈ ಕಾಲೊನಿಗಳಿಗೆ ಗಂಗಾ ಕಲ್ಯಾಣ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಾಗಿದ್ದು, ಈ ಕುರಿತಾದ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೫ : ಗಂಗಾ ಕಲ್ಯಾಣ ನೀರಾವರಿ ಸೌಲಭ್ಯ ವಿವರ**

| ವರ್ಷ | ಕಾಲೋನಿಯ ಹೆಸರು | ಕುಟುಂಬಗಳ ಸಂಖ್ಯೆ | ಒದಗಿಸಲಾದ ಸೌಕರ್ಯ | ವೆಚ್ಚ (ಲಕ್ಷ ರೂಪಾಯಿಗಳಲ್ಲಿ) |
|---|---|---|---|---|
| ೨೦೦೨–೦೩ | ಬಿದಲಡಿ | ೩೫ | ಗಂಗಾ ಕಲ್ಯಾಣ ನೀರಾವರಿ | ೪.೦೦ |
| ೨೦೦೩–೦೪ | ಹಳ್ಗಾಮು | ೪೬ | ಅದೇ | ೪.೫೦ |
| ೨೦೦೪–೦೫ | ಕೊಡ್ರಬೈಲೂರು | ೪೦ | ಅದೇ | ೨.೦೦ |

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿಗಮದ ಚಟುವಟಿಕೆಗಳು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆರ್ಥಿಕ ಪ್ರಗತಿಯ ಉದ್ದೇಶದಿಂದ ಕರ್ನಾಟಕ ಸರ್ಕಾರವು ೧೯೭೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿಗಮವನ್ನು ಸ್ಥಾಪಿಸಿದೆ. ಈ ನಿಗಮವು ಮುಂದೆ ತಿಳಿಸಿರುವ ಯೋಜನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಅನುಷ್ಠಾನಗೊಳಿಸುತ್ತಿದೆ: ೧) ಸ್ವಯಂ ಉದ್ಯೋಗ ಯೋಜನೆ, ೨) ಭೂ ಒಡೆತನ ಯೋಜನೆ, ೪) ನೇರ ಸಾಲ ಯೋಜನೆ (ಎಸ್.ಎಸ್.ಎಫ್.ಡಿ.ಸಿ), ೫) ಹೈನುಗಾರಿಕೆ ಯೋಜನೆ, ೬) ಮೈಕ್ರೋ ಕ್ರೆಡಿಟ್ ಯೋಜನೆ, ೭) ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ, ೮) ಗಂಗಾ ಕಲ್ಯಾಣ ಯೋಜನೆ ಮತ್ತು ೯) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ, ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆ ಮತ್ತು ಏತ ನೀರಾವರಿ ಯೋಜನೆ.

## ಸ್ವಯಂ ಉದ್ಯೋಗ ಯೋಜನೆ

ಈ ಕಾರ್ಯಕ್ರಮದಡಿ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ, ಯೋಜನಾ ವೆಚ್ಚ ರೂ. ಒಂದು ಲಕ್ಷದೊಳಗಿನ ಘಟಕಗಳಿಗೆ ಬ್ಯಾಂಕ್ ಮೂಲಕ ಆರ್ಥಿಕ ಸೌಲಭ್ಯವನ್ನು ಒದಗಿಸುತ್ತಿದ್ದು,

ರೂ. ೫೦,೦೦೦/– ದ ವರೆಗಿನ ಸಾಲ ಸೌಲಭ್ಯವನ್ನು (ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ) ನೀಡಲಾಗುತ್ತದೆ. ಈ ನಿಗಮದಿಂದ ಮಂಜೂರಾದ ಸಾಲದಲ್ಲಿ ಶೇಕಡ ಐವತ್ತು ಭಾಗ (ಗರಿಷ್ಟ ರೂ. ೧೦,೦೦೦/–) ವನ್ನು ಸಹಾಯಧನವಾಗಿಯೂ ಉಳಿದ ಭಾಗವನ್ನು ಬ್ಯಾಂಕುಗಳಿಂದ ಸಾಲವಾಗಿಯೂ ಮಂಜೂರು ಮಾಡಿಸಲಾಗುವುದು.

### ಭೂ ಒಡೆತನ ಯೋಜನೆ

ಭೂ ರಹಿತ ಪರಿಶಿಷ್ಟ ಜಾತಿ, ವರ್ಗಗಳ ಕೃಷಿ ಕಾರ್ಮಿಕರಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನು ಕೊಳ್ಳಲು, ಗರಿಷ್ಟ ರೂ.೬೦,೦೦೦ ಗಳನ್ನು ಈ ಯೋಜನೆಯಡಿ ಘಟಕ ವೆಚ್ಚವಾಗಿ ಮಂಜೂರು ಮಾಡಲಾಗುವುದು. ಇದರಲ್ಲಿ ಶೇ.೫೦ ಹಣವನ್ನು ಸಾಲವಾಗಿಯೂ, ಉಳಿದ ಶೇ.೫೦ ಹಣವನ್ನು ಸಹಾಯ ಧನವಾಗಿಯೂ ಕೊಡಲಾಗುತ್ತದೆ. ಸಾಲವನ್ನು ಹತ್ತು ವರ್ಷಗಳಲ್ಲಿ ವಾರ್ಷಿಕ ಸಮಕಂತುಗಳಲ್ಲಿ ಶೇಕಡ ಆರರ ಬಡ್ಡಿ ದರದಲ್ಲಿ ಮರುಪಾವತಿ ಮಾಡಬೇಕಾಗುತ್ತದೆ.

### ಮೈಕ್ರೋ ಕ್ರೆಡಿಟ್ ಯೋಜನೆ

ಎನ್.ಎಫ್.ಡಿ.ಸಿ. ಸಹಯೋಗದೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ. ಸ್ತ್ರೀ ಶಕ್ತಿ ಯೋಜನೆಯಡಿ ರಚಿಸಿದ ಗುಂಪುಗಳಿಗೆ ಸಾಲವನ್ನು, ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಗಳಿಂದ ಸಹಾಯಧನ ಪಡೆದು ಜಾರಿಗೆ ತರಲಾಗುತ್ತಿದೆ. ಮಹಿಳಾ ಸಮೃದ್ಧಿ ಯೋಜನೆಯಡಿ ಹಣ ಬಿಡುಗಡೆಯಾದಲ್ಲಿ ಸದರಿ ಹಣವನ್ನು ಪೂರ್ತಿಯಾಗಿ ಮಹಿಳೆಯರಿಗೋಸ್ಕರವೇ ವಿನಿಯೋಗಿಸ ಲಾಗುವುದು. ಇದರಲ್ಲಿ ಗರಿಷ್ಟ ರೂ.೧೫,೦೦೦/– ಗಳ ಅವಧಿ ಸಾಲವನ್ನು ಮಂಜೂರು ಮಾಡಲಾಗುತ್ತದೆ.

### ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ

ಸಫಾಯಿ ಕರ್ಮಚಾರಿಗಳ ಅವಲಂಬಿತರಿಗೆ ರೂ.೫೦,೦೦೦ ಗಳನ್ನು ಘಟಕ ವೆಚ್ಚದಲ್ಲಿ (ಶೇ.೫೦ ಭಾಗ), (೧೦,೦೦೦ ಗರಿಷ್ಠ) ಸಹಾಯ ಧನ ಶೇ.೧೫ (ಗರಿಷ್ಠ ರೂ.೭೫೦೦) ಅವಧಿ ಸಾಲವನ್ನು ಕೊಟ್ಟು ಉಳಿದ ಭಾಗವನ್ನು ಬ್ಯಾಂಕಿನಿಂದ ಸಾಲವಾಗಿ ದೊರಕಿಸುವ ವ್ಯವಸ್ಥೆ ಮಾಡಲಾಗುತ್ತದೆ.

### ಗಂಗಾ ಕಲ್ಯಾಣ ಯೋಜನೆ

ಈ ಯೋಜನೆಯಡಿ ಪರಿಶಿಷ್ಟ ಜಾತಿ ಅಥವಾ ವರ್ಗಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರ ಗುಂಪು ಜಮೀನಿಗೆ ಉಚಿತವಾಗಿ ಸಾಮೂಹಿಕ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಫಲಾಪೇಕ್ಷಿಗಳಿಗೆ ಎಂಟು ಎಕರೆ ಜಮೀನು ಒಂದೇ ಕಡೆ ಇದ್ದಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದು ಪಂಪ್ ಅಳವಡಿಸಿ ವಿದ್ಯುದೀಕರಣ ಮಾಡಲಾಗುತ್ತದೆ. ಹದಿನೈದು ಎಕರೆ ಇದ್ದಲ್ಲಿ ಮೂರು ಕೊಳವೆ ಬಾವಿ ಕೊರೆಸಿ ವಿದ್ಯುದೀಕರಣ ಮಾಡಲಾಗುತ್ತದೆ.

### (ಅ) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಈ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ.೭೫,೦೦೦/– ವೆಚ್ಚದಲ್ಲಿ ಕೊಳವೆ ಬಾವಿಯನ್ನು ಕೊರೆಸಿಕೊಡಲಾಗುತ್ತದೆ. ಇದರಲ್ಲಿ ರೂ.೬೫,೦೦೦/– ಗಳನ್ನು ಸಹಾಯಧನವನ್ನಾಗಿಯೂ ರೂ.೧೦,೦೦೦/– ವನ್ನು ಸಾಲವಾಗಿಯೂ ನೀಡಲಾಗುತ್ತದೆ.

### (ಆ) ಸಾಮೂಹಿಕ ನೀರಾವರಿ ಯೋಜನೆ

ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರ ಗುಂಪು ಜಮೀನಿಗೆ ನೀರಾವರಿ ಒದಗಿಸುವ ಉದ್ದೇಶದಿಂದ ೧೯೮೬ರ ಜನವರಿಯಿಂದ, ಗಂಗಾ ಕಲ್ಯಾಣ ಸಾಮೂಹಿಕ ನೀರಾವರಿ ಯೋಜನೆಯನ್ನು ಜಾರಿಗೆ ತಂದಿದೆ. ಇದರಡಿಯಲ್ಲಿ ಎಂಟರಿಂದ ಹದಿನೈದು ಎಕರೆ ಗುಂಪು

ಜಮೀನನ್ನು ಗುರುತಿಸಿ ಎರಡು ಅಥವಾ ಮೂರು ಕೊಳವೆ ಬಾವಿಗಳನ್ನು ಕೊರೆದು ನೀರಾವರಿ ಒದಗಿಸಲಾಗುತ್ತದೆ. ಎಂಟು ಎಕರೆ ಘಟಕಕ್ಕೆ ರೂ.೨.೫೩ ಲಕ್ಷ ಹಾಗೂ ಹದಿನೈದು ಎಕರೆ ಘಟಕಕ್ಕೆ ರೂ.೩.೪೯ ಲಕ್ಷ ವೆಚ್ಚ ನಿಗದಿಸಲಾಗಿದೆ. ಈ ವೆಚ್ಚದಲ್ಲಿ, ಕೊಳವೆ ಬಾವಿ ಕೊರೆಯುವುದು, ಪಂಪ್‌ಸೆಟ್ ಅಳವಡಿಸುವುದು, ವಿದ್ಯುದೀಕರಣ, ಪೈಪ್‌ಲೈನ್ ಅಳವಡಿಸುವುದು, ಮತ್ತು ನೀರು ಶೇಖರಣೆಗೆ ತೊಟ್ಟಿ ಕಟ್ಟುವುದೂ ಸೇರಿರುತ್ತದೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ

ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ, ೧೯೯೯ಕ್ಕೆ ಮೊದಲು, ಪರಿಶಿಷ್ಟ ವರ್ಗದವರ ಸರ್ವತೋಮುಖ ಪ್ರಗತಿಗಾಗಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿತ್ತು. ರಾಜ್ಯದಲ್ಲಿ ೧೯೭೧ರಲ್ಲಿ ಕೈಗೊಂಡ ಜನಗಣತಿ ಪ್ರಕಾರ, ಮೂಲನಿವಾಸಿ ಪಂಗಡಗಳು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ದಕ್ಷಿಣ ಕನ್ನಡ, ಮೈಸೂರು, (ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳು ರಚನೆಯಾಗುವ ಮೊದಲು) ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಐದು ಸುಸಂಘಟಿತ ಯೋಜನಾ ಘಟಕಗಳು ಸ್ಥಾಪನೆಗೊಂಡು ಮೂಲನಿವಾಸಿಗಳ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಪ್ರಸ್ತುತವೂ ರಾಜ್ಯದ ಇದೇ ಐದು ಜಿಲ್ಲೆಗಳಲ್ಲಿ ಅಂದರೆ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಮೈಸೂರು(ಚಾಮರಾಜನಗರವೂ ಸೇರಿಕೊಂಡು) ಜಿಲ್ಲೆಗಳಲ್ಲಿ (ಐಟಿಡಿಪಿ) ಸಂಯೋಜಿತ ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಾಯಕ ಹಾಗೂ ಇದರ ತತ್ಸಮಾನ ಪಂಗಡಗಳಾದ ಬೇಡ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಯಾದ ಮೇಲೆ, ಈ ಪಂಗಡದವರು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸಿಸುತ್ತಿರುವುದರಿಂದ, ಗಿರಿಜನ ಉಪಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸುವಂತೆ, ೧೯೯೩ರಲ್ಲಿ ಸರ್ಕಾರವು ನಿರ್ದೇಶನವನ್ನು ನೀಡಿತು. ದಿನಾಂಕ ೩೦.೮.೧೯೯೪ರ ಆದೇಶದಲ್ಲಿ, ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿತು. ಅದರಂತೆ ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವು, ೧೯೯೯ರ ಜನವರಿಯಲ್ಲಿ ದಾವಣಗೆರೆಯಲ್ಲಿ ಪ್ರಾರಂಭಗೊಂಡು, ೧೯೯೯ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿದೆ.

ರಾಜ್ಯದ ಒಟ್ಟು ಜನಸಂಖ್ಯೆ, ೨೦೦೧ರ ಜನಗಣತಿ ಪ್ರಕಾರ ೫,೨೮,೫೦,೫೬೨ ಇರುತ್ತದೆ. ೨೦೦೧ರ ಜನಗಣತಿಯನ್ವಯ ಪರಿಶಿಷ್ಟ ವರ್ಗದ ಜನಸಂಖ್ಯೆ ೩೪,೬೩,೯೮೬ ಆಗಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೬.೫೫ರಷ್ಟನ್ನು ಪ್ರತಿನಿಧಿಸುತ್ತದೆ. ರಾಜ್ಯದ ಪರಿಶಿಷ್ಟ ವರ್ಗಗಳ ಜನಸಂಖ್ಯೆಯು ದೇಶದಲ್ಲಿರುವ ಪರಿಶಿಷ್ಟ ವರ್ಗಗಳ ಒಟ್ಟು ಜನಸಂಖ್ಯೆಯ ಶೇಕಡ ೪.೧೧ರಷ್ಟಿದೆ. ಜನವರಿ ೨೦೦೩ರಲ್ಲಿ, 'ಸಿದ್ದಿ' ಬುಡಕಟ್ಟು ಜನಾಂಗವನ್ನು; 'ಮೇದ' ಜನಾಂಗದ ಮೂರು ಪರ್ಯಾಯ ಪದಗಳಾದ ಮೇದಾರಿ, ಬುರುಡ್ ಮತ್ತು ಗೌರಿಗ'; ಮತ್ತು ಪಾನ್ಸೆಪರ್ದಿ(ಹರನ್‌ಶಿಕಾರಿ) ಬುಡಕಟ್ಟುಗಳನ್ನು, ಭಾರತ ಸರ್ಕಾರದಿಂದ, ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳಿಸಲ್ಪಟ್ಟ ಮೇಲೆ, ಕರ್ನಾಟಕದಲ್ಲಿ ಪರಿಶಿಷ್ಟ ವರ್ಗಗಳ ಜನಸಂಖ್ಯೆಯು ೩೭ ಲಕ್ಷಕ್ಕೂ ಹೆಚ್ಚಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ವರ್ಗಕ್ಕೆ ನಿಗದಿಸಿರುವ ಮೀಸಲಾತಿಯ ಪ್ರಮಾಣವು ಶೇಕಡ ಮೂರು ಆಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆ ೧೧,೧೨,೨೪೩ ಇದ್ದು, ಇದರಲ್ಲಿ ೪೧೬೧೩ ಅಂದರೆ ಶೇಕಡ ೩.೭೪ರಷ್ಟು ಪರಿಶಿಷ್ಟ ವರ್ಗಗದವರಾಗಿರುತ್ತಾರೆ. ೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟ ವರ್ಗದ ಗಂಡಸರ ಸಾಕ್ಷರತೆ ಮಟ್ಟ ೭೬.೭ರಷ್ಟೂ, ಹೆಂಗಸರ ಸಾಕ್ಷರತೆ ಮಟ್ಟ ೬೨.೮ರಷ್ಟೂ ಇದ್ದು, ಇವರ ಸಾಕ್ಷರತೆಯು ಜಿಲ್ಲೆಯಲ್ಲಿ ಒಟ್ಟು ೬೯.೬ ಇರುತ್ತದೆಂದು ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಕೆಳಕಂಡ ಐವತ್ತು ವಿವಿಧ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ವರ್ಗಗಳೆಂದು ಅಧಿಸೂಚಿಸಲಾಗಿದೆ. ಇವುಗಳಲ್ಲಿ ಜೇನು ಕುರುಬ ಮತ್ತು ಕೊರಗರನ್ನು ಮೂಲ ಬುಡಕಟ್ಟು ನಿವಾಸಿಗಳೆಂದು ಗುರುತಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಗಳು ರಾಜ್ಯದ ಐದು ಪ್ರದೇಶಗಳಿದ್ದು ಅವುಗಳಲ್ಲಿ ಒಂದು ಉಡುಪಿ ಜಿಲ್ಲೆಯಲ್ಲಿದೆ. ಕೋಷ್ಟಕ ೧೬.೬ರಲ್ಲಿ ಪರಿಶಿಷ್ಟ ವರ್ಗಗಳ ಪಟ್ಟಿಯನ್ನು ನೀಡಲಾಗಿದೆ.

**ಕೋಷ್ಟಕ ೧೬.೬ : ಪರಿಶಿಷ್ಟ ವರ್ಗಗಳ ಪಟ್ಟಿ**

| | | | |
|---|---|---|---|
| ೧) | ಆದಿಯನ್ | ೨೨) | ಕೋಳಿ ಧೋರ್, ತೋಕ್ರೆ ಕೋಳಿ, ಕೊಲ್ಚ,ಕೊಲ್ಘ |
| ೨) | ಬರ್ಡ | ೨೩) | ಕೊಂಡ ಕಾಪುಗಳು |
| ೩) | ಬಾವಚ, ಬಾಮ್ಚ | ೨೪) | ಕೊರಗ |
| ೪) | ಭಿಲ್, ಭಿಲ್ ಗರಾಸಿಯಾ, ಧೋಲಿ ಭಿಲ್, ದುಂಗ್ರಿ ಭಿಲ್, ದುಂಗ್ರಿ ಗರಾಸಿಯಾ, ಮೇವಾಸಿ ಭಿಲ್, ರಾವಲ್ ಭಿಲ್, ತಡ್ವಿ ಭಿಲ್, ಭಾಗಲಿಯಾ, ಭಿಲಾಲ್, ಪಾವ್ರ, ವಾಸವ, ವಾಸವೆ. | ೨೫) | ಕೋಟ |
| | | ೨೬) | ಕೋಯ, ಭಿನೇ ಕೋಯ, ರಾಜ್‌ಕೋಯ |
| | | ೨೭) | ಕುಡಿಯ, ಮಲೆಕುಡಿಯ |
| | | ೨೮) | ಕುರುಬ(ಕೊಡಗು ಜಿಲ್ಲೆ) |
| ೫) | ಚೆಂಚು, ಚೆಂಚ್ವರ್ | ೨೯) | ಕುರುಮನ್ಸ್ |
| ೬) | ಚೋದರ | ೩೦) | ಮಹಾ ಮಲಸರ್ |
| ೭) | ದುಬ್ಲ, ವಲವಿಯ, ಹಲ್ಪತಿ | ೩೧) | ಮಲೈ ಕುಡಿ |
| ೮) | ಗಾಮಿತ್, ಗಾಮ್ತ, ಗಾವಿತ್, ಮಾವ್ಚಿ, ಪದ್ವಿ, ವಾಲ್ವಿ | ೩೨) | ಮಲಸರ್ |
| | | ೩೩) | ಮಲಯೆಕಂಡಿ |
| ೯) | ಗೋಂಡ್, ನಾಯ್ಕಪೋಡ್, ರಾಜ್‌ಗೊಂಡ್ | ೩೪) | ಮರಾಠಿ (ದಕ್ಷಿಣಕನ್ನಡ ಜಿಲ್ಲೆಯಲ್ಲಿ) |
| | | ೩೫) | ಮೇದ, ಮೇದಾರಿ, ಗೌರಿಗ, ಬುರುಡ್, |
| ೧೦) | ಗೌಡಲು, | ೩೬) | ನಾಯಕ್ಡ, ನಾಯಕ, ಮೋಟಾ ನಾಯಕ, ನಾನಾ ನಾಯಕ, ನಾಯಿಕ್, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ |
| ೧೧) | ಹಕ್ಕಿಪಿಕ್ಕಿ | | |
| ೧೨) | ಹಸಲರು | | |
| ೧೩) | ಇರುಳರ್ | ೩೯) | ಪಳ್ಳಿಯನ್ |
| ೧೪) | ಇರುಳಿಗ | ೪೦) | ಪಣಿಯನ್ |
| ೧೫) | ಜೇನು ಕುರುಬ | ೪೧) | ಪಾರ್ಧಿ, ಅಡ್ವಿಚಿಂಚೇರ್, ಫಾನ್ಸೆಪಾರ್ಧಿ, ಹಂಸ್ |
| ೧೬) | ಕಾಡು ಕುರುಬ | ೪೨) | ಪಟೇಲಿಯ |
| ೧೭) | ಕಮ್ಮಾರ (ದ.ಕ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ) | ೪೩) | ರಾಥವ |
| | | ೪೪) | ಶೋಲಗ |
| ೧೮) | ಕಣಿಯನ್, ಕನ್ಯನ್ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ) | ೪೫) | ಶೋಲಿಗರು |
| | | ೪೬) | ತೋಡ |
| ೧೯) | ಕಾಥೋಡಿ, ಕಟಕರಿ, ಧೋರ್ ಕಥೋಡಿ, ಧೋರ್ ಕಟಕರಿ, ಸೋನ್ ಕಥೋಡಿ, ಸೋನ್ ಕಟಕರಿ | ೪೭) | ವರ್ಲಿ |
| | | ೪೮) | ವಿಟೋಲಿಯ, ಕೊತ್‌ವಾಲಿಯಾ, ರೋಡಿಯ |
| ೨೦) | ಕಟ್ಟುನಾಯಕನ್ | ೪೯) | ಯೆರವ |
| ೨೧) | ಕೋಕ್ನ, ಕೋಕ್ನಿ, ಕುಕ್ನ | ೫೦) | ಸಿದ್ದಿ (ಉತ್ತರ ಕನ್ನಡ ಜಿಲ್ಲೆಯಲ್ಲಿ) |

*ಆಧಾರ : ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು*

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:** ದೂರದ ಗ್ರಾಮಗಳಿಂದ ಬಂದು ಶಾಲೆಗಳಲ್ಲಿ ಓದುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗುವ ಸಲುವಾಗಿ, ಈ ನಿಲಯಗಳನ್ನು ನಡೆಸಲಾಗುತ್ತಿದ್ದು, ಉಚಿತ ಊಟ, ವಸತಿ, ಲೇಖನ ಸಾಮಗ್ರಿಗಳು ಮತ್ತು ಸಮವಸ್ತ್ರ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಈ ನಿಲಯಗಳಲ್ಲಿ ಒದಗಿಸಲಾಗುತ್ತದೆ. ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನಿರ್ವಹಿಸಲಾಗುತ್ತಿರುವ ಮೂರು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಮತ್ತು ಏಳು ಆಶ್ರಮ ಶಾಲೆಗಳು ಇವೆ. ಇವುಗಳ ವಿವರಗಳನ್ನು ಕೋಷ್ಟಕ ೧೬.೭–೮ ರಲ್ಲಿ ಕಾಣಬಹುದಾಗಿದೆ.

### ಕೋಷ್ಟಕ ೧೬.೭ : ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿವರ

| ಕ್ರ. ಸಂ. | ವಿದ್ಯಾರ್ಥಿ ನಿಲಯಗಳು | | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|
| | ನಿಲಯಗಳು ಇರುವ ಸ್ಥಳ | ಮಂಜೂರಾತಿ ಸಂಖ್ಯೆ | ೨೦೦೨-೦೩ | ೨೦೦೩-೦೪ | ೨೦೦೪-೦೫ | |
| ೧ | ಬಾಲಕರ ವಿದ್ಯಾರ್ಥಿ ನಿಲಯ, ಅಜೆಕಾರು, ಕಾರ್ಕಳ ತಾಲೂಕು | ೫೦ | ೩೬ | ೪೪ | ೪೯ | ೧೨೯ |
| ೨ | ಶಂಕರನಾರಾಯಣ, ಕುಂದಾಪುರ ತಾಲೂಕು | ೫೦ | ೨೬ | ೨೫ | ೩೨ | ೮೩ |
| ೩. | ಬಾಲಕಿಯರ ವಿದ್ಯಾರ್ಥಿ ನಿಲಯ ಆದಿ ಉಡುಪಿ, ಉಡುಪಿ ತಾಲೂಕು | ೫೦ | ೫೦ | | ೫೦ | ೧೫೦ |

(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)

### ಕೋಷ್ಟಕ ೧೬.೮ : ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿವರ

| ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|---|---|
| | ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ನಿಲಯಗಳ ಸಂಖ್ಯೆ | ಬಾಲಕಿಯರ ಸಂಖ್ಯೆ | | |
| ೨೦೦೨-೦೩ | ೨ | ೭೫ | ೧ | ೩೬ | ೧೧೨ | ೧೨.೧೫ |
| ೨೦೦೩-೦೪ | ೨ | ೭೫ | ೧ | ೪೪ | ೧೧೯ | ೧೦.೮೯ |
| ೨೦೦೪-೦೫ | ೨ | ೮೨ | ೧ | ೪೯ | ೧೩೧ | ೧೫.೪೫ |

(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)

**ಆಶ್ರಮ ಶಾಲೆಗಳು :** ಒಂದರಿಂದ ಏಳನೇ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಈ ನಿಲಯಗಳಲ್ಲಿ ಒದಗಿಸಲಾಗುತ್ತದೆ. ಕೋಷ್ಟಕ ೧೬.೯ರಲ್ಲಿ ನೋಡಬಹುದಾಗಿದೆ.

### ಕೋಷ್ಟಕ ೧೬.೯ : ಜಿಲ್ಲೆಯ ಆಶ್ರಮ ಶಾಲೆಗಳ ವಿವರ

| ತಾಲೂಕುಗಳು | ಕ್ರಮ ಸಂಖ್ಯೆ | ಆಶ್ರಮ ಶಾಲೆಗಳು ಇರುವ ಸ್ಥಳ | ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| **ಉಡುಪಿ** | ೧ | ಬನ್ನಂಜೆ | ೧೨೫ |
| **ಕಾರ್ಕಳ** | ೨ | ಕಾರ್ಕಳ | ೭೫ |
| " | ೩. | ಹೆಬ್ರಿ | ೫೦ |
| " | ೪ | ದುರ್ಗ | |
| **ಕುಂದಾಪುರ** | ೫ | ಕುಂದಾಪುರ | ೭೫ |
| " | ೬ | ಆರ್ಡಿ | ೧೦೦ |
| " | ೭ | ಬೈಂದೂರು | ೧೦೦ |

*(ಆಧಾರ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು)*

**ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ ಮಂಜೂರಾತಿ:** ಭಾರತ ಸರ್ಕಾರವು ನಿಗದಿ ಪಡಿಸಿರುವ ವಿದ್ಯಾರ್ಥಿ ವೇತನದ ದರಕ್ಕಿಂತಲೂ ಹೆಚ್ಚಾಗಿ, ನಿಲಯಾರ್ಥಿಗಳಿಗೆ ಆಹಾರಕ್ಕಾಗಿ ಖರ್ಚು ಮಾಡಿದ್ದಲ್ಲಿ, ರಾಜ್ಯ ಸರ್ಕಾರದಿಂದ ಹೆಚ್ಚುವರಿ ಊಟ ಮತ್ತು ವಸತಿಯ ವೆಚ್ಚಕ್ಕಾಗಿ ಅನುದಾನ ಮಂಜೂರು ಮಾಡಲಾಗುತ್ತದೆ. ಅಲ್ಲದೆ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನವಲ್ಲದೆ, ರಾಜ್ಯ ಸಕಾರದ ವಿದ್ಯಾರ್ಥಿ ವೇತನವನ್ನೂ, ಪ್ರತಿಭಾವಂತರಿಗೆ ನಗದು ಬಹುಮಾನಗಳನ್ನೂ ಮಂಜೂರು ಮಾಡುವ ಕಾರ್ಯಕ್ರಮಗಳೂ ಮತ್ತು

ಪರಿಶಿಷ್ಟ ಜಾತಿಯವರಿಗಾಗಿ ಇರುವ ಇನ್ನಿತರ ಕಾರ್ಯಕ್ರಮಗಳು ಸಮಾನ ನಿಯಮಗಳನ್ನನುಸರಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ೨೦೦೨–೦೩ನೇ ಸಾಲಿನಿಂದ ೨೦೦೪–೦೫ನೇ ಸಾಲಿನ ವರೆಗೆ ಮೂರು ವರ್ಷಗಳ ಅವಧಿಯಲ್ಲಿ ನೀಡಲಾಗಿರುವ ವಿದ್ಯಾರ್ಥಿ ವೇತನದ ವಿವರಗಳನ್ನು ಹಾಗೂ ವಿದ್ಯಾರ್ಥಿ ನಿಲಯಗಳು, ಆಶ್ರಮ ಶಾಲೆಗಳು ಮತ್ತು ಹೆಚ್ಚುವರಿ ಊಟ ಮತ್ತು ವಸತಿ ಸೌಕರ್ಯದ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಿದ ವಿವರಗಳನ್ನು ಕೆಳಗಿರುವ ಕೋಷ್ಟಕ ೧೬.೧೦ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೦ : ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ**

| ಕ್ರ ಸಂ. | ಯೋಜನೆಯ ಹೆಸರು | ೨೦೦೨–೦೩ | | ೨೦೦೩–೦೪ | | ೨೦೦೪– ೦೫ | |
|---|---|---|---|---|---|---|---|
| | | ಫಲಾನು ಭವಿಗಳು | ವೆಚ್ಚ (ರೂ. ಲಕ್ಷಗಳಲ್ಲಿ) | ಫಲಾನು ಭವಿಗಳು | ವೆಚ್ಚ (ರೂ. ಲಕ್ಷಗಳಲ್ಲಿ) | ಫಲಾನು ಭವಿಗಳು | ವೆಚ್ಚ (ರೂ. ಲಕ್ಷಗಳಲ್ಲಿ) |
| ೧ | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೧೮೩೨ | ೧.೭೨ | ೯೯೯ | ೦.೮೫ | ೧೩೬೨ | ೧.೨೫ |
| ೨ | ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ | ೨೬ | ೦.೨೨ | ೨೩ | ೦.೧೬ | | |
| ೩ | ಎಸ್.ಎಸ್.ಎಲ್. ಸಿ. ಪುರಸ್ಕಾರ | ೩೭ | ೦.೧೯ | ೩೮ | ೦.೧೯ | | |
| ೪ | ಪ್ರತಿಭಾ ವಿದ್ಯಾರ್ಥಿ ವೇತನ | – | – | ೪೬೬ | ೦.೩೫ | ೪೫೩೪ | ೪.೫೯ |
| ೫ | ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ವೇತನ | ೭೯೦ | ೦.೬೫ | ೩೮೬ | ೦.೯೧ | | |
| ೬ | ಒಂದರಿಂದ ಐದನೇ ತರಗತಿಯವರಿಗೆ ವಿದ್ಯಾರ್ಥಿ ವೇತನ | ೯೭೪ | ೦.೭೧ | ೮೧೧ | ೦.೬೧ | | |
| ೭ | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಯೋಜನೆ) | ೭೨ | ೦.೯೩ | – | – | – | – |
| ೮ | ಶೈಕ್ಷಣಿಕ ಪ್ರವಾಸ | ೪ | ೦.೦೪ | ೧ | ೦.೦೧ | ೫ | ೦.೦೫ |
| ೯ | ಆಶ್ರಮ ಶಾಲೆ | ೮೩ | ೮.೭೭ | ೮೦ | ೮.೧೫ | ೧೧೩ | ೧೧.೮೬ |
| ೧೦ | ಮಹಿಳಾ ಕಲ್ಯಾಣ ಕೇಂದ್ರ | ೬೩ | ೨.೮೨ | ೫೦ | ೩.೫೩ | ೫೦ | ೪.೫೭ |
| ೧೧ | ವಿದ್ಯಾರ್ಥಿ ನಿಲಯ | ೧೧೧ | ೧೨,೧೬ | ೧೧೯ | ೧೦.೮೭ | ೧೨೨ | ೧೫.೪೫ |
| ೧೨ | ಆಶ್ರಮ ಶಾಲೆ (ಯೋಜನೇತರ) | ೨೦೫ | ೨೮.೩೯ | ೨೦೧ | ೨೬.೭೮ | ೨೫೦ | ೨೮.೬೨ |
| ೧೩ | ಹೆಚ್ಚಿನ ಊಟ ಮತ್ತು ವಸತಿ | ೧೧ | ೦.೩೧ | – | – | ೩೧ | ೦.೨೭ |

*(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)*

## ಗಿರಿಜನ ಉಪ ಯೋಜನೆ

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ, ಗಿರಿಜನ ಉಪ ಯೋಜನೆಯನ್ನು ೧೯೭೬–೧೯೭೭ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಮೇಲೆ ಹೇಳಿದಂತೆ, ೧೯೯೨ರಿಂದ ಈ ಯೋಜನೆಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ. ಈ ವರ್ಗಕ್ಕೆ ಸೇರಿದ ಕುಟುಂಬಗಳನ್ನು, ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಅವರಿಗೆ ಒದಗಿಸುವುದು, ಅವರ ಕಲೆ ಮತ್ತು ಸಂಸ್ಕೃತಿಯನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು, ಈ ವರ್ಗದ ಹಾಡಿಗಳಿಗೆ ಹಾಗೂ ಕಾಲೋನಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು, ಮತ್ತು ಪರಿಶಿಷ್ಟ ವರ್ಗದವರ ಪ್ರಗತಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರಗಳ ಸ್ಥಾಪಿಸುವುದು–ಇವೇ ಮೊದಲಾದ ಅನುಕೂಲಗಳನ್ನು ಈ ಗಿರಿಜನ ಉಪ ಯೋಜನೆಯಡಿ ವಿವಿಧ ಇಲಾಖೆಗಳ ಮೂಲಕ ಮಾಡಿಕೊಡಲಾಗುತ್ತದೆ. ೨೦೦೨–೦೩ರಿಂದ ೨೦೦೪–೦೫ನೇ ಸಾಲುಗಳಲ್ಲಿ ಈ ಯೋಜನೆಯಡಿ ಯಾವ ಯಾವ ಇಲಾಖೆಗಳು ಆರ್ಥಿಕ ನೆರವು ನೀಡಿವೆ ಮತ್ತು ಯಾವ ಸವಲತ್ತುಗಳನ್ನು ಒದಗಿಸಿವೆ ಎಂಬುದರ ಕುರಿತು ಕೋಷ್ಟಕ ೧೬.೧೧ರಲ್ಲಿ ಕಾಣಿಸಲಾಗಿದೆ.

**ಕೋಷ್ಟಕ ೧೬.೧೧ : ಗಿರಿಜನ ಉಪ ಯೋಜನೆ ವಿವರ**

| ಕ್ರ. ಸಂ. | ಇಲಾಖೆಯ ಹೆಸರು | ೨೦೦೨–೦೩ | | ೨೦೦೩–೦೪ | | ೨೦೦೪– ೦೫ | |
|---|---|---|---|---|---|---|---|
| | | ವೆಚ್ಚ | ಭೌತಿಕ ಸಾಧನೆ ಫಲಾನುಭವಿಗಳು | ವೆಚ್ಚ | ಭೌತಿಕ ಸಾಧನೆ ಫಲಾನುಭವಿಗಳು | ವೆಚ್ಚ | ಭೌತಿಕ ಸಾಧನೆ ಫಲಾನುಭವಿಗಳು |
| ೧ | ಕೃಷಿ ಇಲಾಖೆ: ಸಸ್ಯ ಸಂರಕ್ಷಣಾ ಕಣಜ, ಉಪಕರಣ, ಪಂಪ್ ಸೆಟ್ ಮತ್ತು ಪವರ್ ಟಿಲ್ಲರ್ | ೨.೮೪ | ೫ ಹೆಕ್ಟೇರ್ | ೨.೮೪ | ೯೯ | ೩.೨೦ | ೭೮ |
| ೨ | ತೋಟಗಾರಿಕೆ ಇಲಾಖೆ: ಹೊಸತೋಟ ಸ್ಥಾಪನೆ, ತೋಟಗಾರಿಕೆಯಲ್ಲಿ ತರಬೇತಿ ಮನೆ ಮುಂದೆ ನೆಡಲು ಸಸಿ ವಿತರಣೆ | ೦.೯೮ | ೫ ಎಕರೆ | ೧.೦೦ | ೫೯೨ | ೧.೨೯ | ೮೮ |
| ೩ | ಪಶು ಸಂಗೋಪನೆ: ಹಸು ಘಟಕ ಕೋಳಿ ಘಟಕ | ೧.೨೭ | ೨೩ | ೧.೨೭<br>೩೮ ಕೋಳಿ | ೭ ಹಸು | ೧.೭೮<br>೪೪ ಕೋಳಿ | ೯ ಹಸು |
| ೪ | ರೇಶ್ಮೆ ಇಲಾಖೆ: ರೇಶ್ಮೆ ಬೆಳೆಗಾರರಿಗೆ ರೇಶ್ಮೆ ಹುಳು ಸಾಕುವ ಹಂಚಿನ ಮನೆ ನಿರ್ಮಾಣ, ನೀರಾವರಿ ಪಂಪ್‌ಸೆಟ್ ವಿತರಣೆ | ೦.೭೭೨ | ೭ | ೦.೭೮ | ೭ | ೦.೫೯ | ೬ |
| ೫ | ಜಲಾನಯನ ಅಭಿವೃದ್ಧಿ: ಕಿಂಡಿ ಅಣೆಕಟ್ಟು ಮತ್ತು ನಾಲಬಂದು | ೨.೧೩ | ೩ | ೧.೭೦ | ೩ ವಿನ್ಯಾಸ | ೧.೭೫ | ೨ |
| ೬ | ಸಾಮಾಜಿಕ ಅರಣ್ಯ ಇಲಾಖೆ:– ಸಸಿ ಬೆಳೆ, ಸಸಿ ಪೋಷಣೆ, ನೆಡು ತೋಪು ಬೆಳೆಸು ಮತ್ತು ಪೋಷಣೆ ಹಾಗೂ ನೆಡುತೋಪಿನ ಮುಂಗಡ | ೦.೮೬<br>೨ | ೧೦ ಎಕರೆ | ೧.೧೫ | ೮೮೦೦<br>ಏಳು ಎಕರೆ | ೧.೭೪ | ೨೨೮೪<br>೧.೫ ಎಕರೆ |
| ೭ | ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ: ಈ ವರ್ಗದವರಿಗೆ ಕೈಗಾರಿಕಾ ಉತ್ಪಾದನಾ ಘಟಕ ಪ್ರಾರಂಭಿಸಲು ಶೇ.೫೦ರಂತೆ ಸಹಾಯ ಧನ ಹಾಗೂ ಇವರಿಗೆ ತರಬೇತಿ ಕಾರ್ಯಕ್ರಮ | ೧.೨೨ | ೧೬ | ೧.೨೯ | ೧೦ ಘಟಕ | ೦.೭೮ | ೨೮<br>ಫಲಾನುಭವಿಗಳು |
| ೮ | ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ : ಸಣ್ಣ ಮತ್ತು ಸಾಮೂಹಿಕ ನೀರಾವರಿ; ಗ್ರಾಮೀಣ ನೀರು ಸರಬರಾಜು; ರಸ್ತೆ ಮತ್ತು ಸೇತುವೆ. | ೦.೧೩<br>೩<br>೭.೦೧ | –<br>೭ ಜೊತೆ<br>೩ ಕಿ. ಮೀ.<br>೯.೯೬ | ೪.೩೪<br>೬.೭೨<br>೮.೧೧ | ೫ ಹೆಕ್ಟೇರ್<br>ಬೋರ್‌ವೆಲ್<br>೨ ಕಿ. ಮೀ. | ೫.೦೬<br>೧೪.೨೧<br>೫.೬೯ | ೮<br>೩೪<br>೧೫ |
| ೯ | ಸಮಾಜ ಕಲ್ಯಾಣ ಇಲಾಖೆ : ಪ.ವರ್ಗದ ಮನೆ ರಿಪೇರಿ, ಕೊರಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಮವಸ್ತ್ರ ವಿತರಣೆ | –<br>– | –<br>– | ೨.೨೦<br>೪.೭೦ | ೪೪ ಮನೆ<br>೧೧೯೭ | ೧.೦೦<br>೬.೭೬ | ೨೦ ಮನೆ<br>೧೫೦೮ |
| ೧೦ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ: ಪ.ವರ್ಗದವರಿಗೆ ಜೀವ ರಕ್ಷಕ ಔಷಧಿ | – | – | ೨.೧೧ | ೧೧ | ೩.೬೬ | ೧೩<br>ಪಿ.ಹೆಚ್.ಪಿ. |

*(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)*

## ಜಿಲ್ಲಾ ಕಾನೂನು ನೆರವು ಸಮಿತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಉಚಿತ ಕಾನೂನು ನೆರವನ್ನು ನೀಡುವ ಸಲುವಾಗಿ ಕಾನೂನು ನೆರವು ಸಮಿತಿಯು ೧೯೮೩ ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯಡಿ ವಕೀಲರ ವಕಾಲತ್ತು ಶುಲ್ಕ ಮತ್ತು ಕೋರ್ಟ್ ಸ್ಟ್ಯಾಂಪ್ ಶುಲ್ಕದ ವೆಚ್ಚವನ್ನು ಭರಿಸಲಾಗುತ್ತದೆ. ಈ ಸಮಿತಿಯ ನೆರವು ಪಡೆದವರ ಹಾಗೂ ಖರ್ಚು ಮಾಡಿದ ವಿವರಗಳನ್ನು ಮುಂದಿನ ಕೋಷ್ಟಕ ೧೬.೧೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೨ : ಉಚಿತ ಕಾನೂನು ನೆರವು ವಿವರ**

| ಕ್ರ.ಸಂ. | ವರ್ಷ | ಫಲಾನುಭವಿಗಳ ಸಂಖ್ಯೆ | ಮಾಡಿದ ವೆಚ್ಚ (ರೂ.ಗಳಲ್ಲಿ) |
|---|---|---|---|
| ೧ | ೨೦೦೨–೦೩ | ೧ | ೧೧,೦೦೦/– |
| ೨ | ೨೦೦೩–೦೪ | ೧ | ೧೨,೦೦೦/– |
| ೩ | ೨೦೦೪–೦೫ | ೧ | ೧೨,೦೦೦/– |

*(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)*

## ಕೃಷಿ ಕಾಲೋನಿಗಳು

ಪರಿಶಿಷ್ಟ ಜಾತಿ ಮತ್ತು ವರ್ಗದ ಬಹುತೇಕ ಜನರಿಗೆ ಸ್ವಂತ ಭೂಮಿ ಇರಲಿಲ್ಲವಾದ್ದರಿಂದ ಹಾಗೂ ಅವರಿರುವ ಸ್ಥಳದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳೂ ಇಲ್ಲವೆಂಬುದನ್ನು ಕಂಡುಕೊಂಡು, ೧೯೬೫ರ ಸುಮಾರಿನಲ್ಲಿ ಅವರಿಗೆ ಕೃಷಿ ಕಾಲೋನಿಗಳನ್ನು ರಚಿಸಿ, ಮನೆ ನಿವೇಶನ ಮತ್ತು ವ್ಯವಸಾಯ ಯೋಗ್ಯ ಭೂಮಿಗಳನ್ನು ಒದಗಿಸಿಕೊಡಲು ಸರ್ಕಾರವು ಯೋಚಿಸಿತು. ಈ ಕೃಷಿ ಕಾಲೋನಿಗಳಲ್ಲಿ ಮಕ್ಕಳಿಗಾಗಿ ಶಾಲೆ, ವಯಸ್ಕರಿಗಾಗಿ ಶಾಲೆ, ಗ್ರಂಥಾಲಯ, ವಾಚನಾಲಯ, ಸಮುದಾಯ ಭವನ, ಸೂಕ್ತ ರಸ್ತೆ–ಸಂಪರ್ಕ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮುದೂರಿನಲ್ಲಿ ಒಂದು ಕೃಷಿ ಕಾಲೋನಿಯು ರಚಿಸಲ್ಪಟ್ಟಿದ್ದು, ಈ ಕಾಲೋನಿಯಲ್ಲಿ ಅರವತ್ತು ಕುಟುಂಬಗಳು ವಾಸಿಸುತ್ತಿವೆ. ಈ ಕಾಲೋನಿಗೆ ಎರಡು ನೀರಾವರಿ ಬಾವಿಗಳನ್ನು ಒದಗಿಸಿದ್ದು ಇದಕ್ಕಾಗಿ ಹನ್ನೆರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

## ಮೂಲ ನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮ

ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಜೇನು ಕುರುಬ ಮತ್ತು ಕೊರಗ ಜಾತಿಗಳನ್ನು ಮೂಲ ನಿವಾಸಿ ಬುಡಕಟ್ಟು ಗುಂಪುಗಳೆಂದು ಗುರುತಿಸಲಾಗಿದೆ. ಮೂಲ ನಿವಾಸಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಕೆಲವು ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸಲುವಾಗಿ, ಕೆಲ ಗುಂಪುಗಳನ್ನು ಆಯ್ಕೆ ಮಾಡಲಾಗಿದ್ದು, ಕೇಂದ್ರದ ವಿಶೇಷ ನೆರವು ಮತ್ತು ಪರಿಚ್ಛೇದ ೨೭೫(೧)ರ ಉದ್ದೇಶಕ್ಕಾಗಿ ಉಡುಪಿ ಜಿಲ್ಲೆಯಲ್ಲಿ ಗುರುತಿಸಲಾದ ಗುಂಪುಗಳ ವಿವರಗಳನ್ನು ಕೋಷ್ಟಕ ೧೬.೧೩ ಹಾಗೂ ೧೬.೧೪ರಲ್ಲಿ ನೀಡಲಾಗಿದೆ.

ಕೊರಗರ ಸಾಕ್ಷರತೆ ಪ್ರಮಾಣವು ೩೮.೧೨% ಇದ್ದು, ೨೦೦೫–೦೬ರಲ್ಲಿ ಕೇಂದ್ರದ ನೆರವಿನಲ್ಲಿ ಈ ಮೂಲನಿವಾಸಿ ಜನಾಂಗದ ಅಭಿವೃದ್ಧಿಗಾಗಿ ಕೆಲವು ಬ್ಲಾಕ್‌ಗಳನ್ನು ಆಯ್ದುಕೊಂಡು ಆಯಾ ಪ್ರದೇಶಗಳಿಗೆ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಣದ ನೆರವು ಪಡೆಯಲಾಗಿದೆ. ಸದರಿ ಪ್ರದೇಶಗಳು ಮತ್ತು ಕೇಂದ್ರದಿಂದ ಪಡೆದ ಹಣದ ವಿವರಗಳನ್ನು ಕೋಷ್ಟಕ ೧೬.೧೫ರಲ್ಲಿ ನೀಡಲಾಗಿದೆ.

## ದೊಡ್ಡ ಪ್ರಮಾಣದ ಆದಿವಾಸಿ ವಿವಿಧೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್)

ಪರಿಶಿಷ್ಟ ವರ್ಗದವರ ಪ್ರಗತಿಗಾಗಿ, ಮೇಲಿನವಲ್ಲದೆ, ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿದ್ದು, ಅವುಗಳಲ್ಲಿ LAMPS (Large sized Adivasi Multi-Purpose Co-Operative Societies)#ಹಾಗೂ ಜನಶ್ರೀ ಕಾರ್ಯಕ್ರಮಗಳನ್ನು ಪ್ರಮುಖವಾಗಿ ಇಲ್ಲಿ ಉಲ್ಲೇಖಿಸಬಹುದಾಗಿದೆ. ಮೇಲೆ ಹೇಳಿರುವಂತೆ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾಗಿದ್ದು, ಇಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ಗಿರಿಜನ ಇಪ್ಪತ್ತೊಂದರ ದೊಡ್ಡ ಪ್ರಮಾಣದ ವಿವಿಧೋದ್ದೇಶ

**ಕೋಷ್ಟಕ ೧೬.೧೩ : ಮೂಲ ನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ವಿವರ**

| ಕ್ರ. ಸಂ. | ವರ್ಷ | ತಾಲೂಕಿನ ಹೆಸರು | ಗುಂಪಿನ ಕ್ಲಸ್ಟರ್ ಹೆಸರು | ಕೈಗೊಂಡ ಕಾರ್ಯಗಳು ಮತ್ತು ಮಾಡಲಾದ ವೆಚ್ಚ ಲಕ್ಷ ರೂ.ಗಳಲ್ಲಿ | ಫಲಾನುಭವಿಗಳು | |
|---|---|---|---|---|---|---|
| | | | | | ಸಂಖ್ಯೆ | ವೆಚ್ಚ ಲಕ್ಷ ರೂ.ಗಳಲ್ಲಿ |
| ೧ | ೨೦೦೫-೦೬ | **ಕುಂದಾಪುರ** | ಮುದ್ದೂರು | ಸಣ್ಣ ನೀರಾವರಿ: ೩.೦೦<br>ರಸ್ತೆ ಅಭಿವೃದ್ಧಿ: ೭.೫೦<br>ಚರಂಡಿ: ೧.೨೦<br>ಸಭಾ ಭವನ: ೫.೦೦<br>ಸಮುದಾಯ ನೀರಾವರಿ:೭.೧೮ | ೫ | ೨೩.೮೮ |
| ೨ | ೨೦೦೫-೦೬ | **ಕಾರ್ಕಳ** | ಈದು | ಸಣ್ಣ ನೀರಾವರಿ: ೩.೦೦<br>ರಸ್ತೆ ಅಭಿವೃದ್ಧಿ: ೭.೫೦<br>ಚರಂಡಿ : ೧.೦೦<br>ಸಭಾ ಭವನ : ೫.೦೦<br>ಸಮುದಾಯ ನೀರಾವರಿ:೭.೧೮ | ೫ | ೨೩.೬೮ |
| ೩ | ೨೦೦೫-೦೬ | **ಉಡುಪಿ** | ಬೈರಬೆಟ್ಟು/ ಚೆರ್ಕಾಡಿ | ಸಣ್ಣ ನೀರಾವರಿ : ೬.೦೦<br>ರಸ್ತೆ ಅಭಿವೃದ್ಧಿ: ೭.೫೦<br>ಚರಂಡಿ: ೧.೩೬<br>ನೀರಾವರಿ:೫.೪೭<br>ಸಭಾಭವನ: ೫.೦೦<br>ಸಮುದಾಯನೀರಾವರಿ: ೭.೧೮ | ೬ | ೩೨.೫೧ |
| ೪ | ೨೦೦೫-೦೬ | **ಉಡುಪಿ** | ಶೀರೂರು | ನೀರಾವರಿ: ೩.೦೫<br>ರಸ್ತೆ ಅಭಿವೃದ್ಧಿ: ೪.೦೫<br>ಚರಂಡಿ : ೧.೨೦<br>ಸಭಾ ಭವನ : ೫.೦೦<br>ನೀರಾವರಿ : ೭.೧೮ | ೪<br>೧<br>೧೩.೨೫ | ೭.೧೫ |
| | ಒಟ್ಟು | | | | ೨೧ | ೧೦೦.೪೭ |

*(ಮಾಹಿತಿ: ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ)*

**ಕೋಷ್ಟಕ ೧೬.೧೪ : ಇತ್ತೀಚಿನ ಸಮೀಕ್ಷೆ ಪ್ರಕಾರ, ಮೂಲ ನಿವಾಸಿಗಳೆಂದು ಗುರುತಿಸಲಾದ ಕೊರಗರ ಕುಟುಂಬಗಳು ಉಡುಪಿ ಜಿಲ್ಲೆಯಲ್ಲಿ ೧೯೨೦ ಇದ್ದು ತಾಲೂಕುವಾರು ವಿವರಗಳು ಹೀಗಿವೆ.**

| ತಾಲೂಕು | ಕುಟುಂಬಗಳ ಸಂಖ್ಯೆ | ಪುರುಷರು | ಸ್ತ್ರೀಯರು | ಒಟ್ಟು |
|---|---|---|---|---|
| **ಉಡುಪಿ** | ೯೫೯ | ೧೯೭೫ | ೧೮೭೫ | ೩೮೫೦ |
| **ಕಾರ್ಕಳ** | ೩೫೪ | ೬೬೬ | ೬೭೮ | ೧೩೪೪ |
| **ಕುಂದಾಪುರ** | ೬೦೭ | ೧೧೩೫ | ೧೧೦೦ | ೨೨೩೫ |
| **ಒಟ್ಟು** | ೧೯೨೦ | ೩೭೭೬ | ೩೬೫೩ | ೭೪೨೯ |

*(ಆಧಾರ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು)*

**ಕೋಷ್ಟಕ ೧೬.೧೫ : ಮೂಲ ನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ನೆರವು ವಿವರ**

| ತಾಲೂಕು ಮತ್ತು ಬ್ಲಾಕ್‌ನ ಹೆಸರು | ಆಯ್ದ ಪ್ರದೇಶಗಳು, ಹಳ್ಳಿಗಳು | ಸೌಕರ್ಯ ಪಡೆದ ಕುಟುಂಬಗಳು/ ವ್ಯಕ್ತಿಗಳ ಸಂಖ್ಯೆ | ಕೈಗೊಂಡಿರುವ ಕಾರ್ಯಗಳು | ಹಣ ಬಿಡುಗಡೆ (ಲಕ್ಷ ರೂ.ಗಳಲ್ಲಿ) | ವಾಸ್ತವ ಫಲಾನುಭವಿಗಳು |
|---|---|---|---|---|---|
| ಉಡುಪಿ ಬ್ಲಾಕ್ | ಕಲ್ಲುಗುಡ್ಡೆ, | ೨೨ | ಬದುವು ಕಟ್ಟುವುದು, | ೦.೯೦ | ೧ |
| | ಉಡುಪಿ ಜಿಲ್ಲೆ ಕಳತ್ತೂರು, | ೨೨ | ಜಲಾನಯನ ಅಭಿವೃದ್ಧಿ ಸಮುದಾಯ ನೀರಾವರಿ (ತೆರೆದ ಬಾವಿ) | ೪.೯೫ | ೧ |
| | ಸಾಲಿಗ್ರಾಮ | ೧೦ | ಮನೆಗಳ ನಿರ್ಮಾಣ | ೨.೦೦ | ೧೦ |
| ಕಾರ್ಕಳ ಬ್ಲಾಕ್ | ಮೂಡುಸಾಲ್ ಗುಡ್ಡೆ, ಕಡ್ತಲ. | ೯ | ಬದುವು ಕಟ್ಟುವುದು, | ೦.೬೦ | ೬ |
| | ಸಾಂತೂರು ಕೊಪ್ಪಳ | ೯ | ಜಲಾನಯನ ಅಭಿವೃದ್ಧಿ ಆದಾಯೋತ್ಪನ್ನ ಕಾರ್ಯಕ್ರಮ<br>ಬದುವು ಕಟ್ಟುವುದು, | ೧.೦೦<br>೦.೬೦ | ೧<br>೬ |
| | ಇನ್ನ | ೬ | ಜಲಾನಯನ ಅಭಿವೃದ್ಧಿ ಜನಜಾಗೃತಿ ಕಾರ್ಯಕ್ರಮ | ೦.೧೦ | ೧ |

*(ಮಾಹಿತಿ : ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು)*

ಸಹಕಾರಿ ಸಂಘಗಳು(ಲ್ಯಾಂಪ್ಸ್) ಕೆಲಸ ಮಾಡುತ್ತಿವೆ. ಈ ಸಂಘಗಳಲ್ಲಿ ಪರಿಶಿಷ್ಟ ವರ್ಗದ ಜನರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಅವರಿಗೆ ಅಲ್ಪಾವಧಿ ಸಾಲ ಹಾಗೂ ಇತರೇ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಇದಲ್ಲದೆ, ಸಹಕಾರ ಸಂಘದ ಮೂಲಕ ಜೇನು ಘಟಕಗಳನ್ನು ಪ್ರಾರಂಭಿಸಲು, ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಸಹಾಯಧನ ನೀಡಲಾಗುತ್ತಿದೆ. ಈ ಸಹಕಾರ ಸಂಘಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲಾಗುವ ಶೈಕ್ಷಣಿಕ ಸಂಸ್ಥೆಗಳಿಗೆ ಬುಡಕಟ್ಟು ಜನರಿಗೆ ಆಹಾರ ಧಾನ್ಯಗಳನ್ನೂ ಸರಬರಾಜು ಮಾಡುತ್ತವೆ. ಎಲ್ಲ ಲ್ಯಾಂಪ್‌ಗಳಲ್ಲಿ ಬುಡಕಟ್ಟು ಜನಾಂಗದ ಸದಸ್ಯರಲ್ಲೇ ಒಬ್ಬರನ್ನು ಮಂಡಳಿಯ ನಿರ್ದೇಶಕರಾಗಿ ಚುನಾಯಿಸಲಾಗುತ್ತದೆ. ಈ ಜಿಲ್ಲೆಯಲ್ಲಿ ಪ್ರತಿ ತಾಲೂಕಿಗೆ ಒಂದರಂತೆ ಲ್ಯಾಂಪ್ ಸಹಕಾರ ಸಂಘಗಳಿದ್ದು ಅವುಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

೧) ಕುಂದಾಪುರ ತಾಲೂಕು ಲ್ಯಾಂಪ್ಸ್ ಸಹಕಾರಿ ಸಂಘ, ಕುಂದಾಪುರ.
೨) ವಿವಿಧೋದ್ದೇಶ ಸಹಕಾರಿ ಸಂಘ, ಆದಿಉಡುಪಿ
೩) ಕಾರ್ಕಳ ತಾಲೂಕು ಲ್ಯಾಂಪ್ಸ್ ಸಹಕಾರಿ ಸಂಘ, ಕಾರ್ಕಳ.

ಜೇನುತುಪ್ಪ, ಕರಿಮೆಣಸು, ಕಾಡು ಆಲಿವ್, ಮಾಕ್ಕಿಬೇರು, ಸೀಗೆಕಾಯಿ, ಅಂಟುವಾಳದ ಕಾಯಿ, ಅಂಟು, ಬೇವಿನಬೀಜ, ವಾಟೆಹುಳಿ, ಸೊಗಡೇಬೇರು, ಮರಸೇಬು, ಕಕ್ಕೇಕಾಯಿ, ನೆಲ್ಲಿಕಾಯಿ, ರೇಷ್ಮೆ ಹತ್ತಿ, ರಾಮಪತ್ರೆ, ಮಾವಿನಹಣ್ಣು, ಲಿಚಿಹಣ್ಣು, ಕಾಡುಹರಳ ಬೀಜ, ಚಗಚೆಬೀಜ, ಅಳಲೆಕಾಯಿ, ಹೊಂಗೆ ಬೀಜ ಮುಂತಾದವು, ರಾಜ್ಯದಲ್ಲಿ ಲಭ್ಯವಿರುವ ಅರಣ್ಯ ಉತ್ಪನ್ನಗಳಾಗಿದ್ದು, ಈ ಉತ್ಪನ್ನಗಳನ್ನು ಲ್ಯಾಂಪ್‌ಗಳ ಮೂಲಕ ಕಡಿಮೆ ಬೆಲೆಗೆ ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುವುದು. ಉಡುಪಿ ಜಿಲ್ಲೆಯಲ್ಲಿ ಈ ಸಂಗ್ರಹಣೆ ಮತ್ತು ಮಾರಾಟವನ್ನು ಇನ್ನೂ ಮಾಡಬೇಕಾಗಿದೆ.

## ಜನಶ್ರೀ ವಿಮಾ ಯೋಜನೆ

ಪ್ರಧಾನ ಮಂತ್ರಿಗಳಿಂದ ಈ ಯೋಜನೆಯನ್ನು ೧೦.೮.೨೦೦೦ದಂದು ಪ್ರಾರಂಭಿಸಲಾಗಿದೆ. ಅಲ್ಪ ಆದಾಯದ ಬಡಜನರು ವಿಮೆ ಮಾಡಿಸಿ ಭದ್ರತೆಯ ಭಾವನೆಯನ್ನು ಹೊಂದಲೆಂಬ ಉದ್ದೇಶದಿಂದ

ಇದನ್ನು ಜೀವ ವಿಮಾ ನಿಗಮದಿಂದ ಯೋಜಿತಗೊಂಡು ಜಾರಿಗೊಳಿಸಲಾಗಿದೆ. ಬೀಡಿ ಕಾರ್ಮಿಕರು, ಹಮಾಲಿಗಳು, ಮೀನುಗಾರರು, ಹಾಲು ಕರೆಯುವವರು, ರಿಕ್ಷಾ ತುಳಿಯುವವರು, ಕೃಷಿ ಕೂಲಿಕಾರರು, ಮೊದಲಾದ ಮುವ್ವತ್ತೇಳು ರೀತಿಯ ಉದ್ಯೋಗಿಗಳಿಗೆ ಇದು ಅನ್ವಯಿಸುತ್ತದೆ. ಹಾಗೂ ಒಂದು ವರ್ಷಕ್ಕೆ ಮಾತ್ರ ಅತ್ಯಂತ ಭದ್ರತೆ ಒದಗಿಸುತ್ತದೆ. ಯೂನಿಯನ್/ಅಸೋಸಿಯೇಷನ್/ರೋಟರಿ/ಲಯನ್ಸ್ ಮತ್ತಿತರ ಸ್ವಯಂ ಸೇವಾ ಸಂಸ್ಥೆಗಳ/ಗ್ರಾಮ ಪಂಚಾಯತಿಗಳ ಮೂಲಕ ಮಾತ್ರವೇ ಈ ಸಮುದಾಯ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯ. ವಿಮಾ ಅವಧಿಯೊಳಗೆ ಅಪಘಾತ ಅಥವಾ ಮರಣ ಸಂಭವಿಸಿದಲ್ಲಿ ವಾರಸುದಾರರಿಗೆ ಇಪ್ಪತ್ತರಿಂದ ಐವತ್ತು ಸಾವಿರದವರೆಗೆ ಪ್ರತೀ ಆಕಸ್ಮಿಕಕ್ಕೆ ನಿಗದಿಸಿದ ದರದಲ್ಲಿ ಹಣ ನೀಡಲಾಗುವದು. ಪ್ರತಿ ಸದಸ್ಯರು ಒಂದು ವರ್ಷಕ್ಕೆ ಇನ್ನೂರು ಮಾತ್ರ ಕಟ್ಟಬೇಕಾಗಿದ್ದು, ಇದರಲ್ಲಿ ನೂರು ರೂ.ಗಳು ಸಬ್ಸಿಡಿಯಾಗಿ ಕೇಂದ್ರ ಸರ್ಕಾರದ ಸಾಮಾಜಿಕ ನಿಧಿಯಿಂದ ಲಭಿಸುತ್ತದೆ. ಭಾರತ ಸರ್ಕಾರದಿಂದ ಜನಶ್ರೀ ವಿಮಾ ಯೋಜನೆಗೆ ಸಬ್ಸಿಡಿ ಹಣ ಬಿಡುಗಡೆಯಾಗಿದ್ದು ಉಡುಪಿ ಜಿಲ್ಲೆಯ ಮೂಲ ನಿವಾಸಿ ಕುಟುಂಬಗಳ ಸದಸ್ಯರು ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೧೬ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೬ : ಮೂಲ ನಿವಾಸಿ ಕುಟುಂಬಗಳ ಸದಸ್ಯರು ಮತ್ತು ಫಲಾನುಭವಿಗಳ ವಿವರ**

| **ವರ್ಷ** | **ತಾಲೂಕುಗಳು** | **ಫಲಾನುಭವಿಗಳ ಸಂಖ್ಯೆ** | **ಮೊತ್ತ (ತಲಾ ರೂ. ೫೦೦ರಂತೆ ೫ ವರ್ಷಗಳಿಗೆ)** |
|---|---|---|---|
| ೨೦೦೪–೦೫ | **ಉಡುಪಿ** | ೧೦೦ | ೦.೫೦ |
| “ | **ಕಾರ್ಕಳ** | ೧೦೦ | ೦.೫೦ |
| “ | **ಕುಂದಾಪುರ** | ೨೦೦ | ೧.೦೦ |
| ಒಟ್ಟು | | ೪೦೦ | ೨.೦೦ |
| ೨೦೦೫–೦೬ | **ಉಡುಪಿ** | ೪೦೦ | ೨.೦೦ |
| “ | **ಕಾರ್ಕಳ** | ೨೫೪ | ೧.೨೭ |
| “ | **ಕುಂದಾಪುರ** | ೨೭೮ | ೧,೩೯ |
| ಒಟ್ಟು | | ೯೩೨ | ೪.೬೬ |

*(ಆಧಾರ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು)*

ಮೂಲ ನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಯೋಜನಾ ಸಮನ್ವಯಾಧಿಕಾರಿಗಳು ಜನಶ್ರೀ ವಿಮಾ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿದ್ದು, ಉಡುಪಿ ಜಿಲ್ಲೆಯಲ್ಲಿ, ಮಾಸ್ಟರ್ ಪಾಲಿಸಿ ಸಂಖ್ಯೆ ೫೨೪೭೦೪ ಆಗಿದ್ದು ಫಲಾನುಭವಿಗಳ ಸಂಖ್ಯೆ ನಾಲ್ಕು ನೂರು ಇರುತ್ತದೆ.

ಒಂದರಿಂದ ನಾಲ್ಕನೇ ತರಗತಿ, ಐದರಿಂದ ಏಳನೇ ತರಗತಿ ಮತ್ತು ಎಂಟರಿಂದ ಹತ್ತನೇ ತರಗತಿ ಹಾಗೂ ಕಾಲೇಜುಗಳಲ್ಲಿ ಓದುತ್ತಿರುವ ಕೊರಗ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ.೧೦೦/–, ರೂ.೧೫೦/–, ರೂ.೨೦೦/– ಮತ್ತು ರೂ.೨೫೦/–ಗಳ ವಿಶೇಷ ವಾರ್ಷಿಕ ಪ್ರೋತ್ಸಾಹ ಧನ ಮಂಜೂರಾತಿ; ವಿದ್ಯಾರ್ಥಿಗಳ ಪೋಷಕರಿಗೆ ವಾರ್ಷಿಕ ರೂ.೨೦೦/–ಗಳ ವಿಶೇಷ ಪ್ರೋತ್ಸಾಹ ಧನ ಮಂಜೂರಾತಿ; ಒಂದರಿಂದ ಹತ್ತನೇ ತರಗತಿಯ ಕೊರಗ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಲೇಖನ ಸಾಮಗ್ರಿ ಮಂಜೂರಾತಿ; ಏಳನೇ ತರಗತಿಯಲ್ಲಿ ಮತ್ತು ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾಗುವ ಆದಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ ತಲಾ ರೂ.೨೫೦೦/– ಹಾಗೂ ರೂ.೫೦೦೦/– ಗಳ ಪ್ರೋತ್ಸಾಹ ಧನ ಮಂಜೂರಾತಿ ಮುಂತಾದವು ವಿಶೇಷವಾಗಿ ಯೋಜಿಸಲ್ಪಟ್ಟ ಶೈಕ್ಷಣಿಕ ಕಾರ್ಯಕ್ರಮಗಳಾಗಿವೆ.

ಈ ಜಿಲ್ಲೆಯ ವಸತಿರಹಿತ ಕೊರಗರಿಗೆ ಅಂಬೇಡ್ಕರ್ /ಆಶ್ರಯ ಯೋಜನೆಗಳಡಿ ರೂ.೨೦,೦೦೦ಗಳ ವೆಚ್ಚದಲ್ಲಿ ಉಚಿತ ಮನೆಗಳ ನಿರ್ಮಾಣ; ಹಳೆಯ ಮನೆಯ ದುರಸ್ತಿಗಳಿಗೆ ರೂ.೧೦,೦೦೦ಗಳ ಸಹಾಯ ಧನ, ಕೊರಗ ಕಾಲೋನಿಗಳಿಗೆ ಸಂಪರ್ಕ ರಸ್ತೆ, ಚರಂಡಿಗಳ ನಿರ್ಮಾಣ, ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುದ್ದೀಪ ಸೌಲಭ್ಯ; ಸಂಚಾರಿ ಆರೋಗ್ಯ ಘಟಕ; ನೀರು ಸರಬರಾಜು; ಕೃಷಿ ಅಭಿವೃದ್ಧಿಗಾಗಿ ಎತ್ತು, ಗಾಡಿ ಇತ್ಯಾದಿ ವ್ಯವಸಾಯ ಉಪಕರಣಗಳಿಗೆ ಸಹಾಯಧನ; ಅರಣ್ಯ ಇಲಾಖೆಯಿಂದ ಬೆತ್ತ ಬಿದಿರು ವಿತರಣೆ, ಮುಂತಾದುವೆಲ್ಲ ಮೂಲ ನಿವಾಸಿ ಗುಂಪುಗಳ ಅಭಿವೃದ್ಧಿಗಾಗಿರುವ ಇನ್ನಿತರ ಕಾರ್ಯಕ್ರಮಗಳಾಗಿವೆ.

## ಕಾರ್ಮಿಕರ ಕಲ್ಯಾಣ

ಸ್ವಾತಂತ್ರ್ಯಪೂರ್ವದಲ್ಲಿ ಕೈಗಾರಿಕಾ ಅಭಿವೃದ್ಧಿಯು ಸೀಮಿತವಾಗಿದ್ದುದರಿಂದ ಕಾರ್ಮಿಕ ಸಂಘಟನೆಯೂ ಸೀಮಿತವಾಗಿತ್ತು.ಇದೇ ರೀತಿ ಕಾರ್ಮಿಕ ಕಾನೂನುಗಳೂ ಕಡಿಮೆಯಿದ್ದವು. ಅಲ್ಲದೆ ಈ ಕಾನೂನುಗಳ ಜಾರಿಗಾಗಿಯಾಗಲೀ ಕಾರ್ಮಿಕರ ಪ್ರಗತಿ ಕುರಿತಾಗಲೀ ಯಾರೂ ಹೆಚ್ಚಿನ ಗಮನವನ್ನೂ ಕೊಡುತ್ತಿರಲಿಲ್ಲ. ಭಾರತದಲ್ಲಿ ಆಧುನಿಕ ಉದ್ದಿಮೆಯು ವಿದೇಶೀ ಆಡಳಿತದ ಆಶ್ರಯದಲ್ಲಿ ಆರಂಭವಾಯಿತು. ಹಿಂದೆ ಇದ್ದ ಕರಕುಶಲ ಮತ್ತು ಗೃಹ ಕೈಗಾರಿಕೆಗಳನ್ನು ಬದಿಗೆ ತಳ್ಳಿ ನೂತನ ಉತ್ಪಾದನಾ ಕ್ರಮಗಳು ಆರಂಭವಾದವು. ಆದರೆ ಕಾರ್ಮಿಕರೊಂದಿಗೆ ನಿಕೃಷ್ಟವಾಗಿ ನಡೆದುಕೊಳ್ಳಲಾಗುತ್ತಿತ್ತು. ಮಾಲಿಕ ಹಾಗೂ ಕಾರ್ಮಿಕನ ಸಂಬಂಧವು ಜೀತ ಪದ್ಧತಿಯ ರೀತಿಯಲ್ಲಿತ್ತು. ಅಲ್ಪ ಹಣಕ್ಕಾಗಿ ದಿನವಿಡೀ ಕಲುಷಿತ ಪರಿಸರದಲ್ಲಿ ಅವರು ಕೆಲಸ ಮಾಡಬೇಕಾಗಿತ್ತು. ಮದರಾಸ್ ಕರ್ನಾಟಕ ಪ್ರದೇಶದಲ್ಲಿ ೧೯೨೬ರ ಕೇಂದ್ರ ಶಾಸನಗಳು ಜಾರಿಯಲ್ಲಿದ್ದರೂ, ಕಾರ್ಮಿಕರಿಗೆ ಅವುಗಳ ಬಗ್ಗೆಯಾಗಲೀ ತಮ್ಮ ಹಕ್ಕು ಬಾಧ್ಯತೆಗಳ ಕುರಿತಾಗಲೀ ಯಾವುದೇ ಅರಿವು ಇರಲಿಲ್ಲ. ಅಲ್ಲದೆ ಅವರ ನಡುವೆ ಸರಿಯಾದ ಸಂಘಟನೆಯೂ ಇರಲಿಲ್ಲ.

ಮೊದಲ ಮಹಾಯುದ್ಧದ ಅಂತ್ಯದ ವೇಳೆಗೆ ಕರ್ನಾಟಕದಲ್ಲಿ ಆಧುನಿಕ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದರೂ ಕಾರ್ಮಿಕ ಸಂಘಟನೆಯಾಗಿರಲಿಲ್ಲ. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ೧೯೩೧ರ ಕೊನೆಯ ದಶಕದಲ್ಲಿ ಕಾರ್ಮಿಕ ನಿಯೋಜನೆ ಸಮಿತಿಯೊಂದನ್ನು ರಚಿಸಿ ಅನಿಯಂತ್ರಿತ ಕೈಗಾರಿಕಾ ವ್ಯವಹಾರಗಳನ್ನು ಮತ್ತು ಕೂಲಿಕಾರರ ಪರಿಸ್ಥಿತಿಗಳನ್ನು ವರದಿ ಮಾಡುವಂತೆ ಆದೇಶಿಸಿತು. ೧೯೨೬ರಲ್ಲಿ ಕೇಂದ್ರದಲ್ಲಿ ಮನ್ನಣೆ ಪಡೆದ ಕಾರ್ಮಿಕ ಸಂಘಗಳ ಅದಿನಿಯಮವು ಹಳೆಯ ಮೈಸೂರು ಪ್ರದೇಶಗಳಿಗೆ ೧೯೪೧ರ ವರೆಗೆ ಅನ್ವಯವಾಗಲಿಲ್ಲ. ಆದರೂ ಕಾಂಗ್ರೆಸ್ ಮುಖಂಡರು ಮೊದಲ ಬಾರಿಗೆ ಕೆಲಸಗಾರರ ಸಂಘಟನೆಯೊಂದನ್ನು ಬೆಂಗಳೂರಿನಲ್ಲಿ ಕೈಗೊಂಡರು. ವೃತ್ತಿ ಸಂಘಗಳಿಗೆ ನೋಂದಣಿ ಮಾಡಿಸುವ, ಅವುಗಳಿಗೆ ವ್ಯಾಖ್ಯೆ ಕೊಡುವ ಉದ್ದೇಶದಿಂದ ಸರ್ಕಾರ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿಗೆ ತಂದಿತು. ಆ ನಂತರ ರಾಜ್ಯದಲ್ಲಿ ಅಲ್ಲಲ್ಲಿ ಕಾರ್ಮಿಕರು ಸಂಘಟನೆಗೊಂಡು, ಸಂಘಗಳು ಅಸ್ತಿತ್ವಕ್ಕೆ ಬರತೊಡಗಿದವು.

೧೯೯೭ರಲ್ಲಿ ಉಡುಪಿ ಜಿಲ್ಲೆಯು ಪ್ರತ್ಯೇಕ ಜಿಲ್ಲೆಯಾಗಿ ರಚನೆಗೊಳ್ಳುವವರೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ಮತ್ತು ಅದರಡಿಯ ಮೂರು ತಾಲೂಕುಗಳೂ ಸೇರಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರ ಹೋರಾಟದಲ್ಲಿ ಉಡುಪಿ ಜಿಲ್ಲೆಯ ಕಾರ್ಮಿಕರೂ ಭಾಗಿಗಳಾಗಿದ್ದರೆಂದೂ, ಈ ಎರಡೂ ಜಿಲ್ಲೆಗಳ ಚಳವಳಿಯ ಅಂಶಗಳು ಒಂದರೊಳಗೊಂದು ಅಡಕವಾಗಿ ಒಂದೇ ಆಗಿರುತ್ತವೆಂದೂ ಇಲ್ಲಿ ಪರಿಗಣಿಸಬೇಕಾಗುತ್ತದೆ. ಅದರಂತೆ ಮಂಗಳೂರಿನಲ್ಲಿ ೧೯೩೪-೩೫ರ ಸಮಯದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕತ್ವದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ನೇತೃತ್ವದಲ್ಲಿ ಸಾರಿಗೆ ಮತ್ತು ಮುದ್ರಣಾಲಯಗಳ ಕಾರ್ಮಿಕರ ಸಂಘಟನೆಗಳು ಆರಂಭಗೊಂಡವು. ಕಮಲಾದೇವಿ ಚಟ್ಟೋಪಾಧ್ಯಾಯರು, ತಮ್ಮದೇ ಮುಂದಾಳತ್ವದಲ್ಲಿ, ಕುಂದಾಪುರದಲ್ಲಿ, ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳ ಯೂನಿಯನ್‌ಅನ್ನು ಸಹ ಸಂಘಟಿಸಿ ಬಸರೂರಿನ ಸುಬ್ಬಣ್ಣ ಶೆಟ್ಟರನ್ನು ಅದರ ಕಾರ್ಯಸಮಿತಿ ಸದಸ್ಯರಾಗಿ ನೇಮಿಸಿದ್ದರು. ಮಹರಾಲಿ, ಸೋಲಿ ಬಾಟ್ಲಿವಾಲ ಮುಂತಾದ ಕಾರ್ಮಿಕ ಮುಖಂಡರು ಮಂಗಳೂರಿಗೆ ಬಂದು ಹೋದರು. ಹೈದರ್ ಎಂಬುವವರ ಮುಖಂಡತ್ವದಲ್ಲಿ ಒಂದು ಮುಷ್ಕರ ನಡೆದು ಅಸಫಲಗೊಂಡಿತು.

೧೯೩೭ರ ಸುಮಾರಿಗೆ ಹೆಂಚು ಕಾರ್ಖಾನೆ, ಗೋಡಂಬಿ ಕೆಲಸಗಾರರು ಮತ್ತು ಬೀಡಿ ಕಟ್ಟುವವರೂ ಸಂಘಟಿತರಾಗಿದ್ದರು. ಸಿಂಪ್ಸನ್ ಸೋನ್ಸ್, ಕೇಶವ ಕಾಮತ್ ಮೊದಲಾದವರು ಸ್ಥಳೀಯ ಕಾರ್ಮಿಕ ನಾಯಕರಾಗಿದ್ದು, ಎಸ್.ಎ. ಘಾಟೆ ಎಂಬುವರ ಸಂಪರ್ಕದೊಂದಿಗೆ ನೇಯ್ಗೆ ಕೆಲಸಗಾರರನ್ನೂ, ಬೀಡಿ ಕಾರ್ಮಿಕರನ್ನೂ ಸಂಘಟಿಸಿದರು. ದಕ್ಷಿಣ ಕನ್ನಡದ ಜಿಲ್ಲೆಯ ಸಾರಿಗೆ ಸಂಪರ್ಕದ ನೌಕರರೂ ಒಂದುಗೂಡಿದ್ದರು. ಅಹಮ್ಮದ್ ಭಾವ, ಎಸ್.ಎನ್. ಹೊಳ್ಳ, ಕೃಷ್ಣಶೆಟ್ಟಿ ಮುಂತಾದವರು ನೇಯ್ಗೆ ಹಾಗೂ ಬೀಡಿ ಕಾರ್ಮಿಕರ ಸಂಘಗಳಲ್ಲಿ ಸಕ್ರಿಯರಾಗಿದ್ದರು. ಅದೇ ತಾನೇ ಜೈಲಿನಿಂದ ಬಿಡುಗಡೆಯಾಗಿ ಬಂದಿದ್ದ ಎಸ್.ವಿ. ಡಾಂಗೆಯವರ ಅಧ್ಯಕ್ಷತೆಯಲ್ಲಿ, ಕಾರ್ಮಿಕ ಚಳವಳಿಗೊಂದು ಸಂಘಟಿತ ರೂಪ ಕೊಡುವ ಉದ್ದೇಶದಿಂದ ೧೯೪೩-೪೪ರಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನ ನಡೆಯಿತು. ದಕ್ಷಿಣ ಕನ್ನಡ ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲ್ ರಚನೆಯಾಗಿ, ಕಾಂಗ್ರೆಸ್ ನಾಯಕರಾದ ಕೆ.ಕೆ. ಶೆಟ್ಟಿಯವರು ಅಧ್ಯಕ್ಷರೂ, ಕಮ್ಯುನಿಸ್ಟ್ ಕಾರ್ಯ ಕರ್ತರಾದ ಬಿ.ವಿ. ಕಕ್ಕಿಲಾಯರವರು ಇದರ ಪ್ರಧಾನ ಕಾರ್ಯದರ್ಶಿಯೂ ಆಗಿ ನೇಮಕಗೊಂಡರು.

೧೯೪೪-೪೫ರಲ್ಲಿ ಸಂಘಟನೆಗೊಂಡ ಮಂಗಳೂರಿನ ಹೆಂಚಿನ ಕಾರ್ಖಾನೆಯ ನೌಕರರ ಸಂಘವು, ೧೯೪೫ರಲ್ಲಿ ಮೊದಲ ಮುಷ್ಕರ ಮಾಡಿತು. ನಂತರದಲ್ಲಿ ಇದರ ಕಾರ್ಯಗಳು ಕುಂದಾಪುರದವರೆಗೆ ವಿಸ್ತೃತಗೊಂಡು ಅನೇಕ ಹೋರಾಟಗಳನ್ನು ನಡೆಸಿ ಹಲವಾರು ಪ್ರಕರಣಗಳಲ್ಲಿ ಜಯ ಸಾಧಿಸಿತು. ಶಾಂತಾರಾಂ ಪೈಯವರು ಮತ್ತು ಲಿಂಗಪ್ಪ ಸುವರ್ಣರವರು ಕ್ರಮವಾಗಿ ಈ ಸಂಘಟನೆಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾದರು. ಕಾರ್ಖಾನೆಗಳನ್ನು ಮುಚ್ಚಿದಾಗ, ಕಾರ್ಮಿಕರಿಗೆ ಪರಿಹಾರ ಬೇಡಿ, ಶಾಂತಾರಾಂ ಪೈಯವರು ಅನ್ನ ಸತ್ಯಾಗ್ರಹ ನಡೆಸಿದರು. ಸಂಪೂರ್ಣ ಕಾರ್ಮಿಕ ಸಮುದಾಯ ಮತ್ತು ಸಾರ್ವಜನಿಕರ ಬೆಂಬಲವೂ ಅವರಿಗೆ ದೊರೆಯಿತು.

ಕರ್ನಾಟಕದಲ್ಲಿ ಕೆಲವು ಉದ್ದಿಮೆದಾರರು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಹೆಚ್ಚು ಪರಿಣಾಮಕಾರಿ ಯಾಗಿಲ್ಲದಿದ್ದುದರಿಂದ ಮತ್ತು ಕಾರ್ಮಿಕ ಸಂಘಗಳು ಇವುಗಳನ್ನು ಹೇಗೆ ಜಾರಿಗೊಳಿಸಬೇಕೆಂಬ ತಿಳುವಳಿಕೆ ಯಿಲ್ಲದ್ದರಿಂದ ಸರ್ಕಾರದ ಮಧ್ಯ ಪ್ರವೇಶ ಅವಶ್ಯಕವಾಯಿತು. ಇದರೊಂದಿಗೆ ಭಾರತ ಸರ್ಕಾರದ ೧೯೪೭ರ ಔದ್ಯೋಗಿಕ ವ್ಯಾಜ್ಯ ಕಾಯ್ದೆಯನ್ನೂ ಜಾರಿಗೆ ತಂದಿತು. ಸಂಧಾನದ ಮತ್ತು ಕಡ್ಡಾಯ ಮಧ್ಯಸ್ಥಿಕೆ ಮುಖಾಂತರ ಔದ್ಯೋಗಿಕ ಶಾಂತಿಯನ್ನು ದೊರಕಿಸಿಕೊಡುವುದು, ಸಂಘಟಿತ ಕಾರ್ಮಿಕರ ವ್ಯಾಜ್ಯಗಳಿಗೆ ಪರಿಹಾರವನ್ನು ನೀಡುವುದು ಈ ಕಾಯ್ದೆಯ ಮುಖ್ಯ ಉದ್ದೇಶಗಳಾಗಿತ್ತು. ಅದರಂತೆ ಕೇಂದ್ರ ಸರ್ಕಾರದ, ೧೯೪೮ರ ಕಾರ್ಖಾನೆಯ ಕಾನೂನಿನನ್ವಯ ರಾಜ್ಯದಲ್ಲಿ ೧೯೫೦ರಿಂದ ಪ್ರತಿಯೊಬ್ಬ ಉದ್ಯಮಿಯೂ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಯೋಜನೆಯಡಿ ಕುಡಿಯಲು ತಂಪಾದ ಮತ್ತು ಶುದ್ಧವಾದ ನೀರು, ಶೌಚ ಗೃಹ, ೨೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಉಪಾಹಾರ ಮಂದಿರ, ೧೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತೀ ಕಾರ್ಖಾನೆಯಲ್ಲೂ ಉಪಾಹಾರ ಕೋಣೆಯನ್ನು ೫೦ ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲೂ ವಿಶ್ರಾಂತಿ ಗೃಹ, ನೌಕರರ ಮಕ್ಕಳಿಗೆ ಶಿಶುವಿಹಾರ, ಒದಗಿಸಬೇಕೆಂಬ ನಿರ್ಬಂಧನೆಯನ್ನು ಜಾರಿಗೊಳಿಸಲಾಯಿತು. ಕಾರ್ಯಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಕಾರ್ಖಾನೆಯಲ್ಲೂ ಆವಿ, ಹೊಗೆ ಮತ್ತು ಧೂಳು ಹೊರಗೆ ಹೋಗಲು ಸೂಕ್ತ ವ್ಯವಸ್ಥೆ, ಆಕಸ್ಮಿಕ ಅಪಘಾತಗಳನ್ನು ತಡೆಗಟ್ಟಲು ಯಂತ್ರಗಳಿಗೆ ಬೇಲಿ ನಿರ್ಮಾಣ, ಕಾರ್ಮಿಕರಿಗೆ ಸುರಕ್ಷತೆಯ ವಸ್ತ್ರಗಳ ಪೂರೈಕೆ, ಪಾದರಕ್ಷೆಗಳು ಹಾಗೂ ಕನ್ನಡಕಗಳನ್ನು ಒದಗಿಸುವಿಕೆ, ಇವೇ ಮುಂತಾದ ಅಗತ್ಯ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲೇಬೇಕೆಂಬ ಕಡ್ಡಾಯ ನೀತಿ ಜಾರಿಗೆ ಬಂದಿತು. ಸಾಮಾನ್ಯ ಭವಿಷ್ಯ ನಿಧಿ ಸೌಕರ್ಯ, ಕಾರ್ಮಿಕ ಪರಿಹಾರ, ವೇತನ ಸಹಿತ ರಜಾ ಸೌಲಭ್ಯಗಳೇ ಮುಂತಾದ ಕಾನೂನು ಸೌಲಭ್ಯಗಳಲ್ಲದೆ, ವಾಚನಾಲಯ, ಗ್ರಂಥಾಲಯ, ವೈದ್ಯಕೀಯ, ಮತ್ತು ಕ್ರೀಡಾ ಸೌಕರ್ಯಗಳನ್ನೂ ಕೆಲವು ಅಭಿವೃದ್ಧಿ ಹೊಂದಿದ ಕಾರ್ಖಾನೆಗಳಲ್ಲಿ ಒದಗಿಸಲಾಯಿತು.

ಕೆಲಸದ ವೇಳೆಗೆ ಮಿತಿ, ವೇತನ ಪಾವತಿ, ಸೇವಾ ನಿಯಮಗಳು, ಹೆರಿಗೆ ಭತ್ಯೆ ಮುಂತಾದ ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ವಿವಿಧ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಇದರಿಂದ ಕಾರ್ಮಿಕರಿಗೆ ಹಲವು ರೀತಿಯಲ್ಲಿ ಸಹಾಯವಾಯಿತು. ೧೯೫೪ರಲ್ಲಿ ಭಾರತೀಯ ಮಜ್ದೂರು ಸಂಘದ ಆಶ್ರಯದಲ್ಲಿ, ಗೇರು ಬೀಜ ಶ್ರಮಿಕ ಸಂಘ, ವಾಣಿಜ್ಯ ಶ್ರಮಿಕ ಸಂಘ, ಹಂಚು ಮಜ್ದೂರ ಸಂಘ–ಈ ಸಂಘಟನೆಗಳನ್ನು ಸ್ವತಃ ಗೇರುಬೀಜ ಕಾರ್ಖಾನೆಯಲ್ಲಿ ಕೆಲಸಗಾರರಾಗಿದ್ದ ಭೊ. ಕೊರಗಪ್ಪ ಸುವರ್ಣರು ಕಟ್ಟಿ ಬೆಳೆಸಿದರು. ಅವರು ತಮ್ಮ ಇಡೀ ಜೀವನವನ್ನು ಶ್ರಮಿಕರ ಹಕ್ಕು ಬಾಧ್ಯತೆಗಳ ಹೋರಾಟಕ್ಕಾಗಿ ಮುಡಿಪಿಟ್ಟರು. ಈ ಚಳವಳಿಯಲ್ಲಿ ಇತ್ತೀಚೆಗೆ ನಿಧನರಾದ ಪ್ರಭಾಕರ ಘಾಟೆಯವರು ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡು ಅಖಿಲಭಾರತ ಮಟ್ಟದ ಪ್ರಭಾವಿ ಕಾರ್ಯಕರ್ತರಾದರು. ಮಂಗಳೂರಿನ ಶಂಭುಶೆಟ್ಟಿ ಮತ್ತು ಕುಂದಾಪುರದಲ್ಲಿ ನ್ಯಾಯವಾದಿಗಳಾಗಿದ್ದ ಮಹಾಬಲೇಶ್ವರ ಅರ್ತಿಯವರೂ ಶ್ರಮಿಕ ಚಳವಳಿಯಲ್ಲಿ ಪಾಲ್ಗೊಂಡಿದ್ದರು.

ಹಿಂದ್ ಮಜ್ದೂರ್ ಸಭಾ ಸೋಶಲಿಸ್ಟ್ ನೆಲೆಯಲ್ಲಿ ಟ್ಯಾಕ್ಸಿ, ರಿಕ್ಷಾ, ಬಸ್ಸು ಕೆಲಸಗಾರರ ಸಂಘಟನೆಗಳಲ್ಲಿ ಮೊದಲಾಗಿ ಜಿಲ್ಲೆಯ ಶ್ರಮಿಕ ಚಳವಳಿಯಲ್ಲಿ ಸೇವೆ ಸಲ್ಲಿಸಿದ ಇವರಲ್ಲಿ ಸಂಜೀವನಾಥ ಐಕಳ, ಅಮ್ಮೆಂಬಳ ಬಾಳಪ್ಪ ಇವರು ಹೆಚ್ಚಿನ ಪ್ರಭಾವಶಾಲೀ ನಾಯಕರಾಗಿದ್ದರು. ಅಲ್ಲದೆ ಕೇಂದ್ರದಲ್ಲಿ ಮಂತ್ರಿಗಳಾಗಿದ್ದ ಜಾರ್ಜ್ ಫರ್ನಾಂಡಿಸ್‌ರವರು ತಮ್ಮ ಸಾಮಾಜಿಕ ಜೀವನದ ಮೊದಲ ದಿನಗಳಲ್ಲಿ ಮಂಗಳೂರಿನಲ್ಲಿ ಹಿಂದ್ ಮಜ್ದೂರ್ ಸಭಾದ ಪ್ರಭಾವಶಾಲಿ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು. ಮುಂದಿನ ದಿನಗಳಲ್ಲಿ ಲೋಕಯ್ಯ ಶೆಟ್ಟಿಯವರು, ಈ ಚಳವಳಿಯಲ್ಲಿ ಮುಂಚೂಣಿಯಲ್ಲಿ ನಿಂತರು. ಈಗ ಅವರ ಮಗ, ಆ ಸ್ಥಾನವನ್ನು ತುಂಬಿದ್ದಾರೆ.

೧೯೫೮ರಲ್ಲಿ ಮಂಗಳೂರಿನಲ್ಲಿ ಇಂಟರ್ ನ್ಯಾಶನಲ್ ಟ್ರೇಡ್ ಯೂನಿಯನ್ ಪ್ರಾರಂಭವಾಯಿತು. ಇದು ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನ ಸಂಘಟನೆಯನ್ನು ಮಾಡಿತು. ಇದರ ಅಧ್ಯಕ್ಷರಾಗಿ ಜಗನ್ನಿವಾಸ ಶೆಟ್ಟಿ ಎಂಬುವವರು ದುಡಿದರು. ಇವರ ಜೊತೆಗೆ ಪ್ರಭಾಕರ ಶೇಟ್ ಎನ್ನುವವರೂ ಇದ್ದರು. ೧೯೮೦ರ ಸುಮಾರಿನಿಂದ ಇಂಟಕ್‌ನಲ್ಲಿ ಎನ್.ಎಂ. ಅದ್ಯಂತಾಯರು ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಈಗ ಇವರು ರಾಜ್ಯದ ಇಂಟಕ್‌ನ ಅಧ್ಯಕ್ಷರಾಗಿದ್ದಾರೆ. ಈ ಯೂನಿಯನ್‌ನ ಕಾರ್ಯವ್ಯಾಪ್ತಿಯು ಆ ಸಮಯದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆರಡರ ಎಲ್ಲ ಕಾರ್ಮಿಕರ ಹಿತಾಸಕ್ತಿಗಳನ್ನು ಒಳಗೊಂಡಿತ್ತು.

## ರಾಜ್ಯ ಕಾರ್ಮಿಕ ಇಲಾಖೆ

ಕೇಂದ್ರ ಮತ್ತು ರಾಜ್ಯಗಳು ಕಾರ್ಮಿಕರ ಕಲ್ಯಾಣಕ್ಕಾಗಿ ರೂಪಿಸಿರುವ ಕಾರ್ಮಿಕ ಕಾಯ್ದೆಗಳನ್ನು ಮತ್ತು ನಿಯಮಗಳನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವ ಸಲುವಾಗಿ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯು ಸ್ಥಾಪನೆಗೊಂಡಿದೆ. ಕಾರ್ಮಿಕ ಕಾಯ್ದೆಗಳನ್ನು ಕಾರ್ಯಗತಗೊಳಿಸುವ ಮೂಲಕ ಕಾರ್ಮಿಕರಿಗೆ ಇತರೆ ಕಲ್ಯಾಣಯುಕ್ತ ಆರೋಗ್ಯಕ್ಕೆ ಸಂಬಂಧ ಪಟ್ಟ ಸೌಲಭ್ಯಗಳನ್ನು ದೊರಕಿಸಿಕೊಡುವುದರ ಮುಖಾಂತರ ಸಾಮಾಜಿಕ ನ್ಯಾಯ ಹಾಗೂ ಕೆಲಸ ನಿರ್ವಹಿಸಲು ನಿರ್ಮಲ ಮತ್ತು ಆರೋಗ್ಯಕರ ವಾತಾವರಣ ಕಲ್ಪಿಸಲು ಶ್ರಮಿಸುತ್ತದೆ. ಇಲಾಖೆಯು ಸಂಘಟಿತ ಉದ್ದಿಮೆಗಳ ಮತ್ತು ಗ್ರಾಮಾಂತರ ಕೆಲಸಗಾರರ ಕಲ್ಯಾಣಕ್ಕಾಗಿ ಕೆಲವು ವಿಧಿ ನಿಯಮಗಳನ್ನು ರಚಿಸಿದೆ. ಈ ಎಲ್ಲಾ ನಿಯಮಗಳಂತೆ ಕಾರ್ಮಿಕ ಕಾಯ್ದೆಯಲ್ಲಿನ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಕಾರ್ಮಿಕರು ಪಡೆಯಬಹುದಾಗಿದೆ. ಇವರು ಕೆಲಸ ಮಾಡುತ್ತಿರುವ ಸ್ಥಳಗಳನ್ನು ಗುರ್ತಿಸಿ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ನಿಗಮಗಳ ಮುಖಾಂತರ ಆಡಳಿತ ಯೋಜನೆಗಳನ್ನು ಪ್ರಚಾರ ಮಾಡಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಕಾರ್ಮಿಕ ಇಲಾಖೆಯು ಕಾರ್ಮಿಕ ಮತ್ತು ಮಾಲೀಕರ ನಡುವೆ ವ್ಯಾಜ್ಯ–ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸಿ ಉತ್ತಮವಾದ ಕೈಗಾರಿಕಾ ಶಾಂತಿಯನ್ನು ಉಂಟು ಮಾಡುವುದು; ಅದರ ಮುಖಾಂತರ ಕಾರ್ಮಿಕರ ಅಭ್ಯುದಯ ಮತ್ತು ನಿರಂತರ ಉತ್ಪಾದನೆ ನಡೆಯುವಂತೆ ನೋಡಿಕೊಳ್ಳುವುದು; ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸುವ ಅಥವಾ ಪರಿಷ್ಕರಿಸುವುದರ ಮೂಲಕ ಅಸಂಘಟಿತ ವಲಯದ ಕಾರ್ಮಿಕ ವರ್ಗಗಳಿಗೆ

ಕನಿಷ್ಠ ವೇತನ ಸೌಲಭ್ಯವನ್ನು ತಲುಪಿಸುವುದು; ಇಪ್ಪತ್ತನಾಲ್ಕು ಕಾರ್ಮಿಕ ಕಟ್ಟಳೆಗಳನ್ನು ಜಾರಿಗೊಳಿಸುವುದು ಇತ್ಯಾದಿ ಜವಾಬ್ದಾರಿಗಳನ್ನು ಈ ಇಲಾಖೆಯು ಹೊಂದಿರುತ್ತದೆ.

ಉಡುಪಿ ಜಿಲ್ಲೆಯು ಮಂಗಳೂರು ಉಪವಿಭಾಗಕ್ಕೆ ಒಳಪಟ್ಟಿರುತ್ತದೆ. ಈ ಉಪವಿಭಾಗದ ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳನ್ನು ಸಹಾಯಕ ಕಾರ್ಮಿಕ ಆಯುಕ್ತರು ನೋಡಿಕೊಳ್ಳುತ್ತಿದ್ದು, ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳು ಈ ವಿಭಾಗದ ವ್ಯಾಪ್ತಿಗೆ ಒಳಪಡುತ್ತವೆ. ಮಂಗಳೂರಿನ ದಕ್ಷಿಣ ಉಪ ವಿಭಾಗದಲ್ಲಿ ಇಬ್ಬರು, ಉಡುಪಿ ಮತ್ತು ಶಿವಮೊಗ್ಗಗಳಲ್ಲಿ ಒಬ್ಬೊಬ್ಬರಂತೆ ನಾಲ್ವರು ಕಾರ್ಮಿಕ ಅಧಿಕಾರಿಗಳು ಸಹಾಯಕ ಕಾರ್ಮಿಕ ಆಯುಕ್ತರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಹಾಸನ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು, ಮಂಗಳೂರು ಸಹಾಯಕ ಕಾರ್ಮಿಕ ಆಯುಕ್ತರ ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ೧೯೯೯ರ ಏಪ್ರಿಲ್ ಒಂದರಿಂದ ಕಾರ್ಮಿಕ ಅಧಿಕಾರಿಗಳ ಕಛೇರಿಯು ಕಾರ್ಯಾರಂಭ ಮಾಡಿರುತ್ತದೆ. ಉಡುಪಿಯನ್ನೊಳಗೊಂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ೧೯೪೬ರಲ್ಲಿ, ಸಾರಿಗೆ ಕೆಲಸಗಾರರು ಬೋನಸ್ ನೀಡಿಕೆಗೆ ಚಳವಳಿ ಮಾಡಿದರು. ಮಾತುಕತೆಯ ನಂತರ ಅವರಿಗೆ ಅದು ದೊರಕುವಂತಾಯಿತು. ಮಲಬಾರಿನಲ್ಲಿ ಕೊಡಲಾದ ಒಂದು ಪ್ರಶಸ್ತಿಯಿಂದಾಗಿ, ಹಲವು ಕಾರ್ಖಾನೆಗಳ ಕೆಲಸಗಾರರಿಗೆ ಹೆಚ್ಚಿನ ಸೌಲಭ್ಯಗಳು ದೊರೆತವು. ಮತ್ತು ಈ ಸೌಲಭ್ಯಗಳನ್ನು ದಕ್ಷಿಣ ಕನ್ನಡಕ್ಕೂ ಅನ್ವಯಿಸುವಂತೆ ಮಾಡಲಾಯಿತು. ೧೯೪೮ರಲ್ಲಿ, ಗೋಡಂಬಿ ಕಾರ್ಖಾನೆಯ ಕೆಲಸಗಾರರು ಹೆಚ್ಚಿನ ಕೂಲಿ ಮತ್ತು ಬೋನಸ್ ಪಾವತಿಸಲು ಚಳವಳಿ ನಡೆಸಿದರು. ಕಾರ್ಮಿಕ ಇಲಾಖೆಯ ತಕ್ಷಣದ ಮಧ್ಯಸ್ತಿಕೆಯಿಂದಾಗಿ ಅವರ ಬೇಡಿಕೆಗಳು ಈಡೇರಿದವು. ಕೈಮಗ್ಗ ಕಾರ್ಖಾನೆಯ ಕೆಲಸಗಾರರು, ಮೋಟಾರ್ ಸಾರಿಗೆ ಕೆಲಸಗಾರರು ಮತ್ತು ಎಂಜಿನಿಯರಿಂಗ್ ಕೈಗಾರಿಕೆ ಕೆಲಸಗಾರರದೆಲ್ಲ ಸ್ಥಿತಿಗತಿಗಳು ಸುಧಾರಣೆ ಗೊಂಡಿತಲ್ಲದೆ ಭವಿಷ್ಯದಲ್ಲಿಯೂ ಉತ್ತಮ ಯೋಜನೆಗಳು ಜಾರಿಗೊಳ್ಳುವ ಬಗ್ಗೆ ಆಶ್ವಾಸನೆಗಳು ದೊರತವು.

೧೯೨೬ರ ಟ್ರೇಡ್ ಯೂನಿಯನ್ ಕಾಯ್ದೆಯು, ಕಾರ್ಮಿಕರು ತಮ್ಮ ಅಹವಾಲುಗಳನ್ನು ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ, ಅವರು ಟ್ರೇಡ್ ಯೂನಿಯನ್‌ಗಳಲ್ಲಿ ಸಂಘಟಿತರಾಗುವ ಹಕ್ಕನ್ನು ನೀಡುತ್ತದೆ. ಸಂಘಟನೆಯಿಂದ ಸಾಮೂಹಿಕ ವ್ಯವಹಾರ ಹಾಗೂ ಟ್ರೇಡ್ ಯೂನಿಯನ್‌ಗಳ ವ್ಯವಸ್ಥೆಗೆ ಅನುಕೂಲವಾಗುತ್ತದೆಂಬುದನ್ನು ತ್ವರಿತವಾಗಿ ಅರಿತ ಇಲ್ಲಿಯ ಕಾರ್ಮಿಕರು ತಮ್ಮ ಏಳಿಗೆಗಾಗಿ, ಟ್ರೇಡ್ ಯೂನಿಯನ್‌ಗಳನ್ನು ರಚಿಸಿಕೊಂಡರು. ಜಿಲ್ಲೆಯಲ್ಲಿ (ಆಗ ಇದರಲ್ಲಿ ಉಡುಪಿ ಜಿಲ್ಲೆಯೂ ಸೇರಿದಂತೆ) ಟ್ರೇಡ್ ಯೂನಿಯನ್‌ಗಳ ಬೆಳವಣಿಗೆಯನ್ನು ಚೆನ್ನಾಗಿ ಗುರುತಿಸಬಹುದಾಗಿದ್ದು, ೧೯೫೮ರಲ್ಲಿ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ, ಒಟ್ಟು ೧೭೨೦೦ಕ್ಕಿಂತ ಹೆಚ್ಚಿನ ಸದಸ್ಯತ್ವವಿದ್ದ ನಲವತ್ತು ಟ್ರೇಡ್ ಯೂನಿಯನ್‌ಗಳಿದ್ದವು. ೧೯೭೨ರ ಜನವರಿಯ ಹೊತ್ತಿಗೆ ಈ ಸಂಖ್ಯೆಯು ೫೯ಕ್ಕೂ, ಒಟ್ಟು ಸದಸ್ಯತ್ವ ಸಂಖ್ಯೆ ೨೨,೦೦೦ಕ್ಕೂ ಮೇಲೇರಿತ್ತು. ರಾಜ್ಯದಲ್ಲಿ ೧೯೮೦ರ ಡಿಸೆಂಬರ್ ಅಂತ್ಯಕ್ಕೆ ಒಟ್ಟು ೧೬೩೬ ಕಾರ್ಮಿಕ ಸಂಘಗಳಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಉಡುಪಿ ಜಿಲ್ಲೆಯೂ ಸೇರಿ) ೧೧೨ ಕಾರ್ಮಿಕ ಸಂಘಗಳಿದ್ದವು. ದೇಶದ ಸ್ವಾತಂತ್ರ್ಯಾ ನಂತರದ ಮೊದಲ ದಶಕದಲ್ಲಿ, ಅಂದಿನ ದಕ್ಷಿಣ ಕನ್ನಡದಲ್ಲಿ, ವರ್ಷದಲ್ಲಿ ಸರಾಸರಿ ೫೦ ರಿಂದ ೬೦ರ ವರೆಗೆ ಕೈಗಾರಿಕಾ ವ್ಯಾಜ್ಯಗಳಿರುತ್ತಿದ್ದವು. ಈ ವ್ಯಾಜ್ಯಗಳು ಸಾಮಾನ್ಯವಾಗಿ ಪರಸ್ಪರ ಮಾತುಕತೆಗಳ ಮೂಲಕ ಇತ್ಯರ್ಥಗೊಳ್ಳುತ್ತಿದ್ದವು. ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿಯಾಗುತ್ತ ಹೋದಂತೆಲ್ಲ ಹಾಗೂ ಕೆಲಸಗಾರರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಹೆಚ್ಚಿದಂತೆಲ್ಲ ಕೈಗಾರಿಕಾ ವ್ಯಾಜ್ಯಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ೧೯೬೭ರಿಂದ ೧೯೭೨ರ ಅವಧಿಯಲ್ಲಿ ಈ ಕೈಗಾರಿಕಾ ವ್ಯಾಜ್ಯಗಳ ಸಂಖ್ಯೆ ಸರಾಸರಿ ೧೫೦ ಇದ್ದಿತು.

### ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ

೧೯೬೧ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆಯು ಒಂದು ಬಹುಮುಖ್ಯವಾದ ಕಾರ್ಮಿಕ ಶಾಸನವಾಗಿದ್ದು, ಇದು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಕಾರ್ಯಸ್ಥಿತಿಯನ್ನು ಕ್ರಮಬದ್ಧಗೊಳಿಸುತ್ತದೆ. ಕಡ್ಡಾಯವಾದ ವಾರದ ರಜೆಗಳು, ನಿಗದಿತ ಕೆಲಸದ ವೇಳೆ,

ನೌಕರಿಯಿಂದ ವಜಾಗೊಳಿಸುವ ಮುನ್ನ ಸರಿಯಾದ ನೋಟೀಸ್ ನೀಡುವುದು ಮತ್ತು ತಪ್ಪು ವಜಾಕ್ಕೆ ಸೂಕ್ತ ಪರಿಹಾರ ನೀಡಿಕೆ ಇವೇ ಮುಂತಾದ ಸೌಲಭ್ಯಗಳನ್ನು ಈ ಕಾಯಿದೆಯು ಅವಕಾಶ ಮಾಡಿಕೊಟ್ಟಿದೆ.

ಸರ್ಕಾರದ ಈ ಕಾಯಿದೆಯನ್ವಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ನು ನಡೆಸಲಾಗುತ್ತಿದೆಯೇ, ಯಾವುದಾದರೂ ಆಡಳಿತದಲ್ಲಿ ಇದನ್ನು ಉಲ್ಲಂಘಿಸಲಾಗುತ್ತಿದೆಯೇ ಎಂಬುದನ್ನು ತಮ್ಮ ವ್ಯಾಪ್ತಿಯ ಸ್ಥಳಗಳಲ್ಲಿ ಮೇಲ್ವಿಚಾರಣೆ ಮಾಡಿ ನೋಡುವುದು ಕಾರ್ಮಿಕ ಪರಿವೀಕ್ಷಕರ ಕರ್ತವ್ಯವಾಗಿರುತ್ತದೆ. ಪ್ರತ್ಯೇಕಗೊಂಡಿರುವ ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಇರುವ ಅಂಗಡಿ ಮುಂಗಟ್ಟುಗಳು ಮತ್ತು ಅವುಗಳಲ್ಲಿರುವ ಕಾರ್ಮಿಕರ ಸಂಖ್ಯೆಯು ಕೋಷ್ಟಕ ೧೬.೧೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೭ : ಜಿಲ್ಲೆಯ ಅಂಗಡಿ ಮುಂಗಟ್ಟುಗಳಲ್ಲಿರುವ ಕಾರ್ಮಿಕರ ವಿವರ**

| ಕ್ರ. ಸಂ. | ವಿವರಗಳು | ಉಡುಪಿ ತಾಲೂಕು | ಕುಂದಾಪುರ ತಾಲೂಕು | ಕಾರ್ಕಳ ತಾಲೂಕು | ವಾಣಿಜ್ಯ ಉದ್ದಿಮೆಗಳ ಒಟ್ಟು ಸಂಖ್ಯೆ |
|---|---|---|---|---|---|
| ೧ | ಅಂಗಡಿಗಳ ಸಂಖ್ಯೆ | ೧೮೫೪ | ೮೫೯ | ೮೪೭ | ೩೫೬೦ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೩೨೧೦ | ೧೦೨೪ | ೯೨೭ | ೫೧೬೧ |
| ೧ | ವಾಣಿಜ್ಯ ಉದ್ದಿಮೆಗಳ ಸಂಖ್ಯೆ | ೧೦೫ | ೬೯ | ೬೨ | ೨೩೬ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೬೫೬ | ೨೭೬ | ೩೧೫ | ೧೨೪೭ |
| ೧ | ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ | ೩೫೪ | ೧೦೬ | ೭೬ | ೫೩೬ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೩೧೦೬ | ೩೮೫ | ೨೭೭ | ೩೭೬೮ |
| ೧ | ಚಲನಚಿತ್ರ ಮಂದಿರಗಳ ಸಂಖ್ಯೆ | ೦೬ | ೦೪ | ೦೨ | ೧೨ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೨೫ | ೨೫ | ೦೫ | ೫೫ |
| | ನೇಮಕಗೊಂಡ ಕಾರ್ಮಿಕರ ಒಟ್ಟು ಸಂಖ್ಯೆ | ೨೩೯ | ೧೦೩೮ | ೯೮೭ | ೪೩೪೪ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಉಡುಪಿ ಜಿಲ್ಲೆ)*

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ ಆಯುಕ್ತರು, ಉಡುಪಿ ಜಿಲ್ಲೆ ಇವರುಗಳು ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಬರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಹೊಣೆಗಾರ ಅಧಿಕಾರಿಯಾಗಿರುತ್ತಾರೆ. ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಕನಿಷ್ಠ ವೇತನ ಕಾಯ್ದೆಯ ಪ್ರಾಧಿಕಾರಿ, ಇವರುಗಳು, ಕಾರ್ಮಿಕರಿಗೆ ಕಡಿಮೆ ವೇತನ ಕೊಟ್ಟ ಪಕ್ಷದಲ್ಲಿ, ಅವರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ೨೦೦೫ರ ಆರ್ಥಿಕ ವರ್ಷದ ಅಂತ್ಯದ ಸಮಯದಲ್ಲಿ, ೧೯೪೮ರ ಕನಿಷ್ಟ ವೇತನ ಕಾಯ್ದೆಯಲ್ಲಿ ಬರುವ ಉದ್ದಿಮೆಗಳ ಸಂಖ್ಯೆ, ವಾಣಿಜ್ಯ ಸಂಸ್ಥೆಗಳ ಮತ್ತು ಕಾರ್ಮಿಕರ ಸಂಖ್ಯೆ ಕೆಳಗಿನಂತಿದೆ.

**ಕನಿಷ್ಟ ವೇತನ ಕಾಯ್ದೆಯಡಿ ಉದ್ದಿಮೆ, ವಾಣಿಜ್ಯ ಸಂಸ್ಥೆ ಮತ್ತು ಕಾರ್ಮಿಕರ ವಿವರ**

| ವರ್ಷ | ಉದ್ದಿಮೆಗಳ ಸಂಖ್ಯೆ | ಒಟ್ಟು ಸಂಸ್ಥೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೨೦೦೪-೦೫ | ೭೩ | ೫೯೯೭ | ೮೧೩೩೦ |

ಕಾರ್ಮಿಕ ಅಧಿಕಾರಿ ಮತ್ತು ಸಮಾನ ವೇತನ ಕಾಯಿದೆಯ ಪ್ರಾಧಿಕಾರಿ, ಉಡುಪಿ ಜಿಲ್ಲೆ ಇವರುಗಳು ಸಮಾನ ವೇತನ ಕಾಯ್ದೆಯಡಿ ಬರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಹೊಣೆಗಾರ ಅಧಿಕಾರಿಯಾಗಿರುತ್ತಾರೆ. ಕಳೆದ ಒಂದು ವರ್ಷದಿಂದ ಈ ಕುರಿತ ಅರ್ಜಿಗಳು ಬರುತ್ತಿರುವುದಾಗಿ ತಿಳಿದು ಬಂದಿದೆ.

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ೧೯೬೧ರಡಿಯಲ್ಲಿ ದಿ. ೩೧.೧೨.೨೦೦೫ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ತಪಾಸಣೆ ಮತ್ತು ದಾಖಲಿಸಿರುವ ಮೊಕದ್ದಮೆಗಳು ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣೀ ವಿವರಗಳನ್ನು ಕೋಷ್ಟಕ ೧೬.೧೮-೧೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೮ : ಜಿಲ್ಲೆಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ – ನವೀಕರಣ ವಿವರ**

| ತಾಲೂಕು | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು | | ವಸೂಲಿಸಿದ ಶುಲ್ಕ / ಕಂದಾಯ | |
|---|---|---|---|---|
| | ನೊಂದಾಯಿಸಿದ್ದವುಗಳ ಸಂಖ್ಯೆ | ನವೀಕರಿಸಿದವುಗಳ ಸಂಖ್ಯೆ | ನೊಂದಣಿ ಶುಲ್ಕ | ನವೀಕರಣ+ದ್ವಿಪ್ರತಿ ಶುಲ್ಕ |
| ಉಡುಪಿ | ೧೮೫ | ೪೩೩ | ೯೭೭೭೫/– | ೨,೨೩,೨೭೫/– |
| ಕುಂದಾಪುರ | ೪೦ | ೧೧೮ | ೧೯,೭೫೦/– | ೨೪,೨೦೦/– |
| ಕಾರ್ಕಳ | ೧೮ | ೭೦ | ೪೨೫೦/– | ೧೪,೬೫೦/– |
| ಒಟ್ಟು | ೨೪೩ | ೬೨೧ | ೧,೨೧,೭೭೫/– | ೨,೬೨,೧೨೫/– |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಉಡುಪಿ ಜಿಲ್ಲೆ)*

**ಕೋಷ್ಟಕ ೧೬.೧೯ : ತಪಾಸಣೆ ಮತ್ತು ದಾಖಲಿಸಿರುವ ಮೊಕದ್ದಮೆಗಳ ವಿವರ**

| ಕ್ರ. ಸಂ. | ತಾಲೂಕು | ನಡೆಸಿದ ತಪಾಸಣೆಗಳ ಸಂಖ್ಯೆ | ಹೂಡಿರುವ ಮೊಕದ್ದಮೆಗಳ ಸಂಖ್ಯೆ | ಅಪರಾಧ ಎಂದು ಪರಿಗಣಿಸಲಾದ ಮೊಕದ್ದಮೆಗಳ ಸಂಖ್ಯೆ | ನಿರ್ದೋಷಿ ಎಂದು ಖುಲಾಸೆಯಾದ ಮೊಕದ್ದಮೆಗಳ ಸಂಖ್ಯೆ | ವಿಧಿಸಿದ ದಂಡದ ಮೊತ್ತ. ರೂ.ಗಳಲ್ಲಿ |
|---|---|---|---|---|---|---|
| ೧ | ಉಡುಪಿ | ೭೫೬ | ೪೬ | ೩೪ | ೬ | ೨೨,೦೫೦/– |
| ೨ | ಕುಂದಾಪುರ | ೧೩.೪ | ೪ | ೧೯ | – | ೧೫,೦೦೦/– |
| ೩ | ಕಾರ್ಕಳ | ೭೫ | – | ೮ | ೧ | ೧೦,೬೫೦/– |
| | ಒಟ್ಟು | ೯೬೫ | ೫೦ | ೬೧ | ೭ | ೪೭,೭೦೦/– |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಉಡುಪಿ ಜಿಲ್ಲೆ)*

ಕೆಲಸಗಾರರ ಜೀವನ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಹಾಗೂ ಅವರ ಆಸಕ್ತಿಗಳನ್ನು ಪೋಷಿಸಲು, ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯ ಮೂಲಕ ಕೆಳಕಂಡ ಕಾಯ್ದೆಗಳು ಜಾರಿಗೊಳ್ಳುತ್ತಿವೆ. ಕನಿಷ್ಠ ವೇತನ ಕಾಯ್ದೆ ೧೯೪೮ (ಕೃಷಿ), ಕನಿಷ್ಠ ವೇತನ ಕಾಯ್ದೆ ೧೯೪೮(ಕೃಷಿಯೇತರ). ವೇತನ ಪಾವತಿ ಕಾಯ್ದೆ ೧೯೩೬, ತೋಟ ಕಾರ್ಮಿಕರ ಕಾಯ್ದೆ ೧೯೫೧, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ೧೯೬೧, ಉಪಧನ ಪಾವತಿ ಕಾಯ್ದೆ ೧೯೭೨, ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ ೧೯೬೧, ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ ೧೯೬೫, ಬೀಡಿ ಸಿಗರೇಟು ಕಾರ್ಮಿಕರ ಕಾಯ್ದೆ ೧೯೬೬, ಸ.ವೇತನ ಕಾಯ್ದೆ ೧೯೭೬, ಗುತ್ತಿಗೆ ಕಾರ್ಮಿಕರ ಕಾಯ್ದೆ ೧೯೭೧, ಬಾಲ ಕಾರ್ಮಿಕರ ಕಾಯ್ದೆ ೧೯೮೬, ಕಾರ್ಮಿಕ ಸಂಘಗಳ ಕಾಯ್ದೆ ೧೯೨೬, – ಇವು ಜಿಲ್ಲೆಯ ಕಾರ್ಮಿಕರ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳ್ಳುತ್ತಿರುವಂತಹ ಕಾಯಿದೆಗಳಾಗಿವೆ.

## ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನಾ ಯೋಜನೆ

ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳಲ್ಲಿ ಹಾಗೂ ಭಾರತವನ್ನೊಳಗೊಂಡಂತೆ,ಅಭಿವೃದ್ಧಿಯ ಪಥದಲ್ಲಿರುವ ಹಲವಾರು ದೇಶಗಳಲ್ಲಿ ಇಂದಿಗೂ ಬಾಲಕಾರ್ಮಿಕರಾಗಿ ಮಕ್ಕಳನ್ನು ದುಡಿಸಿಕೊಳ್ಳುವುದು ಒಂದು ಸಾಮಾಜಿಕ ಪಿಡುಗಾಗಿದೆ. ೧೨ ಅಥವಾ ೧೪ ವಯಸ್ಸನ್ನು ಮೀರದ ಅಪ್ರಾಪ್ತ ವಯಸ್ಕರಾದ ಮಕ್ಕಳನ್ನು ಕೃಷಿ ಮತ್ತು ಕೈಗಾರಿಕಾ ಕೆಲಸಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಪೌಷ್ಟಿಕ ಆಹಾರದ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆ, ಶೈಕ್ಷಣಿಕ ಅವಕಾಶಗಳ ಕೊರತೆ, ಒತ್ತಾಯದ ದುಡಿತ, ಅನಾರೋಗ್ಯಕರವಾದ ವಾತಾವರಣದಲ್ಲಿ ನರಳುತ್ತಾ ಜೀವಿಸಬೇಕಾದ ಅನಿವಾರ್ಯತೆ, ಸಾಮಾಜಿಕ ಶೋಷಣೆ, ಕೌರ್ಯ ಮುಂತಾದ ಪೀಡೆಗಳಿಂದ ಜಗತ್ತಿನ ಲಕ್ಷಾಂತರ ಮಕ್ಕಳು ಬವಣೆ ಪಡುತ್ತಿದ್ದಾರೆ. ಗಂಟೆಗಟ್ಟಲೆ ಬೀಡಿ ಕಟ್ಟುವುದು, ಪಟಾಕಿ ತಯಾರಿಸುವ ಕಾರ್ಯಗಳಲ್ಲಿ ಪ್ರೌಢ ಕಾರ್ಮಿಕರಂತೆ ದುಡಿಯಬೇಕಾದ ಒತ್ತಡ, ತಮ್ಮ ಹಿತರಕ್ಷಣೆಗೆಂದು ಮಾಡಲಾಗಿರುವ ಕಾನೂನು ಸೌಲಭ್ಯವನ್ನು ಪಡೆದುಕೊಳ್ಳಲಾರದೆ ಅಸಹಾಯಕ ಪರಿಸ್ಥಿತಿಯಲ್ಲಿರುವ ಮಕ್ಕಳು

ಲಾಭಬುಡುಕ ಬಂಡವಾಳಗಾರರ ಹಾಗೂ ಅಮಾನವೀಯ ಉದ್ಯೋಗಪತಿಗಳ ಬಲಿಪಶುವಾಗಿರುವುದನ್ನು ನಾವು ಹಲವೆಡೆಗಳಲ್ಲಿ ಕಾಣಬಹುದಾಗಿದೆ. ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ ೪–೫:೮೬ರ ಪ್ರಕರಣದಲ್ಲಿ ೧೦–೧೨–೧೯೯೬ ರಂದು ನೀಡಿರುವ ನಿರ್ದೇಶನದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ಮಾರ್ಗಸೂಚಿ ನಿರ್ದೇಶನದನ್ವಯ ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಹದಿನಾಲ್ಕು ವರ್ಷದೊಳಗಿನ ಬಾಲ ಕಾರ್ಮಿಕರನ್ನು ಗುರ್ತಿಸಿ, ಅವರನ್ನು ಅಂತಹ ಕೆಲಸದಿಂದ ವಿಮುಕ್ತಗೊಳಿಸಿ, ಶಿಕ್ಷಣ ಸಂಸ್ಥೆಗಳಿಗೆ ಸೇರಿಸಿ ಶಿಕ್ಷಣ ಒದಗಿಸುವುದು, ಊಟ–ವಸತಿ ಕೊಡುವ ಮೂಲಕ ಪುನರ್ ವಸತಿ ಕಲ್ಪಿಸುವುದು, ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೊಡಗಿಸಿಕೊಂಡಂತಹ ಮಾಲೀಕರನ್ನು ಶಿಕ್ಷೆಗೆ ಒಳಪಡಿಸಿ ರೂ.೨೦,೦೦೦/– ಗಳಷ್ಟು ದಂಡ ವಸೂಲಿ ಮಾಡುವುದು ಮುಂತಾದ ಪ್ರಮುಖ ಜವಾಬ್ದಾರಿಗಳನ್ನು ವಹಿಸಲಾಗಿದೆ.

ಕರ್ನಾಟಕ ರಾಜ್ಯವನ್ನು ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುವ ಮಹತ್ವಾಕಾಂಕ್ಷೆಯಿಂದ ಮತ್ತು ಈ ಕಾರ್ಯವನ್ನು ಆರು ವರ್ಷಗಳ ಕಾಲಾವಧಿಯೊಳಗಾಗಿ ಪೂರೈಸಬೇಕೆಂದು ಸಂಕಲ್ಪ ಹೊಂದಿ ಕಾಲಬದ್ಧ ಕಾರ್ಯಕ್ರಮವನ್ನಾಗಿ ಪರಿಗಣಿಸಿ ಸರ್ಕಾರವು (ಸಿ.ಎಲ್.ಸಿ.೨೦೦೧ (೧) ದಿ.೨೯–೫–೨೦೦೧) ಆಜ್ಞೆಯನ್ನು ಜಾರಿಗೊಳಿಸಿರುತ್ತದೆ. ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಮತ್ತು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಗುರುತಿಸಲಾದ ಬಾಲ ಕಾರ್ಮಿಕರನ್ನು ವಿವಿಧ ಶಾಲೆಗಳಲ್ಲಿ ದಾಖಲಿಸಲು ಕಾರ್ಮಿಕ ಇಲಾಖೆಯ ಅಧಿಕಾರಿಗಳು, ವೈದ್ಯರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಹೆಚ್ಚಿನ ತಪಾಸಣೆಗಳನ್ನು ಮಾಡಿರುತ್ತಾರೆ. ಈ ತಂಡಗಳು ಬಾಲ ಕಾರ್ಮಿಕರು ಕೆಲಸ ಮಾಡುತ್ತಿದ್ದಂತಹ ಸಂಸ್ಥೆಗಳನ್ನು ತಪಾಸಣೆ ಮಾಡಿರುತ್ತಾರೆ. ಮತ್ತು ಉಲ್ಲಂಘನೆಗಳಿಗೆ ಮಾಲಿಕರಿಗೆ ತಪಾಸಣಾ ಟಿಪ್ಪಣಿಗಳನ್ನು ಜಾರಿ ಮಾಡಿದ್ದಾರೆ. ಗುರುತಿಸಲಾದ ಬಾಲ ಕಾರ್ಮಿಕರನ್ನು ಅವರ ಕಲಿಕಾ ಸಾಮರ್ಥ್ಯದ ಅನುಸಾರ ವಿಶೇಷ ಶಾಲೆಗಳಿಗೆ ಅಥವಾ ಮುಖ್ಯ ವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತದೆ. ಇದರ ಪರಿಣಾಮವಾಗಿ ಬಾಲ ಕಾರ್ಮಿಕರನ್ನು ಗುರುತಿಸುವುದು, ಮೊಕದ್ದಮೆ ಹೂಡುವುದು ಮತ್ತು ಅದೇ ದಿನ ಪುನರ್ವಸತಿಗೊಳಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡಲಾಗಿದೆ. ಮತ್ತು ಕರ್ನಾಟಕ ಅಂಗಡಿ ಮತ್ತು ಸಂಸ್ಥೆಗಳ ಕಾಯ್ದೆಯ ಕಲಂ ೨೪ ಹಾಗೂ ಕನಿಷ್ಠ ವೇತನ ಕಾಯ್ದೆ ೧೯೪೮ರ ಅಡಿಯಲ್ಲಿ ಹಲವಾರು ಉಲ್ಲಂಘನೆಗಳನ್ನು ತಪಾಸಿಸಿ ಉಲ್ಲಂಘನೆ ಮಾಡಿದ ಮಾಲಿಕರ ವಿರುದ್ಧ ಹೋರಾಡಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಿ, ಬಾಲ ಕಾರ್ಮಿಕರನ್ನು ಗುರುತಿಸಿ ಅವರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ಈ ಇಲಾಖೆಯಿಂದ ಮಾಡಲಾಗುತ್ತಿದ್ದು, ಬಾಲ ಕಾರ್ಮಿಕ ಕಾಯಿದೆಯನ್ನು ಅನುಷ್ಠಾನಗೊಳಿಸಿ ಪುನರ್ವಸತಿ ಕಲ್ಪಿಸಲ್ಪಟ್ಟ ವಿವರಗಳನ್ನು ಕೋಷ್ಟಕ ೧೬.೨೦, ೨೧, ಮತ್ತು ೨೨ರಲ್ಲಿ ನೀಡಲಾಗಿದೆ.

**ಕಾರ್ಮಿಕ ವಿಮಾ ಯೋಜನೆ**

ಕಾರ್ಮಿಕ ವಿಮಾ ಕಾಯ್ದೆ ಅಥವಾ ನೌಕರರ ರಾಜ್ಯ ವಿಮಾ ಕಾಯ್ದೆಯನ್ನು ೧೯೪೮ ರಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿತು. ಕಾರ್ಮಿಕ ಪರಿಹಾರ ಕಾಯ್ದೆ (Workman's compensation Act)ಯಲ್ಲಿದ್ದ ಹಲವಾರು ಆಡಳಿತಾತ್ಮಕ ದೋಷಗಳನ್ನು ನಿವಾರಿಸಿ, ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಕಾರಣದಿಂದ ಕಾರ್ಮಿಕ ರಾಜ್ಯ ವಿಮಾ ನಿಗಮವನ್ನು ಸ್ಥಾಪಿಸಲಾಯಿತು. ವಿಮಾದಾರನ ಆರೋಗ್ಯವನ್ನು ಕಾಪಾಡುವುದು ಹಾಗೂ ಗಾಯಗೊಂಡ ಕಾರ್ಮಿಕರಿಗೆ ಚಿಕಿತ್ಸೆ ನೀಡುವುದು, ವಿಮಾದಾರನನ್ನು ಅವಲಂಬಿಸಿದವರಿಗೆ ಸಹ ಹಲವು ವೈದ್ಯಕೀಯ ಸೌಲಭ್ಯಗಳನ್ನು ದೊರಕಿಸಿಕೊಡುವುದು ಈ ನಿಗಮದ ಉದ್ದೇಶವಾಗಿದೆ. ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ಜಾರಿಗೆ ಬಂದಿರುವ ನೌಕರರ ರಾಜ್ಯ ವಿಮಾ ಯೋಜನೆಯಡಿ ವೈದ್ಯಕೀಯ ಸೌಲಭ್ಯವನ್ನು ನೀಡುವುದಲ್ಲದೆ ಕಾಯಿಲೆ ಅಥವಾ ಹೆರಿಗೆ ಸಮಯಗಳಲ್ಲಿ ಬೇಕಾದ ಹಲವು ಅನುಕೂಲಗಳನ್ನೂ, ಅಂತ್ಯ

**ಕೋಷ್ಟಕ ೧೬.೨೦ : ಜಿಲ್ಲೆಯ ಬಾಲ ಕಾರ್ಮಿಕರ ಪುನರ್‌ವಸತಿ ವಿವರ**

<table>
<tr><td>೧</td><td colspan="4">ಅಪಾಯಕಾರಿ ಉದ್ದಿಮೆಗಳನ್ನು ಸಮೀಕ್ಷೆ ಮಾಡಿದ ಅವಧಿ</td><td colspan="3">೨೦೦೩ನೇ ಸೆಪ್ಟೆಂಬರ್ ತಿಂಗಳು</td></tr>
<tr><td>೨</td><td colspan="4">ಸಮೀಕ್ಷೆ ಮಾಡಿರುವ ಅಪಾಯಕಾರಿ ಉದ್ದಿಮೆಗಳು</td><td colspan="3">೬೨೮ ಸಂಸ್ಥೆಗಳು</td></tr>
<tr><td>೩</td><td colspan="4">೧೯೯೭ರಿಂದ ಇಲ್ಲಿಯವರೆಗೆ ಪತ್ತೆ ಹಚ್ಚಿದ<br>ಬಾಲ ಕಾರ್ಮಿಕರ ಸಂಖ್ಯೆ</td><td>ಅಪಾಯಕಾರಿ<br>೪೧</td><td>ಅಪಾಯಕಾರಿ ಯಲ್ಲದ<br>೮೨</td><td>ಒಟ್ಟು<br>೧೨೩</td></tr>
<tr><td>೪<br><br>೫</td><td colspan="4">ಪತ್ತೆ ಹಚ್ಚಿದ ಬಾಲ ಕಾರ್ಮಿಕರಲ್ಲಿ ಪುನರ್ವಸತಿ ಕಲ್ಪಿಸಿದ<br>ಬಾಲ ಕಾರ್ಮಿಕರ ಸಂಖ್ಯೆ<br>ಪತ್ತೆ ಹಚ್ಚಿದ ಬಾಲಕಾರ್ಮಿಕರ ಮಾಲೀಕರ ವಿರುದ್ಧ<br>ಹೂಡಿದ ಮೊಕದ್ದಮೆಗಳ ಸಂಖ್ಯೆ:</td><td colspan="3">೧೨೩</td></tr>
<tr><td></td><td colspan="4">ಎ) ಕರ್ನಾಟಕ ಅಂಗಡಿ ವಾಣಿಜ್ಯ ಸಂಸ್ಥೆಗಳ ಕಾಯ್ದೆಯಡಿ:</td><td colspan="3" rowspan="2">ಬಾಕಿ ಉಳಿದ ಮೊಕದ್ದಮೆ</td></tr>
<tr><td></td><td>ಹೂಡಿದ್ದು</td><td>ಶಿಕ್ಷೆಯಾಗಿದ್ದು</td><td>ಖುಲಾಸೆ</td><td>ದಂಡದ ಮೊತ್ತ</td></tr>
<tr><td></td><td>೧೨</td><td>೧</td><td>೪</td><td>ರೂ. ೭೫೦</td><td colspan="3">೭</td></tr>
<tr><td></td><td colspan="4">ಬಿ) ಬಾಲ ಕಾರ್ಮಿಕ ಕಾಯ್ದೆಯಡಿ:</td><td colspan="3"></td></tr>
<tr><td></td><td>೩೮</td><td>೧೧</td><td>೧೦</td><td>ರೂ. ೭೦,೦೦೦</td><td colspan="3">೧೭</td></tr>
<tr><td>೬</td><td colspan="4">ಈವರೆಗೆ ಅಪಾಯಕಾರಿ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡಿರುವ ಬಗ್ಗೆ ವಸೂಲಾದ ಪರಿಹಾರದ ಮೊತ್ತ.</td><td colspan="3">೩೧ ಬಾಲ ಕಾರ್ಮಿಕರ ಸಲುವಾಗಿ ರೂ ೬,೨೦,೦೦೦/– ಪರಿಹಾರ</td></tr>
<tr><td>೭</td><td colspan="4">ಕನಿಷ್ಟ ವೇತನ ಕಾಯ್ದೆಯಡಿ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಿರುವ ಸಂಖ್ಯೆ</td><td colspan="3">೪೮</td></tr>
<tr><td><br><br><br>೮</td><td colspan="4">ಎ) ವಿಲೇವಾರಿಯಾದ ಕ್ಲೇಮ್ ಅರ್ಜಿಗಳ ಸಂಖ್ಯೆ:<br>ಬಿ) ಪಾವತಿಯಾದ ಮೊತ್ತ<br>ಸಿ) ಬಾಕಿ ಉಳಿದ ಕ್ಲೇಮ್ ಅರ್ಜಿಗಳು<br>ಪರಿಹಾರ ನಿಧಿಯ ಮೇಲೆ ಬಂದ ಬಡ್ಡಿ ಮೊತ್ತದಿಂದ</td><td colspan="3">೪೧<br>ರೂ ೫೯,೬೨೬/–<br>೭<br>ರೂ.೨೪,೬೭೪/–</td></tr>
<tr><td></td><td colspan="4">ಪೋಷಕರಿಗೆ ನೀಡಿರುವ ಸಹಾಯಧನ:</td><td colspan="3"></td></tr>
<tr><td>೯</td><td colspan="4">ಪೋಷಕರ ಸಂಖ್ಯೆ</td><td colspan="3">೮</td></tr>
<tr><td>೧೦</td><td colspan="4">ಕಾರ್ಪಸ್ ನಿಧಿಯ ಮೇಲೆ ಬಂದ ಬಡ್ಡಿಯಲ್ಲಿ ಪತ್ತೆ ಹಚ್ಚಲಾದ ಬಾಲ ಕಾರ್ಮಿಕರನ್ನು ಶಾಲೆಗಳಲ್ಲಿ ದಾಖಲು ಮಾಡಿ ಅವರ ವಿದ್ಯಾಭ್ಯಾಸದ ಶುಲ್ಕ, ಪಠ್ಯ ಪುಸ್ತಕ, ಲೇಖನ ಸಾಮಗ್ರಿ ಮತ್ತು ಸಮವಸ್ತ್ರಗಳಿಗೆ ಖರ್ಚು ಮಾಡಿರುವ ಮೊತ್ತ.</td><td colspan="3">ರೂ. ೧೬೨೦೦/–</td></tr>
<tr><td>೧೧</td><td colspan="4">ಪ್ರಯೋಜನ ಪಡೆದ ಮಕ್ಕಳ ಸಂಖ್ಯೆ</td><td colspan="3">೨೪</td></tr>
</table>

*(ಮಾಹಿತಿ: ಕಾರ್ಮಿಕ ಅಧಿಕಾರಿ, ಉಡುಪಿ ಜಿಲ್ಲೆ)*

ಸಂಸ್ಕಾರದ ಸಮಯದಲ್ಲಿ ಒದಗಿಸಬೇಕಾದ ನಗದು ಪರಿಹಾರವನ್ನೂ, ನೀಡಲಾಗುತ್ತದೆ. ವಿಮಾದಾರನಿಗೆ ವೈದ್ಯಕೀಯ ಸೌಲಭ್ಯವಲ್ಲದೆ ಅವನನ್ನು ಆಶ್ರಯಿಸಿದ ಕುಟುಂಬದ ಸದಸ್ಯರಿಗೂ ವೈದ್ಯಕೀಯ ಶುಶ್ರೂಷೆ ದೊರಕುತ್ತದೆ. ಈ ಯೋಜನೆಯ ಪ್ರಕಾರ ವೈದ್ಯಕೀಯ ಪರಿಹಾರವನ್ನು ಒದಗಿಸುವ ಜವಾಬ್ದಾರಿ ರಾಜ್ಯಸರ್ಕಾರಕ್ಕೆ ಸೇರಿರುತ್ತದೆ.

**ಕೋಷ್ಟಕ ೧೬.೨೧ : ಜಿಲ್ಲೆಯ ಕಾರ್ಮಿಕ ಕಾನೂನು ಉಲ್ಲಂಘನೆ ವಿವರ**

| ಕ್ರ ಸಂ. | ಉಲ್ಲಂಘನೆಗಳ ಸ್ವರೂಪ | ಅಕ್ರಮಗಳ ಸಂಖ್ಯೆ | ಆರಂಭಿಸಿದ ಫಿರ್ಯಾದುಗಳ ಸಂಖ್ಯೆ | ಸ್ವೀಕರಿಸಿದ ಅಪರಾಧ ನಿರ್ಣಯಗಳು |
|---|---|---|---|---|
| ೧ | ದಾಖಲೆಗಳ ನಿರ್ವಹಣೆ | ೧೫೭೯ | ೪೬ | ೩೪ |
| ೨ | ರಜಾದಿನಗಳ ಪಟ್ಟಿ ಮತ್ತು ರಿಟರ್ನ್ಸ್ ಸಲ್ಲಿಸದೇ ಇರುವುದು | – | – | – |
| ೩ | ದಾಖಲೆಗಳ ನಿರ್ವಹಣೆ ಮತ್ತು ರಿಟರ್ನ್ಸ್ | – | – | – |
| ೪ | ನೋಟೀಸ್‌ಗಳು ಮತ್ತು ದಾಖಲೆಗಳ ಪ್ರಕಟಣೆ | ೨೯೮ | – | – |
| ೫ | ಉದ್ದಿಮೆಗಳ ನೋಂದಣಿ ಮಾಡದಿರುವುದು ಮತ್ತು ದಾಖಲೆಗಳ ನಿರ್ವಹಣೆ | ೧೫೨ | | |

(ಮಾಹಿತಿ: ಕಾರ್ಮಿಕ ಅಧಿಕಾರಿ, ಉಡುಪಿ ಜಿಲ್ಲೆ, ಉಡುಪಿ)

**ಕೋಷ್ಟಕ ೧೬.೨೨ : ಕಾರ್ಮಿಕ ಕಾಯ್ದೆಯಡಿ ಮಹಿಳಾ ಕಾರ್ಮಿಕರ ವಿವರ (ಸಮಾನ ವೇತನ ಕಾಯಿದೆ ಹೊರತು ಪಡಿಸಿ)**

| ಕ್ರ ಸಂ. | ಕಾಯಿದೆಯ ಹೆಸರು | ತಪಾಸಣೆ ಸಂಖ್ಯೆ | ಕಾನೂನು ಉಲ್ಲಂಘಿಸಿ ದುದಾಗಿ ಗುರುತಿಸಲಾದ ಉಲ್ಲಂಘನೆಗಳು | ಸ್ವೀಕರಿಸಿದ ದೂರುಗಳ ಸಂಖ್ಯೆ | ಒಟ್ಟು |
|---|---|---|---|---|---|
| ೧ | ಬೀಡಿ ಮತ್ತು ಸಿಗಾರ್ ಕಾರ್ಮಿಕರ ೧೯೬೬ (ಉದ್ಯೋಗ ನಿಯಮಗಳು)ಕಾಯ್ದೆ | ೧೬ | – | – | – |
| ೨ | ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ೧೯೬೧ ಸಂಸ್ಥೆಗಳ ಕಾಯ್ದೆ | ೯೬೫ | ೮೭೧ | ೩೮೩ | ೧೨೫೪ |
| ೩ | ಕರ್ನಾಟಕ ಕೈಗಾರಿಕಾ ಸ್ಥಾಪನೆಗಳು(ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಕಾಯ್ದೆ ೧೯೬೩ | – | – | – | – |
| ೪ | ಬೋನಸ್ ಪಾವತಿ ಕಾಯ್ದೆ ೧೯೬೫ | – | – | – | – |
| ೫ | ಉಪಧನ ಪಾವತಿ ಕಾಯ್ದೆ ೧೯೭೨ | ೨೬ | ೧೫ | ೧೦ | ೨೫ |
| ೬ | ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ರದ್ಧತಿ) ಕಾಯ್ದೆ ೧೯೭೦ | ೪೯ | ೪೩ | ೨೬ | ೬೯ |
| ೭ | ಕನಿಷ್ಟ ವೇತನ ಪಾವತಿ ಕಾಯ್ದೆ ೧೯೪೮ | ೩೨೧ | ೫೮೪ | ೧೫೬ | ೭೪೦ |
| ೮ | ಬಾಲ ಕಾರ್ಮಿಕ ಕಾಯ್ದೆ | ೭೮೯ | ೨೪ | ೦೧ | ೨೫ |
| ೯ | ಮೋಟಾರು ಸಾರಿಗೆ ಕಾರ್ಮಿಕ ಕಾಯ್ದೆ | ೦೧ | – | – | – |
| ೧೦ | ವೇತನ ಪಾವತಿ ಕಾಯ್ದೆ | ೯೮ | ೪೨ | ೩೨ | ೭೪ |
| ೧೧ | ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ | ೩೦ | – | – | – |

## ಕಾರ್ಮಿಕ ಕಲ್ಯಾಣ ಮಂಡಳಿ

ಕಾರ್ಮಿಕ ಕಲ್ಯಾಣ ಮಂಡಳಿಯು, ಕಾರ್ಮಿಕ ಕಲ್ಯಾಣ ಅಧಿನಿಯಮದ ಅನುಸಾರ ಅನೇಕ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಕಾರ್ಮಿಕ ಕಲ್ಯಾಣ ನಿಧಿಗಾಗಿ ಕಾರ್ಮಿಕರಿಂದ ತಲಾ ಮೂರು ರೂಪಾಯಿಯಂತೆಯೂ ಹಾಗೂ ಮಾಲೀಕರಿಂದ ಪ್ರತಿ ಕಾರ್ಮಿಕರಿಗೆ ಆರು ರೂಪಾಯಿಯಂತೆ ಹಣ ಸಂಗ್ರಹಿಸಲಾಗುತ್ತಿತ್ತು. ಈ ಮೊತ್ತವನ್ನು ನೇರವಾಗಿ ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು–ಇಲ್ಲಿಗೆ ಸಂಸ್ಥೆಯ ಮಾಲೀಕರು ಪಾವತಿಸುತ್ತಿದ್ದರು. ಈ ನಿಧಿಯಿಂದ, ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ, ವಾಚನಾಲಯ, ಮನರಂಜನಾ ಕಾರ್ಯಕ್ರಮ, ಕ್ರೀಡಾ ಚಟುವಟಿಕೆ,

ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿತ್ತು. ಉಡುಪಿ ಜಿಲ್ಲೆಯಲ್ಲಿ ಕಾರ್ಕಳದಲ್ಲಿ, ಈ ಮೊದಲು ಒಂದು ಕಲ್ಯಾಣ ಕೇಂದ್ರವಿದ್ದು, ಕಾರ್ಮಿಕ ಪರಿವೀಕ್ಷಕರು, ಕಾರ್ಕಳ ಇವರು ಇದರ ನೇರ ನಿಯಂತ್ರಕರಾಗಿದ್ದರು. ಆದರೆ, ಕಲ್ಯಾಣ ಕೇಂದ್ರಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಿದ ಸಮಿತಿಯ ವರದಿಯ ಮೇರೆಗೆ, ಸರ್ಕಾರದ ಆದೇಶ ದಿ.೧೨.೧.೨೦೦೪ರ ಪ್ರಕಾರ, ಕಾರ್ಕಳದ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ದಿನಾಂಕ ೧೫.೦೧.೨೦೦೪ರಿಂದ ಜಾರಿಗೆ ಬರುವಂತೆ ಮುಚ್ಚಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಪ್ರಗತಿಗಾಗಿ ಕಂಡುಕೊಂಡ ಮೊದಲ ಮಾರ್ಗ ಮೀಸಲಾತಿಯದು. ರಾಜ್ಯ ಏಕೀಕರಣದ ನಂತರದಲ್ಲಿ, ಉಚ್ಚ ನ್ಯಾಯಾಲಯವು, ಆಗ ಜಾರಿಯಲ್ಲಿದ್ದ, ೧೯೫೯ರ ಆದೇಶವನ್ನು ಅನೂರ್ಜಿತಗೊಳಿಸಿದ್ದರಿಂದ ಮತ್ತು ಸಾಮಾಜಿಕ ಮತ್ತು ಶೈಕ್ಷಣಿಕ ಹಾಗೂ ರಾಜ್ಯ ನೇಮಕಾತಿ ವಿಷಯದಲ್ಲಿ ಹಿಂದುಳಿದವರನ್ನು ಗುರುತಿಸುವ ದೃಷ್ಟಿಯಿಂದ, ಶಾಸಕರಾದ ಡಾ.ನಾಗನಗೌಡರವರ ಅಧ್ಯಕ್ಷತೆಯಲ್ಲಿ 'ಬ್ಯಾಕ್ ವರ್ಡ್ ಕ್ಲಾಸಸ್ ಕಮಿಟಿ'ಯೊಂದನ್ನು ರಚಿಸಲಾಯಿತು. ಈ ಸಮಿತಿಯು ೧೯೬೦ರಲ್ಲಿ ಸಲ್ಲಿಸಿದ ಮಧ್ಯಂತರ ಮತ್ತು ಅಂತಿಮ ವರದಿಯ ಆಧಾರದ ಮೇಲೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಆ ಮೊದಲೇ ಇದ್ದ ಶೇಕಡ ೧೮% ಮೀಸಲಾತಿಯನ್ನು ಹೊರತು ಪಡಿಸಿ; ಹಿಂದುಳಿದ ವರ್ಗಗಳಿಗಾಗಿಯೇ ಪ್ರತ್ಯೇಕವಾಗಿ, ಶೇಕಡ ಇಪ್ಪತ್ತೆರಡರಷ್ಟು ಪ್ರಮಾಣದ ಮೀಸಲಾತಿಯನ್ನು ಶಿಕ್ಷಣ ಕ್ಷೇತ್ರದಲ್ಲೂ ಮತ್ತು ಶೇಕಡ ಇಪ್ಪತ್ತೈದು ಪ್ರಮಾಣದ ಮೀಸಲಾತಿಯನ್ನು ಉದ್ಯೋಗ ಕ್ಷೇತ್ರದಲ್ಲೂ ನಿಗದಿಸಿ, ೯.೬.೧೯೬೦ರಲ್ಲಿ ಸರ್ಕಾರವು ಆದೇಶ ಹೊರಡಿಸಿತು. ಆ ನಂತರ ೧೯೬೧ರಲ್ಲಿ ಪುನಃ ಹೊರಡಿಸಲಾದ ಆದೇಶಗಳನ್ನು ಬಾಲಾಜಿ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ರದ್ದುಗೊಳಿಸಿದ ಮೇಲೆ, ಹೆತ್ತವರ ವಾರ್ಷಿಕ ಆದಾಯ ೧೨೦೦/– ರೂಪಾಯಿಯೊಳಗೆ ಇರುವಂತಹ ಎಲ್ಲ ಅಭ್ಯರ್ಥಿಗಳೂ ಹಿಂದುಳಿದವರೆಂದು ಪರಿಗಣಿಸಲು ದಿ.೧೬.೯.೧೯೬೩ರಲ್ಲಿ ಸರ್ಕಾರವು ಆದೇಶ ನೀಡಿತು. ಈ ಆದೇಶದನ್ವಯ ಇತರ ಹಿಂದುಳಿದ ವರ್ಗಗಳಿಗೆ ನಿಗದಿಸಿದ ಮೀಸಲಾತಿಯ ಪ್ರಮಾಣ ಶೇಕಡ ೩೦ ಆಗಿತ್ತು. ಮೇಲ್ವರ್ಗದವರಿಗೆ ನೆರವಾಗುವಂತಹ ಆದೇಶವಿದು ಎನ್ನುತ್ತಿದ್ದಂತಹ ಕೆಲವಾರು ಜನರ ಅತೃಪ್ತಿ ಹಾಗೂ ಅಸಮಾಧಾನಗಳೊಂದಿಗೇ ೧೯೬೩ರಿಂದ ೧೯೭೭ ರ ವರೆಗೆ ಈ ಅದೇಶವೇ ಜಾರಿಯಲ್ಲಿತ್ತು. ಇದನ್ನು ಉಡುಪಿ ಜಿಲ್ಲೆಯಲ್ಲೂ ಕಾರ್ಯಗತಗೊಳಿಸಲಾಗುತ್ತಿತ್ತು.

೧೯೭೯ರಿಂದ ೧೯೮೦ರ ವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸುರವರು, ತಮ್ಮ ಅಧಿಕಾರಾವಧಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಏಳಿಗೆಗಾಗಿ ಮಾಡಿದ ಕಾರ್ಯಗಳು ಗಣನೀಯ. ಇವರ ಅವಧಿಯಲ್ಲಿ, ಎಲ್. ಜಿ. ಹಾವನೂರರ ಅಧ್ಯಕ್ಷತೆಯಲ್ಲಿ ೧೯೭೨ರಲ್ಲಿ ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ರಚನೆಯಾಯಿತು. ಈ ಆಯೋಗವು, ೧೯೭೫ರ ನವೆಂಬರ್‌ನಲ್ಲಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿದ ಸರ್ಕಾರವು, ರಾಜ್ಯದ ಎಲ್ಲ ಹಿಂದುಳಿದ ಜನಾಂಗಗಳನ್ನು ೧) ಹಿಂದುಳಿದ ಸಮುದಾಯ (ಬಿ.ಸಿ.ಎಂ.), ೨) ಹಿಂದುಳಿದ ಜಾತಿಗಳು (ಬಿ.ಸಿ.ಟಿ.) ಮತ್ತು೩) ಹಿಂದುಳಿದ ಬುಡಕಟ್ಟು (ಬಿ. ಟಿ) ಎಂದು ಮೂರು ಭಾಗಗಳಾಗಿ ವಿಂಗಡಿಸಿ, ವಾರ್ಷಿಕ ಆದಾಯ ರೂ. ೪೮೦೦/– ರ ಒಳಗೆ ಇರುವಂತಹವರನ್ನು ಹಿಂದುಳಿದ ವಿಶೇಷ ಗುಂಪು (ಬಿ.ಎಸ್.ಜಿ.) ಎಂದು ಪರಿಗಣಿಸಿ ಶೇ.೪೦ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ನೇಮಕಾತಿಗಾಗಿ ನಿಗದಿಸಲು ದಿ೨೨.೨.೧೯೭೭ರಲ್ಲಿ ಆದೇಶ ಮಾಡಿತು. ಅಲ್ಲದೆ, ಈ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ೧೯೭೭ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾದ ಒಂದು ಇಲಾಖೆಯನ್ನೂ ಪ್ರಾರಂಭಿಸಿತು. ಅದುವರೆಗೆ, ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿದ್ದ ಕಾರ್ಯಕ್ರಮಗಳು ಈ ಇಲಾಖೆಗೆ ವರ್ಗಾವಣೆಗೊಂಡವು. ಸಮಾಜ ಕಲ್ಯಾಣ ಇಲಾಖೆಯ ದಿನಾಂಕ ೧೬.೦೨.೨೦೦೬ರ ಆದೇಶದ ಮೂಲಕ ಈ ಇಲಾಖೆಯ ಹೆಸರನ್ನು 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ' ಎಂದು ಮರು ನಾಮಕರಣ ಮಾಡಲಾಗಿದೆ.

ಟಿ. ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ೧೯೮೩ರಲ್ಲಿ, ಎರಡನೇ ಹಿಂದುಳಿದ ವರ್ಗಗಳ ಆಯೋಗ ಸ್ಥಾಪನೆಗೊಂಡಿತು. ಈ ಆಯೋಗವು ರಾಜ್ಯಾದ್ಯಂತ ಸಮೀಕ್ಷೆ ನಡೆಸಿ, ೧೯೮೬ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಆದರೆ ಸರ್ವೋಚ್ಚ ನ್ಯಾಯಾಲಯದಿಂದ ನೀಡಲಾದ ಮಾರ್ಗದರ್ಶನಗಳನ್ನು ಈ ಆಯೋಗವು ಅನುಸರಿಸಲಾಗದ ಕಾರಣ ಈ ಅಯೋಗದ ವರದಿಯು ಅನುಮೋದನೆಗೊಳ್ಳದೇ, ಒಂದು ಮಧ್ಯಂತರ ಆಜ್ಞೆಯನ್ನು ಅಕ್ಟೋಬರ್ ೧೯೮೬ರಲ್ಲಿ ಸರ್ಕಾರದಿಂದ ಹೊರಡಿಸಲಾಯಿತು. ಈ ಆದೇಶದಂತೆ ಹಿಂದುಳಿದ ಜಾತಿಗಳು ಎ, ಬಿ, ಸಿ, ಡಿ ಮತ್ತು ಇ ಎಂದು ವರ್ಗೀಕರಣಗೊಂಡವು. ಮತ್ತು ಶೇಕಡ ೫೦ರಷ್ಟು ಮೀಸಲಾತಿ ನೀಡಬೇಕೆಂಬ ಆದೇಶವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಯಿತು.

ನಂತರ ನ್ಯಾಯಮೂರ್ತಿ ಓ.ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ, ಮೂರನೇ ಹಿಂದುಳಿದ ವರ್ಗಗಳ ಏಕವ್ಯಕ್ತಿ ಆಯೋಗವು, ಮಾರ್ಚ್ ೧೯೮೮ರಲ್ಲಿ ಸರ್ಕಾರದಿಂದ ರಚನೆಗೊಂಡು. ಏಪ್ರಿಲ್ ೧೯೯೦ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ, ೧೯೯೪ ರಲ್ಲಿ ಮೀಸಲಾತಿ ನಿಯಮಾವಳಿಗಳ ಕುರಿತಂತೆ ಎರಡು ಸರ್ಕಾರಿ ಆದೇಶಗಳನ್ನು ಹೊರಡಿಸಿ, ಮೀಸಲಾತಿ ಪ್ರಮಾಣವನ್ನು ಮೊದಲೊಮ್ಮೆ ಶೇ.೫೭ಕ್ಕೆ, ಆನಂತರ ಶೇ.೭೩ಕ್ಕೆ ಹೆಚ್ಚಿಸಲಾಯಿತು. ಆದರೆ ಇದರಿಂದ ಅಸಮಾಧಾನಗೊಂಡ ಹಲವರು ಸರ್ವೋಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದರು. ರಾಜ್ಯಗಳಲ್ಲಿನ ಮೀಸಲಾತಿಯು ಯಾವುದೇ ಸಂದರ್ಭದಲ್ಲಿಯೂ, ಪರಿಶಿಷ್ಟ ಜಾತಿ ಮತ್ತು ವರ್ಗವನ್ನೂ ಸೇರಿಸಿದಂತೆ ಒಟ್ಟು ಶೇ.೫೦ರ ಪ್ರಮಾಣವನ್ನು ಮೀರಬಾರದೆಂದು ಸರ್ವೋಚ್ಛ ನ್ಯಾಯಾಲಯವು ಸೆಪ್ಟೆಂಬರ್ ೧೯೯೪ರಲ್ಲಿ ನೀಡಿದ ಮಧ್ಯಂತರ ತೀರ್ಪಿನನ್ವಯ, ಸರ್ಕಾರವು ಆದೇಶ ದಿನಾಂಕ ೧೭-೯-೧೯೯೪ರ ಅನುಬಂಧದಲ್ಲಿ ಮುಂದೆ ತಿಳಿಸಿರುವಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಿದೆ. ಪ್ರವರ್ಗ-೧: ಶೇ.೪; ಪ್ರವರ್ಗ-೨ಎ: ಶೇ.೧೫; ಪ್ರವರ್ಗ-೨ಬಿ: ಶೇ.೪; ಪ್ರವರ್ಗ-೩ಎ: ಶೇ.೪; ಪ್ರವರ್ಗ-೩ಬಿ: ಶೇ.೫; ಪರಿಶಿಷ್ಟಜಾತಿ: ಶೇ.೧೫; ಪರಿಶಿಷ್ಟ ಪಂಗಡ: ಶೇ.೩; ಒಟ್ಟು ಶೇ.೫೦. ಈ ಪ್ರಮಾಣವು ಈಗಲೂ ಅನುಷ್ಠಾನಗೊಳ್ಳುತ್ತಿದೆ.

**ಶಾಶ್ವತ ಹಿಂದುಳಿದ ವರ್ಗಗಳ ಆಯೋಗ**

ಮಂಡಲ್ ಮೊಕದ್ದಮೆಯಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯವು, ೧೯೯೨ರ ನವೆಂಬರ್ ಹದಿನಾರಂದು ನೀಡಿದ ತೀರ್ಪಿನಲ್ಲಿ, ಹಿಂದುಳಿದ ವರ್ಗಗಳ ಪಟ್ಟಿಗೆ, ಹೆಚ್ಚುವರಿಯಾಗಿ ಮತ್ತು ಇಳುವರಿಯಾಗಿ ಸೇರ್ಪಡೆಯಾಗಿರುವ ವಿವಿಧ ಜಾತಿ ಉಪ ಜಾತಿಗಳ ಕುರಿತಂತೆ ಹಾಗೂ ಇವರಿಗಾಗಿ ಇರುವ ಕಾರ್ಯಕ್ರಮಗಳ ಜಾರಿ ಕುರಿತಂತೆ ಪರಿಶೀಲಿಸಿ ಸೂಕ್ತ ಶಿಫಾರಸುಗಳನ್ನು ನೀಡುವುದಕ್ಕಾಗಿ ಕೇಂದ್ರದಲ್ಲಿ ಹಾಗೂ ಪ್ರತಿಯೊಂದು ರಾಜ್ಯದಲ್ಲಿ ಒಂದೊಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸುವಂತೆ ನಿರ್ದೇಶನ ನೀಡಿದ ಮೇಲೆ ಕರ್ನಾಟಕ ರಾಜ್ಯದಲ್ಲಿ, ೧೯೯೩ರಲ್ಲಿ ಶಾಶ್ವತವಾಗಿ ಒಂದು ಹಿಂದುಳಿದ ವರ್ಗಗಳ ಆಯೊಗವನ್ನು ಸ್ಥಾಪಿಸಲಾಯಿತು. ಈ ಆಯೋಗದ ಅಧ್ಯಕ್ಷರಾಗಿದ್ದ ಪ್ರೊ. ರವಿವರ್ಮಕುಮಾರ್, ಒಂದು ವಿಶೇಷ ವರದಿಯನ್ನೂ, ಮತ್ತು ಎಪ್ಪತ್ತೊಂದು ಸಲಹೆಗಳನ್ನೂ, ಡಿಸೆಂಬರ್ ೨೦೦೦ದಲ್ಲಿ ಸಲ್ಲಿಸಿದರು. ಸರ್ಕಾರವು ಸಂಪೂರ್ಣ ವರದಿಯ ಪರಿಶೀಲನೆಯನ್ನು ಬಾಕಿ ಇಟ್ಟು, ದಿನಾಂಕ ೩೦.೦೩.೨೦೦೨ರ ಆದೇಶವನ್ನು ಹೊರಡಿಸಿ, ರಾಜ್ಯದ ಹಿಂದುಳಿದ ಜಾತಿ, ಉಪಜಾತಿಗಳ ಪರಿಷ್ಕೃತ ಪಟ್ಟಿಯನ್ನು ಪ್ರಕಟಿಸಿತು. ಅದರಂತೆ ಈಗ ರಾಜ್ಯದಲ್ಲಿ, ಪ್ರಧಾನ ಮತ್ತು ಪರ್ಯಾಯ ಉಪನಾಮಗಳೂ ಸೇರಿದಂತೆ ಸುಮಾರು ೮೨೩ ಜಾತಿ, ಉಪಜಾತಿಗಳು ಹಿಂದುಳಿದ ವರ್ಗಕ್ಕೆ ಸೇರಿವೆ. ಈ ಜಾತಿಗಳ ವಿಂಗಡಣೆ ಮತ್ತು ಶೇಕಡ ಮೀಸಲಾತಿಯ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಂದರೆ ದಿ. ೧೭.೦೯.೧೯೯೪ರ ಆದೇಶದಲ್ಲಿ ನಿಗದಿಸಿದ ಪ್ರಮಾಣವೇ ಈಗಲೂ ಜಾರಿಯಲ್ಲಿರುತ್ತದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-೧ರ ಅಭ್ಯರ್ಥಿಗಳನ್ನು ಹೊರತುಪಡಿಸಿ ರಾಜ್ಯಾಧೀನ ಸೇವೆಗಳಲ್ಲಿ, ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ಯಮಗಳಲ್ಲಿ ಮತ್ತು ರಾಜ್ಯ ಸರ್ಕಾರದ ಅನುದಾನಿತ, ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳ,

ನೇಮಕಾತಿಯಲ್ಲಿ ಮೀಸಲಾತಿಯ ಪ್ರಯೋಜನ ಪಡೆಯಲು ಅಭ್ಯರ್ಥಿಯ ತಂದೆ ತಾಯಿ ಅಥವಾ ಪೋಷಕರು ವಾರ್ಷಿಕವಾಗಿ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ವರಮಾನವಿರುವ ಉದ್ಯೋಗವನ್ನು ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ; ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ; ಮಾರಾಟ ತೆರಿಗೆ ಪಾವತಿದಾರರಾಗಿದ್ದಲ್ಲಿ; ಮತ್ತು ಇತರ ಇಂಥ ಕೆಲವು ನಿಯಮಗಳಿಗೆ ಒಳಪಡುತ್ತಿದ್ದಲ್ಲಿ; ಅಂತಹವರು ಈ ಮೀಸಲಾತಿಯ ಪ್ರಯೋಜನ ಪಡೆಯುವಂತಿಲ್ಲ, ಎಂಬ 'ಕೆನೆಪದರ ನೀತಿ'ಯನ್ನು ಸಹ ಈ ಆದೇಶದ ಮೂಲಕ ಕಾರ್ಯರೂಪಕ್ಕೆ ತರಲಾಯಿತು.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ಹಾವನೂರು ಆಯೋಗದ ಶಿಫಾರಸ್ಸಿನ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ೧೯೭೭ರಲ್ಲಿ ಪ್ರಾರಂಭಿಸಲಾದ ಹಿಂದುಳಿದ ವರ್ಗಗಳ ಇಲಾಖೆಯು, ಈ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ಇವನ್ನು ಈ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ.

### ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆ (ಕಾಲೇಜುಗಳು) ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಮಾಹೆಯಾನ ರೂ.೪೫೦ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ಉಚಿತ ಆಹಾರ ಮತ್ತು ವಸತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪ್ರತೀ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.೧೦೦ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ಸಾದಿಲ್ವಾರು ವೆಚ್ಚ ಮಾಡಲಾಗುವುದಲ್ಲದೆ, ಪ್ರತೀ ನಿಲಯಕ್ಕೆ ಎರಡು ದಿನಪತ್ರಿಕೆಗಳ ಪೂರೈಕೆಗಾಗಿ ರೂ. ೧೫೦೦ಗಳ ವೆಚ್ಚ ಭರಿಸಲಾಗುತ್ತದೆ. ಈ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರಿ/ಸರ್ಕಾರಿ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಬಿ.ಇ, ಎಂ.ಬಿ.ಬಿ.ಎಸ್., ಡಿಪ್ಲೊಮ, ವೃತ್ತಿಶಿಕ್ಷಣ ಕೋರ್ಸುಗಳು ಇತ್ಯಾದಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಕಾಲೇಜುಗಳಿಂದ ಐದು ಕಿ.ಮೀ.ಗಿಂತ ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳು ಮತ್ತು ಕುಟುಂಬದ ವಾರ್ಷಿಕ ವರಮಾನ ರೂ. ೧೫೦೦೦/- ಕ್ಕಿಂತ ಕಡಿಮೆ ಇರುವವರು ಮಾತ್ರ, ಈ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರು. ಸ್ಥಳೀಯ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು.

ಜಿಲ್ಲೆಯಲ್ಲಿ ಒಟ್ಟು ಆರು ಗಂಡು ಮಕ್ಕಳ ಮತ್ತು ಮೂರು ಹೆಣ್ಣು ಮಕ್ಕಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು, ಈ ನಿಲಯಗಳಲ್ಲಿ ೩೩೫ ಬಾಲಕರು, ೧೭೦ಬಾಲಕಿಯರು ಇದ್ದಾರೆ. ವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿಗಳನ್ನು ಒದಗಿಸಲಾಗುತ್ತಿದೆ. ಈ ನಿಲಯಗಳ ಸಂಖ್ಯೆ ಮತ್ತು ನಿಲಯಾರ್ಥಿಗಳ ವಿವರಗಳನ್ನು ಕೋಷ್ಟಕ ೧೬.೨೩ ಮತ್ತು ೧೬.೨೪ರಲ್ಲಿ ಕೊಡಲಾಗಿದೆ.

### ಮೆಟ್ರಿಕ್ ಪೂರ್ವ ಬಾಲಕ / ಬಾಲಕಿಯರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಣವನ್ನು ಮುಂದುವರಿಸಲು, ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆ/ ಶಾಲೆಗಳು ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿನ ಮಂಜೂರಾತಿ ಸಂಖ್ಯೆಯ ಶೇಕಡ ೭೫ ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ, ಶೇಕಡ ೨೫

**ಕೋಷ್ಟಕ ೧೬.೨೩ : ಮೆಟ್ರಿಕ್ ನಂತರದ ಬಾಲಕ–ಬಾಲಕಿಯರ ವಿದ್ಯಾರ್ಥಿನಿಲಯ ವಿವರ**

| ತಾಲೂಕಿನ ಹೆಸರು | ಮೆಟ್ರಿಕ್ ಪೂರ್ವ ನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರದು | ಬಾಲಕಿಯರದು | ಒಟ್ಟು |
| ಉಡುಪಿ | ೩ | ೧ | ೪ | ೧೫೦ | ೫೦ | ೨೦೦ |
| ಕುಂದಾಪುರ | ೧ | ೧ | ೨ | ೫೦ | ೫೦ | ೧೦೦ |
| ಕಾರ್ಕಳ | ೨ | ೧ | ೩ | ೧೩೫ | ೭೦ | ೨೦೫ |
| ಒಟ್ಟು | ೬ | ೩ | ೯ | ೩೩೫ | ೧೭೦ | ೫೦೫ |

*ಮಾಹಿತಿ: ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

**ಕೋಷ್ಟಕ ೧೬.೨೪ : ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಾದ ಖರ್ಚಿನ ವಿವರ**

| ತಾಲೂಕಿನ ಹೆಸರು | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ನಿಲಯಗಳು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ.ಲಕ್ಷಗಳಲ್ಲಿ |
|---|---|---|---|---|---|---|---|
| | ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ನಿಲಯಗಳ ಸಂಖ್ಯೆ | ಬಾಲಕಿಯರ ಸಂಖ್ಯೆ | | | |
| ೨೦೦೨–೦೩ | ೬ | ೪೪೫ | ೩ | ೧೮೦ | ೯ | ೬೨೫ | ೩೮.೯೯ |
| ೨೦೦೩–೦೪ | ೬ | ೩೧೨ | ೩ | ೧೯೨ | ೯ | ೫೦೪ | ೩೬.೦೭ |
| ೨೦೦೪–೦೫ | ೬ | ೩೦೩ | ೩ | ೧೯೨ | ೯ | ೪೯೫ | ೬೪.೦೪ |

*(ಈ ನಿಲಯಗಳಲ್ಲಿ ನಿಲಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವನ್ನು ಒದಗಿಸಲಾಗುತ್ತದೆ.)*
*ಮಾಹಿತಿ: ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.*

ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೂ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ, ಹದಿನಾಲ್ಕು ಮೆಟ್ರಿಕ್ ಪೂರ್ವ ಬಾಲಕರ ನಿಲಯಗಳೂ ಮತ್ತು ನಾಲ್ಕು ಮೆಟಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳೂ, ಒಟ್ಟು ಹದಿನೆಂಟು ನಿಲಯಗಳಿದ್ದು ಅವುಗಳಲ್ಲಿ ೭೦೦ ಬಾಲಕರು ಮತ್ತು ೨೦೦ ಬಾಲಕಿಯರು ಇದ್ದಾರೆ. ಸದರಿ ನಿಲಯಗಳ ವಿವರಗಳನ್ನು ಕೋಷ್ಟಕ೧೬.೨೫ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೨೫ : ಮೆಟ್ರಿಕ್ ಪೂರ್ವ ಬಾಲಕ – ಬಾಲಕಿಯರ ವಿದ್ಯಾರ್ಥಿನಿಲಯಗಳ ವಿವರ**

| ತಾಲೂಕಿನ ಹೆಸರು | ಮೆಟ್ರಿಕ್ ಪೂರ್ವ ನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರದು | ಬಾಲಕಿಯರದು | ಒಟ್ಟು |
| ಉಡುಪಿ | ೫ | ೨ | ೭ | ೨೫೦ | ೧೦೦ | ೩೫೦ |
| ಕುಂದಾಪುರ | ೫ | ೧ | ೬ | ೨೫೦ | ೫೦ | ೨೦೦ |
| ಕಾರ್ಕಳ | ೪ | ೧ | ೫ | ೨೦೦ | ೫೦ | ೩೫೦ |
| ಒಟ್ಟು | ೧೪ | ೪ | ೧೮ | ೭೦೦ | ೨೦೦ | ೯೦೦ |

*ಮಾಹಿತಿ : ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.*

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ನೀಡಲಾಗುವ ಸೌಕರ್ಯಗಳು

ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ, ಮುಂದೆ ತಿಳಿಸಿರುವ ಸೌಲಭ್ಯಗಳನ್ನು ನೀಡಲಾಗುವುದು. ಪ್ರತೀ ವಿದ್ಯಾರ್ಥಿಗೆ ಮಾಹೆಯಾನ ರೂ. ೪೦೦ ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ಆಹಾರ; ಉಚಿತ ವಸತಿ ಸೌಕರ್ಯ; ಮಾಹೆಯಾನ ರೂ. ೫೦ರಂತೆ ೧೦ ತಿಂಗಳ ಅವಧಿಗೆ ಇತರೇ ವಸ್ತುಗಳು(ಸೋಪು, ಎಣ್ಣೆ ಇತ್ಯಾದಿ); ರೂ. ೨೦೦ ರ ವೆಚ್ಚದಲ್ಲಿ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಮೂರು ವರ್ಷಕ್ಕೊಮ್ಮೆ ರೂ. ೪೫೦ ರ ವೆಚ್ಚದಲ್ಲಿ ಹಾಸಿಗೆ ಹೊದಿಕೆಗಳು, ರೂ. ೪೦೦ರ

ವೆಚ್ಚದಲ್ಲಿ ವರ್ಷಕ್ಕೆ ಎರಡು ಜೊತೆ ಉಡುಪುಗಳ ಪೂರೈಕೆ. (ಒಂದು ಸೆಟ್ ಟೆರಿಕಾಟ್ ಮತ್ತು ಇನ್ನೊಂದು ಸೆಟ್ ಕಾಟನ್); ಪ್ರತೀ ಬಾಲಕ ವಿದ್ಯಾರ್ಥಿಗೆ ವಾರ್ಷಿಕ ರೂ. ೫೦ ರಂತೆ ಕ್ಷೌರದ ವೆಚ್ಚ–ಇವು ಪ್ರತಿ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳಾಗಿವೆ. ಇವಲ್ಲದೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.೧೦೦ ರಂತೆ ೧೦ ತಿಂಗಳ ಅವಧಿಗೆ ವೈದ್ಯಕೀಯ ವೆಚ್ಚ ನೀಡಿಕೆ; ಮಂಜೂರಾತಿ ಸಂಖ್ಯೆ ೫೦ ಇರುವ ನಿಲಯಕ್ಕೆ ಮಾಹೆಯಾನ ರೂ. ೨೦೦ ಗೌರವಧನ ನೀಡಿ, ಮೂವರು ಅಲ್ಪಕಾಲಿಕ ಬೋಧಕರಿಂದ ಕಠಿಣ ವಿಷಯಗಳಲ್ಲಿ ಪಾಠ ಬೋಧನೆ; ಪ್ರತೀ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ. ೭೫೦ ವೆಚ್ಚದಲ್ಲಿ, ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳ ಸರಬರಾಜು ಮಾಡಲಾಗುತ್ತದೆ. ಮಂಜೂರಾತಿ ಸಂಖ್ಯೆ ೫೦ ಇರುವ ನಿಲಯಕ್ಕೆ ವರ್ಷಕ್ಕೆ ರೂ. ೬೦೦ ರಂತೆ ಹಾಗೂ ಮಂಜೂರಾತಿ ಸಂಖ್ಯೆ ೫೦ಕ್ಕಿಂತ ಹೆಚ್ಚಾಗಿರುವ ನಿಲಯಕ್ಕೆ ರೂ. ೧,೦೦೦ದಂತೆ ಪಾತ್ರೆಗಳ ಕಲಾಯಿ ವೆಚ್ಚ ಭರಿಸಲಾಗುತ್ತದೆ.

ಸರ್ಕಾರಿ ಅಥವಾ ಸರ್ಕಾರದಿಂದ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಶೈಕ್ಷಣಿಕ ಸಂಸ್ಥೆಯಿಂದ ಐದು ಕಿ.ಮೀ. ದೂರದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಶೇಕಡ ೯೦ ರಷ್ಟು ಸ್ಥಾನಗಳನ್ನೂ ಹಾಗೂ ಐದು ಕಿ.ಮೀ.ಗಳಿಗಿಂತ ಕಡಿಮೆ ಅಂತರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಉಳಿದ ಹತ್ತು ಸ್ಥಾನಗಳನ್ನೂ ಕಾಯ್ದಿರಿಸಿ, ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಲಾಗುವುದು. ಈ ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಸರ್ಕಾರದ ದಿ. ೩೦.೩.೨೦೦೨ರ ಆದೇಶದಲ್ಲಿ ಪ್ರವರ್ಗ ೨ಎ, ೨ಬಿ, ೩ಎ, ೩ಬಿ, ಎಂದು ಪರಿಗಣಿಸಲಾದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬಗಳಿಗೆ ರೂ. ೧೫೦೦೦/– ಗಳನ್ನೂ; ಪ್ರವರ್ಗ–೧, ಎಸ್.ಸಿ. ಮತ್ತು ಎಸ್.ಟಿ ಗುಂಪಿಗೆ ಸೇರಿದವರಿಗೆ ರೂ. ೫೯೨೦/– ಗಳನ್ನೂ ವಾರ್ಷಿಕ ವರಮಾನದ ಮಿತಿಯಾಗಿ ನಿಗದಿಪಡಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ ೨೦೦೨–೦೩, ೨೦೦೩–೦೪ ಮತ್ತು ೨೦೦೪–೦೫ರಲ್ಲಿ ಮೆಟ್ರಿಕ್ ಪೂರ್ವ ಬಾಲಕರು ಬಾಲಕಿಯರ ಹಾಗೂ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೧೬.೨೬ರಲ್ಲಿ ಕೊಟ್ಟಿದೆ.

**ಕೋಷ್ಟಕ ೧೬.೨೬ : ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣಾ ವೆಚ್ಚ ವಿವರ**

| ತಾಲೂಕಿನ ಹೆಸರು | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ.ಲಕ್ಷಗಳಲ್ಲಿ |
|---|---|---|---|---|---|---|
| | ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ನಿಲಯಗಳ ಸಂಖ್ಯೆ | ಬಾಲಕಿಯರ ಸಂಖ್ಯೆ | | |
| ೨೦೦೨–೦೩ | ೧೪ | ೬೦೦ | ೪ | ೨೩೦ | ೮೩೦ | ೮೧.೫೫ |
| ೨೦೦೩–೦೪ | ೧೪ | ೬೪೮ | ೪ | ೨೫೨ | ೯೦೦ | ೭೯.೩೫ |
| ೨೦೦೪–೦೫ | ೧೪ | ೬೮೩ | ೪ | ೨೧೭ | ೯೦೦ | ೯೨.೭೫ |

*ಮಾಹಿತಿ: ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

(ಉಡುಪಿ ಜಿಲ್ಲೆಯ ಈ ನಿಲಯಗಳಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯದೊಂದಿಗೆ, ಸಮವಸ್ತ್ರ, ಲೇಖನ ಸಾಮಗ್ರಿ, ಹಾಸಿಗೆ–ಹೊದಿಕೆ, ಟ್ರಂಕ್ಸ್, ಕ್ಷೌರ ವೆಚ್ಚ, ವೈದ್ಯಕೀಯ ವೆಚ್ಚ, ಅಂಶಕಾಲಿಕ ಬೋಧಕರಿಂದ ಬೋಧನೆ, ಪೇಸ್ಟ್, ಎಣ್ಣೆ, ಸೋಪು, ಮುಂತಾದವನ್ನು ಉಚಿತವಾಗಿ ಒದಗಿಸಲಾಗಿದೆ) ೨೦೦೦–೦೧ರಿಂದ ೨೦೦೨–೦೩ರವರೆಗಿನ ಮೂರು ವರ್ಷಗಳ ಜಿಲ್ಲೆಯಲ್ಲಿಯ ಹಿಂದುಳಿದ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ಸುಧಾರಣೆಗಾಗಿ ಮಾಡಿದ ವೆಚ್ಚದ ವಿವರವನ್ನು ಕೋಷ್ಟಕ ೧೬.೨೭ರಲ್ಲಿ ನೀಡಿದೆ.

**ಕೋಷ್ಟಕ ೧೬.೨೭ : ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಮತ್ತು ಫಲಾನುಭವಿಗಳ ವಿವರ**

| ತಾಲೂಕಿನ ಹೆಸರು | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ.ಲಕ್ಷಗಳಲ್ಲಿ |
|---|---|---|---|---|---|---|
| | ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ನಿಲಯಗಳ ಸಂಖ್ಯೆ | ಬಾಲಕಿಯರ ಸಂಖ್ಯೆ | | |
| ೨೦೦೨-೦೩ | ೨೦ | ೧೨೦೫ | ೭ | ೩೭೦ | ೧೫೭೫ | ೬.೦೫ |
| ೨೦೦೩-೦೪ | ೨೦ | ೧೨೦೫ | ೭ | ೩೭೦ | ೧೫೭೫ | ೨.೭೫ |
| ೨೦೦೪-೦೫ | ೨೦ | ೧೨೦೫ | ೭ | ೩೭೦ | ೧೫೭೫ | ೨.೨೪ |

***ಮಾಹಿತಿ :** ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

## ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ

ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಮತ್ತು ಪ್ರೌಢಶಾಲೆ ಶಿಕ್ಷಣದ ಹಂತದಲ್ಲಿ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯನ್ನು ನಡೆಸಲಾಗುತ್ತದೆ. ಈ ವಸತಿ ಶಾಲೆಯಲ್ಲಿ ಆರನೇ ತರಗತಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತದೆ ಹಾಗೂ ೧೦ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ನೀಡಲಾಗುತ್ತದೆ. ಪ್ರತೀ ವಿದ್ಯಾರ್ಥಿಗೆ ಮಾಹೆಯಾನ ರೂ. ೫೦೦/-ರ ಮಿತಿಯೊಳಗೆ ಹತ್ತು ತಿಂಗಳ ಅವಧಿಗೆ ಆಹಾರ; ವಾರ್ಷಿಕ ತಲಾ ರೂ. ೮೦೦/- ರ ಮಿತಿಯೊಳಗೆ ಸಮವಸ್ತ್ರ, ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು; ಪ್ರತೀ ವಿದ್ಯಾರ್ಥಿಗೆ ರೂ. ೬೦೦ ರಂತೆ ೩ವರ್ಷಗಳಿಗೊಮ್ಮೆ ಹಾಸಿಗೆ ಹೊದಿಕೆ; ಅಲ್ಲದೆ ಈ ವಸತಿ ಶಾಲೆಗಳಲ್ಲಿ ಗ್ರಂಥಾಲಯ, ಪ್ರಯೋಗಾಲಯ, ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆಯ್ಕೆ ಸಮಿತಿಯು ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಮೀಸಲಾತಿ ಅನುಪಾತವನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತದೆ. ಪ್ರವೇಶ ಪರೀಕ್ಷೆಯು ಆರು ಹಾಗೂ ಏಳನೇ ತರಗತಿಯ ಸ್ಥಾನಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಶಾಲೆಗಳಿಗೆ ೫ ನೇ ತರಗತಿಯಲ್ಲಿ ಉತ್ತೀರ್ಣರಾದ ೧೦ ರಿಂದ ೧೨ ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳನ್ನು ಕನ್ನಡ ಭಾಷೆ, ಗಣಿತ, ತ್ವರಿತ ಬರವಣಿಗೆ ಸಾಮಾನ್ಯ ಜ್ಞಾನ, ಬುದ್ಧಿವಂತಿಕೆ ಈ ವಿಷಯಗಳನ್ನೊಳಗೊಂಡ ಸ್ಪರ್ಧಾತ್ಮಕ ಮತ್ತು ಮೌಖಿಕ ಪರೀಕ್ಷೆಗಳ ಮೂಲಕ ನಿರ್ಧರಿಸಲಾಗುತ್ತದೆ. ಎಸ್.ಸಿ/ಎಸ್.ಟಿ. ಪ್ರವರ್ಗ-೧ರ ಹೊರತುಪಡಿಸಿ ಉಳಿದ ಪ್ರವರ್ಗಗಳಿಗೆ ವಾರ್ಷಿಕ ಆದಾಯ ರೂ. ೧೫,೦೦೦ (ಹದಿನೈದು ಸಾವಿರ) ಮಿತಿಯೊಳಗಿರಬೇಕು. ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯೊಂದರ ಅವಶ್ಯಕತೆಯನ್ನು ಕಂಡುಕೊಂಡು, ಕುಂದಾಪುರ ತಾಲೂಕಿನ ಬೈಂದೂರಿನಲ್ಲಿ ಇಂಥ ಒಂದು ಶಾಲೆಯನ್ನು ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ. ಈ ಸಂಬಂಧವಾಗಿ ಕುಂದಾಪುರ ತಾಲೂಕಿನ ಹೇರಂಜಾಲು ಗ್ರಾಮದಲ್ಲಿ ೧೧.೨೨ ಎಕರೆ ಸರ್ಕಾರಿ ಜಮೀನನ್ನು ಕಾದಿರಿಸಲಾಗಿದೆ. ಕಾರ್ಕಳದಲ್ಲೂ ಈಗ ಈ ವಸತಿ ಶಾಲೆಗೆ ಮಂಜೂರಾತಿ ದೊರೆತಿದೆ.

## ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ

ರಾಜ್ಯದ ಮಾನ್ಯತೆ ಪಡೆದ ವಾಣಿಜ್ಯ ವಿದ್ಯಾಶಾಲೆಗಳಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮಾಹೆಯಾನ ರೂ. ಐವತ್ತರಂತೆ ಹತ್ತು ತಿಂಗಳ ಅವಧಿಗೆ ಶಿಷ್ಯವೇತನ ನೀಡಲಾಗುತ್ತದೆ. ಶಿಷ್ಯವೇತನ ಮಂಜೂರಾತಿಗೆ ಆಗಸ್ಟ್, ಮೇ ಹಾಗೂ ಜನವರಿಯಿಂದ ಅಕ್ಟೋಬರ್ ಹೀಗೆ ಎರಡು ತಂಡಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ. ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಆದ್ಯತೆ ನೀಡಲಾಗುತ್ತದೆ. ೨೦೦೪-೦೫ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದವರ ಮತ್ತು ಇದಕ್ಕಾಗಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೨೮ರಲ್ಲಿ ನೀಡಲಾಗಿದೆ.

## ಹೆಚ್ಚುವರಿ ಭೋಜನ ವೆಚ್ಚ

ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ–೧ಕ್ಕೆ ಸೇರಿದ ಹಾಗೂ ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಯಿಂದ ಐದು ಕಿ.ಮೀ. ದೂರದ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸಿ ಉತ್ತೇಜನ ನೀಡುವ ದೃಷ್ಟಿಯಿಂದ, ವಸತಿ ನಿಲಯಗಳಲ್ಲಿ ವಾಸ್ತವ್ಯ ಮಾಡದೆ ಸ್ವಂತ ವಾಸ್ತವ್ಯ ಕಲ್ಪಿಸಿಕೊಂಡಂತಹ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುತ್ತದೆ. ಪ್ರವರ್ಗ–೧ಕ್ಕೆ ಸೇರಿದ ವಿದ್ಯಾರ್ಥಿಗಳು ಮಾತ್ರ ಈ ಸೌಲಭ್ಯ ಪಡೆಯಲು ಅರ್ಹರು. ೨೦೦೪–೦೫ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದವರ ಮತ್ತು ಇದಕ್ಕಾಗಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೨೮ರಲ್ಲಿ ನೀಡಲಾಗಿದೆ.

## ಶುಲ್ಕ ವಿನಾಯಿತಿ

ಸರಕಾರಿ ಮತ್ತು ಸರಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಯಾವುದೇ ಜಾತಿ ಮತ್ತು ಧರ್ಮಗಳಿಗೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ. ೧೧,೦೦೦ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಭೋದನಾ ಶುಲ್ಕ ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ ನೀಡಲಾಗುತ್ತದೆ. ಶುಲ್ಕ ವಿನಾಯಿತಿಯನ್ನು ವಿದ್ಯಾರ್ಥಿಗಳ ಸದ್ವರ್ತನೆ ಮತ್ತು ನಿಯಮಿತ ಹಾಜರಾತಿಯನ್ನು ಗಮನಿಸಿ ನೀಡಲಾಗುತ್ತದೆ. ೨೦೦೪–೦೫ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದವರ ಮತ್ತು ಇದಕ್ಕಾಗಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೨೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೮ : ವಿವಿಧ ಯೋಜನೆಗಳಿಗೆ (೨೦೦೪–೦೫) ಆದ ವೆಚ್ಚ ಹಾಗೂ ಫಲಾನುಭವಿಗಳ ವಿವರ**

| ಕ್ರ ಸಂ. | ವಿವಿಧ ಯೋಜನೆಗಳು | ಫಲಾನುಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| ೧ | ಮಾಂಗಲ್ಯ ಭಾಗ್ಯ | ೦ | ೦ |
| ೨ | ಶುಲ್ಕ ವಿನಾಯಿತಿ | ೬೫೧೪ | ೨೮.೯೫ |
| ೩ | ಪ್ರೋತ್ಸಾಹಧನ ಪಡೆದ ವಿದ್ಯಾರ್ಥಿಗಳು | ೬೨ | ೦.೧೮ |
| ೪ | ವಿದ್ಯಾರ್ಥಿ ವೇತನ | ೧೨೮೦೭ | ೧೪.೭೭ |
| ೫. | ಹೆಚ್ಚುವರಿ ಭೋಜನ ವೆಚ್ಚ | ೪೦೫ | ೩.೧೧ |
| ೬. | ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿಯ ಸೌಲಭ್ಯ | ೧೯ | ೦.೦೮ |
| | ಒಟ್ಟು | ೧೯೮೦೭ | ೪೭.೦೯ |

**ಮಾಹಿತಿ :** *ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

## ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅವರ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ, ಪ್ರವರ್ಗ–೧ನ್ನು ಹೊರತುಪಡಿಸಿ ವಾರ್ಷಿಕ ರೂ. ೧೫,೦೦೦ಗಳಿಗಿಂತ ಕಡಿಮೆ ಆದಾಯ ವಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮೊತ್ತವನ್ನು ನಿಗದಿಸಲಾಗಿದ್ದು ಅದರಂತೆ ಮಂಜೂರು ಮಾಡಲಾಗುತ್ತದೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಐದರಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅವರ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸಿ ಉತ್ತೇಜನ ನೀಡುವ ದೃಷ್ಟಿಯಿಂದ ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ.

## ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಇಲಾಖಾ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವಿವಿಧ ಪಬ್ಲಿಕ್ ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಲು ಸ್ಪರ್ಧಾತ್ಮಕ ಮನೋಭಾವ ಮೂಡಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ೨೦೦೪-೦೫ನೇ ಸಾಲಿನಲ್ಲಿ ಪ್ರೋತ್ಸಾಹ ಧನವನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಈ ಸಂಬಂಧವಾಗಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೨೮ರಲ್ಲಿ ನೀಡಲಾಗಿದೆ.

## ಹೊಲಿಗೆ ತರಬೇತಿ ಕೇಂದ್ರಗಳು

ಕನಿಷ್ಠ ಏಳನೇ ತರಗತಿಯಲ್ಲಿ ತೇರ್ಗಡೆಯಾದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರುದ್ಯೋಗಿ ಮಹಿಳೆಯರಿಗೆ, ಅವರು ಜೀವನದಲ್ಲಿ ಸ್ವಾವಲಂಬಿಗಳಾಗಲು ಇಲಾಖೆಯು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ವೃತ್ತಿಯಲ್ಲಿ ಒಂದು ವರ್ಷದ ತರಬೇತಿಯನ್ನು ನೀಡುತ್ತಿದೆ. ತರಬೇತಿಯ ಅಂತ್ಯದಲ್ಲಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಇಲಾಖಾ ವತಿಯಿಂದ ಪ್ರಮಾಣ ಪತ್ರವನ್ನು ಮತ್ತು ಅವರು ಸ್ವಯಂ ಉದ್ಯೋಗದಲ್ಲಿ ತೊಡಗಲು ಅನುಕೂಲವಾಗುವಂತೆ ಉಚಿತವಾಗಿ ಒಂದು ಹೊಲಿಗೆ ಯಂತ್ರವನ್ನೂ ನೀಡಲಾಗುತ್ತದೆ. ಅನುತ್ತೀರ್ಣರಾಗುವ ಅಭ್ಯರ್ಥಿಗಳು ಎರಡು ವರ್ಷದೊಳಗೆ ಮತ್ತೊಮ್ಮೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು. ಈ ಜಿಲ್ಲೆಯಲ್ಲಿ ಉಡುಪಿ ತಾಲೂಕಿನ ಕುಂಜಿಬೆಟ್ಟು ಎಂಬ ಸ್ಥಳದಲ್ಲಿ ಇಲಾಖೆಯು ನಡೆಸುತ್ತಿರುವ ಒಂದು ಹೊಲಿಗೆ ತರಬೇತಿ ಕೇಂದ್ರವಿದೆ.

**ಕೋಷ್ಟಕ ೧೬.೨೯ : ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ಪ್ರಯೋಜನ ಪಡೆದವರ ವಿವರ**

| ವರ್ಷ | ಹೊಲಿಗೆ ತರಬೇತಿ ಕೇಂದ್ರಗಳಿರುವ ಸ್ಥಳ | ತರಬೇತಿ ಪಡೆದ ಮಹಿಳೆಯರ ಸಂಖ್ಯೆ | ತೇರ್ಗಡೆಯಾದವರ ಸಂಖ್ಯೆ | ವಿತರಿಸಿದ ಹೊಲಿಗೆ ಯಂತ್ರಗಳ ಸಂಖ್ಯೆ | ಮಾಡಲಾದ ಖರ್ಚು(ಲಕ್ಷ ರೂ.ಗಳಲ್ಲಿ) |
|---|---|---|---|---|---|
| ೨೦೦೨-೦೩ | ೧. ಕುಂಜಿಬೆಟ್ಟು ಉಡುಪಿ ತಾಲೂಕು | ೨೦ | ೨೦ | ೨೦ | ೨.೬೫ |
| ೨೦೦೩-೦೪ | ೧. ಕುಂಜಿಬೆಟ್ಟು ಉಡುಪಿ ತಾಲೂಕು | ೨೦ | ೨೦ | ೨೦ | ೨.೬೦ |
| ೨೦೦೪-೦೫ | ೧. ಕುಂಜಿಬೆಟ್ಟು ಉಡುಪಿ ತಾಲೂಕು | ೨೦ | ೨೦ | ೨೦ | ೨.೭೬ |

***ಮಾಹಿತಿ:*** *ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

## ಕಾನೂನು ಪದವೀಧರರಿಗೆ ತರಬೇತಿ

ಸರಕಾರಿ ಆದೇಶ ದಿನಾಂಕ: ೩೦-೩-೧೯೭೫ರನ್ವಯ ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರಲ್ಲಿರುವ ನಿರುದ್ಯೋಗಿಗಳನ್ನು ಆಯ್ಕೆ ಮಾಡಿ ಅವರಿಗೆ ನಾಲ್ಕು ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರವರ್ಗ-೧ಕ್ಕೆ ಸೇರಿದ ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿದಂತಹ ಮುವ್ವತ್ತೊಂದರ ವಯೋಮಿತಿಯ ಅಭ್ಯರ್ಥಿಗಳನ್ನು

ಆಯ್ಕೆ ಮಾಡಬೇಕಾಗಿದ್ದು, ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ದೊರಕದಿದ್ದಲ್ಲಿ ಉಳಿದ ವರ್ಗಗಳಿಂದ ಅರ್ಹ ಅಭ್ಯರ್ಥಿಗಳನ್ನು ನಿಯಮಾನುಸಾರ ಆಯ್ಕೆ ಮಾಡಲಾಗುವುದು. ಪ್ರವರ್ಗ–೧ನ್ನು ಹೊರತುಪಡಿಸಿ ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ. ೧೫,೦೦೦/– ಗಳ ವಾರ್ಷಿಕ ಆದಾಯಮಿತಿಯನ್ನು ನಿಗದಿಪಡಿಸಲಾಗಿದೆ. ತಿಂಗಳಿಗೆ ಒಂದು ಸಾವಿರ ರೂ.ದಂತೆ, ನಾಲ್ಕು ವರ್ಷಗಳ ಅವಧಿಗೆ ಶಿಷ್ಯ ವೇತನ ನೀಡಲಾಗುತ್ತದೆ.

**ಕೋಷ್ಟಕ ೧೬.೩೦ : ಕಾನೂನು ಪದವೀಧರ ತರಬೇತಿ ಸೌಲಭ್ಯ ಪಡೆದ ಹಿಂದುಳಿದ ವರ್ಗದ ಅಭ್ಯರ್ಥಿಗಳ ವಿವರ**

| ವರ್ಷ | ಪುರುಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|
| ೨೦೦೧–೦೨ | ೪ | ೨ | ೦.೪೮ |
| ೨೦೦೨–೦೩ | ೪ | ೨ | ೦.೮೬ |
| ೨೦೦೩–೦೪ | ೫ | ೩ | ೦.೬೬ |

***ಮಾಹಿತಿ:*** *ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

## ಹಿಂದುಳಿದ ವರ್ಗಗಳ ಖಾಸಗಿ ಅನುದಾನಿತ ಅನಾಥಾಲಯಗಳು

ಪ್ರಾಥಮಿಕ ತರಗತಿ, ಮಾಧ್ಯಮಿಕ ತರಗತಿಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮಕ್ಕಳ, ಶಿಕ್ಷಣಕ್ಕೆ ಅನುಕೂಲವಾಗುವಂತೆ, ಕೆಲವು ಸ್ವಯಂ ಸೇವಾ ಸಂಸ್ಥೆಗಳು ನಡೆಸುವ, ಅನಾಥಾಲಯಗಳಿಗೆ, ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಅನಾಥಾಲಯದಲ್ಲಿರುವ ಅನಾಥರ ನಿರ್ಗತಿಕ ಮಕ್ಕಳ ಸಂಖ್ಯೆಗನುಗುಣವಾಗಿ, ಮಾಹೆಯಾನ ರೂ. ೧೫೦/– ರ ದರದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಿಗೆ ಆಹಾರದ ಬಾಬ್ತಾಗಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಆದರೆ ಈ ಜಿಲ್ಲೆಯಲ್ಲಿ ಅನುದಾನ ಪಡೆಯುತ್ತಿರುವ ಯಾವುದೇ ಹಿಂದುಳಿದ ವರ್ಗಗಳ ಖಾಸಗಿ ಅನಾಥಾಲಯಗಳು ಇರುವುದಿಲ್ಲ.

## ಆಶ್ರಮ ಶಾಲೆಗಳು

ಹಿಂದುಳಿದ ವರ್ಗಗಳ ಪ್ರವರ್ಗ–೧ ರಡಿಯಲ್ಲಿ ಸೇರ್ಪಡೆಯಾಗಿರುವ ಬಹುತೇಕ ಜಾತಿಗಳು ಅನಧಿಸೂಚಿತ, ಅಲೆಮಾರಿ ಹಾಗೂ ಅರೆ ಅಲೆಮಾರಿ ಜಾತಿಗೆ ಸೇರಿದವುಗಳಾಗಿವೆ. ಈ ಜನಾಂಗಗಳ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗುತ್ತಿದೆ. ಪ್ರತೀ ನಿಲಯಾರ್ಥಿಗೆ ಮಾಹೆಯಾನ ರೂ. ೩೫೦ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಆಹಾರ ವೆಚ್ಚ ರೂ.೨೦೦ರ ವೆಚ್ಚದಲ್ಲಿ ಸಮವಸ್ತ್ರ, ಮಾಹೆಯಾನ ರೂ. ೨೦ ರಂತೆ ಹತ್ತು ತಿಂಗಳ ಅವಧಿಗೆ ಇತರೆ ವೆಚ್ಚಗಳನ್ನು ನೀಡಲಾಗುವುದು. ಆದರೆ ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ನಡೆಸುತ್ತಿರುವ ಯಾವುದೇ ಆಶ್ರಮ ಶಾಲೆಗಳು ಇರುವುದಿಲ್ಲ. ಯಾವುದೇ ಮಹಿಳಾ ಕಲ್ಯಾಣ ಕೇಂದ್ರಗಳನ್ನೂ ಇಲಾಖೆಯಿಂದ ನಡೆಸಲಾಗುತ್ತಿಲ್ಲ.

## ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ೧೯೭೭ರಲ್ಲಿ ಸ್ಥಾಪನೆಗೊಂಡಿತು. ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ ೫೨ರಷ್ಟು ಇರುವ ಹಿಂದುಳಿದ ವರ್ಗಗಳ ಜನರಿಗೆ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯ ಆರ್ಥಿಕ ನೆರವನ್ನು ನೀಡುವ ಮೂಲಕ ಹಾಗೂ ಈ ವರ್ಗದ ಯುವ ನಿರುದ್ಯೋಗಿಗಳು ವೃತ್ತಿ ಕುಶಲತೆ ಬೆಳೆಸಿಕೊಳ್ಳುವ ಮೂಲಕ ಸ್ವಯಂ ಉದ್ಯೋಗಿಗಳಾಗಲು ಅವಕಾಶ ಕಲ್ಪಿಸುವುದು, ಅವರಿಗೆ ಅಗತ್ಯವಿರುವ ತರಬೇತಿ ನೀಡುವುದು, ಮತ್ತು ಆರ್ಥಿಕ ಅಸಮಾನತೆಗೆ ಒಳಗಾದ ಈ ದುರ್ಬಲ ವರ್ಗಗಳ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸುವುದು – ಇವೇ ಮೊದಲಾದ

ಉದ್ದೇಶಗಳಿಂದ, ಹಾವನೂರು ವರದಿಯ ಶಿಫಾರಸ್ಸಿನ ಪ್ರಕಾರ ಹಿಂದುಳಿದ ವರ್ಗಗಳಿಗಾಗಿ ಡಿ. ದೇವರಾಜ ಅರಸುರವರು ಮಾಡಿದ ಕೆಲಸಗಳನ್ನು ಗುರುತಿಸಿ, ಸರ್ಕಾರವು, ೨೦೦೫ರ ಅಕ್ಟೋಬರ್ ೨೮ರಿಂದ ಈ ನಿಗಮಕ್ಕೆ, "ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ" ಎಂದು ಮರು ನಾಮಕರಣ ಮಾಡಿದೆ. ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುತ್ತದೆ ಮತ್ತು ನಿರುದ್ಯೋಗಿ ಯುವಕರಿಗೆ ವೃತ್ತಿ ಕುಶಲತೆ ಬೆಳೆಸಿಕೊಳ್ಳಲು ನಿಗಮವು ವಿವಿಧ ಯೋಜನೆಗಳಡಿ ನೆರವು ಒದಗಿಸುತ್ತಿದೆ. ಈ ನಿಗಮವು ದಕ್ಷಿಣ ಕನ್ನಡ ಜಿಲ್ಲಾ ಕಚೇರಿಯ ಜಿಲ್ಲಾ ವ್ಯವಸ್ಥಾಪಕರ ನೇತೃತ್ವದಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

೧)ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ, ೨) ಗಂಗಾಕಲ್ಯಾಣ ನೀರಾವರಿ ಯೋಜನೆ, ೩) ವೃತ್ತಿಪರ ತರಬೇತಿ ಕಾರ್ಯಕ್ರಮಗಳು, ೪) ಅರಿವು ಯೋಜನೆ, ೫) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಗಳು (೨೦೦೩ನೇ ಸಾಲಿನಿಂದ) ೬)ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಗಳು. ೭) ನೇರ ಸಾಲ ಯೋಜನೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಯಡಿ ಈ ಕೆಳಗಿನ ವಲಯ ಯೋಜನೆಗಳಿಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ೧) ವ್ಯವಸಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು, ೨) ಕುಶಲಕರ್ಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ೩) ಸೇವಾವಲಯ ೪) ಸಾರಿಗೆ ವಲಯ ಹಾಗೂ ನ್ಯೂ ಸ್ವರ್ಣಿಮಾ ಯೋಜನೆ (ಮಹಿಳೆಯರಿಗೆ ಮಾತ್ರ)

## ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು

ಈ ನಿಗಮವನ್ನು ರಾಷ್ಟ್ರ ಮಟ್ಟದಲ್ಲಿ ಅಂಗವಿಕಲರ ಅಭಿವೃದ್ಧಿಗಾಗಿ ೧೯೯೭ರ ಜನವರಿ ೨೪ರಂದು ಸ್ಥಾಪಿಸಲಾಗಿದೆ. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ಚಾನಲೈಸಿಂಗ್ ಏಜೆನ್ಸಿಯಾಗಿ ನಿರ್ವಹಿಸಲು ೨೦೦೨ರ ಜೂನ್ ಆರರಂದು ರಾಜ್ಯ ಸರ್ಕಾರವು ನೇಮಿಸಿರುತ್ತದೆ. ೨೦೦೩-೦೪ ನೇ ಸಾಲಿನಿಂದ ಜಾರಿಗೊಳ್ಳುತ್ತಿರುವ ಈ ಯೋಜನೆಯಡಿಯಲ್ಲಿ ಎಲ್ಲಾ ರೀತಿಯ ಅಂಗವಿಕಲರೂ, ಅವರವರ ಅರ್ಹತೆಗೆ ತಕ್ಕ ಉದ್ಯೋಗವನ್ನು ಕೈಗೊಂಡು, ಸ್ವಾವಲಂಬಿಗಳಾಗಲು ಸಾಧ್ಯವಾಗುವಂತೆ, ಅವರಿಗೆ ಗರಿಷ್ಠ ಒಂದು ಲಕ್ಷ ರೂ.ಗಳವರೆಗೆ ಸಾಲವನ್ನು ನೀಡಲಾಗುತ್ತದೆ. ರೂ. ೫೦,೦೦೦ಗಳ ವರೆಗಿನ ಸಾಲಕ್ಕೆ ಶೇಕಡ ಐದರ ಬಡ್ಡಿಯನ್ನು ಹಾಗೂ ರೂ. ೫೦,೦೦೦ಗಳಿಂದ ಲಕ್ಷ ರೂ.ಗಳವರೆಗಿನ ಸಾಲಕ್ಕೆ ವರ್ಷಕ್ಕೆ ಶೇಕಡ ಆರರ ಬಡ್ಡಿಯನ್ನು ವಿಧಿಸಲಾಗುತ್ತದೆ.

ಶೇಕಡ ೪೦ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿದ್ದು, ಹದಿನೆಂಟರಿಂದ ೫೫ ವರ್ಷದೊಳಗಿದ್ದರೆ, ಗ್ರಾಮಾಂತರ ಪ್ರದೇಶದವರಾದರೆ ಅವರ ವಾರ್ಷಿಕ ಆದಾಯ ೮೦,೦೦೦ ರುಪಾಯಿಗಿಂತ ಕಡಿಮೆ ಹಾಗೂ ಪಟ್ಟಣ ಪ್ರದೇಶದವರಾದರೆ ಒಂದು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಅಂಥವರು, ಈ ಸಾಲವನ್ನು ಪಡೆಯಲು ಅರ್ಹರಾಗುತ್ತಾರೆ. ಉಡುಪಿ ಜಿಲ್ಲೆಯಲ್ಲಿ ೨೦೦೪-೦೫ನೇ ಸಾಲಿನಲ್ಲಿ ಏಳೂವರೆ ಲಕ್ಷ ರುಪಾಯಿಗಳ ವೆಚ್ಚದಲ್ಲಿ ಮುವ್ವತ್ತು ಅಂಗವಿಕಲರಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ.

## ಚೈತನ್ಯ ಸಾಫ್ಟ್ ಲೋನ್ ಸ್ಕೀಂ

ವ್ಯಾಪಾರ, ಕೈಗಾರಿಕೆ, ಕೃಷಿ ಕ್ಷೇತ್ರದ ಕಸುಬುಗಳು ಮತ್ತು ಸೇವಾ ವಲಯದಲ್ಲಿ ಬರುವ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದಂತಹ, ಒಂದು ಲಕ್ಷ ರೂ.ಗಳವರೆಗಿನ ಘಟಕ ವೆಚ್ಚದ ಯೋಜನೆಗಳನ್ನು ಕೈಗೊಳ್ಳುವುದಕ್ಕಾಗಿ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಮತ್ತು ಸಹಕಾರ ಸಂಘಗಳ ಸಹಯೋಗದೊಂದಿಗೆ ಸಾಲ ಸೌಲಭ್ಯವನ್ನು ಸರ್ಕಾರ ಕೊಡುವ ಶೇರು ಬಂಡವಾಳದಿಂದ ನಿಗಮವು ನೀಡುತ್ತದೆ. ಹಿಂದುಳಿದ ವರ್ಗಗಳ ಗುಂಪಿಗೆ ಸೇರಿದ್ದು, ಅವರ ವಾರ್ಷಿಕ ವರಮಾನವು ರೂ. ೨೨,೦೦೦/-ಗಳಿಗಿಂತ ಕಡಿಮೆ

ಇರುವವರು, ಈ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಹರು. ಜಿಲ್ಲಾ ಪಂಚಾಯತ್‌ನಲ್ಲಿರುವ ಸಮಿತಿಯು ಸಾಲವನ್ನು ಮಂಜೂರು ಮಾಡಿ, ಹಣ ಬಿಡುಗಡೆಗೆ ಈ ನಿಗಮಕ್ಕೆ ಪ್ರಸ್ತಾವನೆಯನ್ನು ಕಳಿಸುತ್ತದೆ. ನಿಗಮವು ೨೫,೦೦೦ ರೂ.ಗಳವರೆಗಿನ ಘಟಕ ವೆಚ್ಚಕ್ಕೆ ಶೇ.೫೦ರಷ್ಟು ಅಥವಾ ಗರಿಷ್ಟ ೫,೦೦೦ ರೂಪಾಯಿಗಳ ಸಬ್ಸಿಡಿಯನ್ನೂ, ೨೫,೦೦೧ರಿಂದ ಒಂದು ಲಕ್ಷ ರೂಪಾಯಿಗಳವರೆಗಿನ ಘಟಕಗಳಿಗೆ ಗರಿಷ್ಟ ೫,೦೦೦ ರೂಪಾಯಿಗಳ ಸಬ್ಸಿಡಿಯನ್ನೂ ಹಾಗೂ ಶೇ.೨೦ರಷ್ಟು ಆದರೆ ಗರಿಷ್ಟ ೨೦,೦೦೦ ರೂಪಾಯಿಗಳ ಮಾರ್ಜಿನ್ ಹಣವನ್ನೂ ವಾರ್ಷಿಕ ಶೇ.ನಾಲ್ಕು ರೂಪಾಯಿಯ ಬಡ್ಡಿ ದರದಲ್ಲಿ ಕೊಡಲಾಗುತ್ತದೆ.ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಚೈತನ್ಯ ಸಾಫ್ಟ್ ಲೋನ್ ಸ್ಕೀಂ ಅಡಿಯಲ್ಲಿ ನೀಡಲಾದ ಸಾಲ ಮತ್ತು ಫಲಾನುಭವಿಗಳ ಪ್ರವರ್ಗವಾರು ವಿವರಗಳನ್ನು ಕೋಷ್ಟಕ ೧೬.೩೧ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೧ : ಚೈತನ್ಯ ಸಾಫ್ಟ್ ಲೋನ್ ಸ್ಕೀಂ ವಿವರ**

| ವರ್ಷ | ಗುರಿ | | ಸಾಧನೆ | | | | | |
|---|---|---|---|---|---|---|---|---|
| | | | ಪ್ರವರ್ಗ ' ಒಂದು' & ಎರಡು 'ಎ' | | ಪ್ರವರ್ಗ ಮೂರು 'ಎ' & ಮೂರು 'ಬಿ' | | ಒಟ್ಟು | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೨೦೦೧–೦೨ | ೧೮೦ | ೧೯.೬೯ | ೫೨೯ | ೩೫–೯೨ | ೬೨ | ೩.೯೮ | ೫೯೧ | ೩೯.೯೦ |
| ೨೦೦೨–೦೩ | ೧೮೦ | ೧೭.೪೫ | ೨೦೧ | ೨೬.೨೨ | ೨೭ | ೩.೧೬ | ೨೨೮ | ೨೯.೩೮ |
| ೨೦೦೩–೦೪ | ೧೨೬ | ೧೪.೨೬ | ೧೦೮ | ೧೪.೮೬ | ೧೯ | ೨.೭೮ | ೧೨೭ | ೧೭.೬೪ |

*(ಮಾಹಿತಿ: ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು)*

೨೦೦೪–೦೫ನೇ ಸಾಲಿನಲ್ಲಿ ಚೈತನ್ಯ ಸಬ್ಸಿಡಿ/ಸಾಫ್ಟ್ ಲೋನ್ ಯೋಜನೆಯಲ್ಲಿ ಪಡೆದ ಅರ್ಜಿಗಳ, ಮಂಜೂರಾದ ಅರ್ಜಿಗಳ, ಹಾಗೂ ಶಿಫಾರಸುಗೊಂಡ ಅರ್ಜಿಗಳ ಹಾಗೂ ಬ್ಯಾಂಕ್‌ಗಳಲ್ಲಿ ಬಾಕಿ ನಿಂತ ಅರ್ಜಿಗಳ, ಪ್ರವರ್ಗವಾರು ವಿವರಗಳನ್ನು ಕೋಷ್ಟಕ ೧೬.೩೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೨ : ಚೈತನ್ಯ ಸಾಫ್ಟ್ ಲೋನ್ ಸ್ಕೀಂ ವಿವರ**

| ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | | ಬ್ಯಾಂಕ್‌ಗಳಿಗೆ ಶಿಫಾರಸು ಮಾಡಿದ ಅರ್ಜಿಗಳ ಸಂಖ್ಯೆ | | ಬ್ಯಾಂಕ್‌ಗಳಿಂದ ಮಂಜೂರಾದ ಅರ್ಜಿಗಳ ಸಂಖ್ಯೆ | | ಬ್ಯಾಂಕ್‌ಗಳಲ್ಲಿ ಬಾಕಿ ಉಳಿದ ಸರ್ಜಿಗಳ ಸಂಖ್ಯೆ | |
|---|---|---|---|---|---|---|---|
| ೧&೨ಎ | ೩ಎ &೩ಬಿ | ೧ & ೨ಎ | ೩ಎ&೩ಬಿ | ೧ಎ&೨ಎ | ೩ಎ&೩ಬಿ | ೧ಎ&೨ಎ | ೩ಎ&೩ಬಿ |
| ೧೪೨ | ೧೬ | ೧೩೪ | ೧೫ | ೧೦೮ | ೧೨ | ೯ | ೨ |

*(ಮಾಹಿತಿ:ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು)*

## ಗಂಗಾ ಕಲ್ಯಾಣ ನೀರಾವರಿ ಯೋಜನೆ

ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಒಣ ಭೂಮಿಗೆ ನೀರಾವರಿ ಕಲ್ಪಿಸುವದು ಈ ಯೋಜನೆಯ ಉದ್ದೇಶವಾಗಿದೆ. ಒಂದೇ ಕಡೆ ಕನಿಷ್ಟ ಎಂಟು ಎಕರೆ ಜಮೀನು ಹೊಂದಿರುವ ಕನಿಷ್ಟ ಮೂರು ಜನರು ಮತ್ತು ಅದಕ್ಕಿಂತ ಹೆಚ್ಚು ಹದಿನೈದು ಎಕರೆ ಜಮೀನು ಹೊಂದಿರುವ ಜಮೀನುಗಳಿಗೆ ಘಟಕ ವೆಚ್ಚ ೩.೫೦ಲಕ್ಷ ರೂ.ಗಳಲ್ಲಿ ಕೊಳವೆಭಾವಿಗಳನ್ನು ಕೊರೆಯಿಸಿ ಪಂಪ್‌ಸೆಟ್ ಅಳವಡಿಸಿ, ವಿದ್ಯುದೀಕರಣ ಮತ್ತು ನೀರಾವರಿ ಸೌಲಭ್ಯಗಳನ್ನೂ ಸಹ ಒದಗಿಸಿಕೊಡಲಾಗುತ್ತದೆ. ಜಿಲ್ಲೆಯಲ್ಲಿ ೨೦೦೩–೦೪ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯ ಕಾರ್ಯ ಸಾಧನೆಗೆ ಒದಗಿಸಿದ ಸೌಕರ್ಯ ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೩೩ ಹಾಗೂ ೧೬.೩೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೩ : ಗಂಗಾ ಕಲ್ಯಾಣ ಯೋಜನೆಯ ಸಾಮೂಹಿಕ ಮತ್ತು ವೈಯುಕ್ತಿಕ ಘಟಕಗಳ ಸಾಧನೆ ವಿವರ**

| ವರ್ಷ | ಗುರಿ | | | ಸಾಧನೆ | | | | | |
|---|---|---|---|---|---|---|---|---|---|
| | | | | ಪ್ರವರ್ಗ ' ಒಂದು' ಮತ್ತು ಎರಡು 'ಎ' | | ಪ್ರವರ್ಗ ಮೂರು 'ಎ' ಮತ್ತು ಮೂರು'ಬಿ' | | ಒಟ್ಟು | |
| ಭೌತಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| | ಸಾ.ಘ | ವೈ.ಘ. | | | | | | | |
| ೨೦೦೧-೦೨ | ೨ | ೧೧ | ೧೧,೪೧ | ೦ | ೦ | ೦ | ೦ | ೦ | ೦ |
| ೨೦೦೨-೦೩ | ೨ | ೧೨ | ೧೦.೧೨ | ೩ | ೧.೯೫ | ೦ | ೦ | ೩ | ೧.೯೫ |
| ೨೦೦೩-೦೪ | ೩ | ೧೨ | ೧೦.೦೦ | ೧ | ೦.೬೫ | ೦ | ೦.೦೦ | ೧ | ೦.೬೫ |

*ಮಾಹಿತಿ : ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು*

**ಕೋಷ್ಟಕ ೧೬.೩೪ : ಗಂಗಾ ಕಲ್ಯಾಣ ಯೋಜನೆಯ ಕಾರ್ಯ ಸಾಧನೆ ವಿವರ**

| ಸಾಮೂಹಿಕ | | ವೈಯಕ್ತಿಕ | ಕೊರೆದ ಕೊಳವೆ ಬಾವಿಗಳ ಸಂಖ್ಯೆ | ಏತ ನೀರಾವರಿ ಘಟಕ | ಫಲಾನು ಭವಿಗಳ ಸಂಖ್ಯೆ | ನೀರಾವರಿ ಗೊಂಡ ಭೂಮಿಯ ವಿಸ್ತೀರ್ಣ | ಮಾಡಲಾದ ಖರ್ಚು |
|---|---|---|---|---|---|---|---|
| ಘಟಕ | ಸಂಖ್ಯೆ | ಸಂಖ್ಯೆ | | | | | |
| – | – | ೩ | ೩ | ೧ | ೩ | ೮ ಎಕರೆ | ೩.೭೮ |

ನೇರ ಸಾಲ ಯೋಜನೆಯಲ್ಲಿ ೨೦೦೪–೦೫ನೇ ಸಾಲಿನಲ್ಲಿ ೧೬೩ ಫಲಾನುಭವಿಗಳು ಪ್ರಯೋಜನ ಪಡೆದಿದ್ದು, ಇವರಲ್ಲಿ ೧೪೫ ಒಂದು ಮತ್ತು ಎರಡು 'ಎ'ಪ್ರವರ್ಗಕ್ಕೆ ಸೇರಿದವರೂ; ಹದಿನೆಂಟು ಜನ ಪ್ರವರ್ಗ ಮೂರು 'ಎ' ಹಾಗೂ ಮೂರು 'ಬಿ' ಪ್ರವರ್ಗಕ್ಕೆ ಸೇರಿದವರೂ ಆಗಿರುತ್ತಾರೆ. ಇದರಿಂದ ಪ್ರವರ್ಗ ಒಂದು ಮತ್ತು ಎರಡು 'ಎ' ಪ್ರವರ್ಗದಲ್ಲಿ ಶೇಕಡ ೮೮.೯೬ರಷ್ಟು ಪ್ರಮಾಣದಲ್ಲಿ ಹಾಗೂ ಪ್ರವರ್ಗ ಮೂರು 'ಎ' ಹಾಗೂ ಮೂರು 'ಬಿ' ಯಲ್ಲಿ ಶೇಕಡ ೧೧.೦೪ ರಷ್ಟು ಪ್ರಮಾಣದಲ್ಲಿ ಸಾಲ ನೀಡಿದಂತಾಗಿದೆ.

ಪ್ರಾರಂಭಗೊಂಡಾಗಿನಿಂದಲೂ ಈ ನಿಗಮವು ಹಿಂದುಳಿದ ವರ್ಗಗಳ ಕುಶಲಕರ್ಮಿಗಳಿಗೆ ಹಾಗೂ ಗ್ರಾಮೀಣ ಗುಡಿ ಕೈಗಾರಿಕೆಗಳಿಗೆ ಆರ್ಥಿಕ ನೆರವಾಗಿ ಚೈತನ್ಯ ಸಹಾಯಧನ/ಮಾರ್ಜಿನ್ ಹಣ ಯೋಜನೆ, ವೃತ್ತಿ ತರಬೇತಿ, ವಾಹನಚಾಲನೆ, ಕಂಪ್ಯೂಟರ್ ಫೋರ್‌ಮನ್‌ಶಿಪ್, ಎಲೆಕ್ಟ್ರಾನಿಕ್ ಸರ್ವಿಸಿಂಗ್ ಅಂಡ್ ರಿಪೇಯರ್ಸ್, ಗಂಗಾಕಲ್ಯಾಣ ಹಾಗೂ ಅರಿವು ಈ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ.

## ಮೋಟಾರ್ ಡ್ರೈವಿಂಗ್ ತರಬೇತಿ

ವಿದ್ಯಾವಂತ ನಿರುದ್ಯೋಗಿ ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವ ಜನರ ಸ್ವಯಂ ಉದ್ಯೋಗಕ್ಕಾಗಿ ಭಾರಿ ಸಾರಿಗೆ, ಲಘು ಸಾರಿಗೆ, ಅಟೋರಿಕ್ಷಾ ವಾಹನ ಚಾಲನ ತರಬೇತಿಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ಮೋಟಾರ್ ಡ್ರೈವಿಂಗ್ ಸ್ಕೂಲ್‌ಗಳ ಮೂಲಕ ಉಚಿತವಾಗಿ ಕೊಡಿಸಲಾಗುತ್ತದೆ. ತರಬೇತಿ ಅವಧಿ ಒಂದು ತಿಂಗಳಾಗಿದ್ದು, ಈ ಅವಧಿಯಲ್ಲಿ ಸ್ಥಳೀಯರಿಗೆ ೧೫೦ ರೂ.ಗಳನ್ನೂ; ಪರಸ್ಥಳದವರಿಗೆ ೩೦೦ ರೂ.ಗಳನ್ನೂ ಸ್ಟೈಫಂಡ್ ರೂಪದಲ್ಲಿ ನೀಡಲಾಗುತ್ತದೆ. ಒಂದು ಬಾರಿ ಬಂದು ಹೋಗುವ ಬಸ್ ಛಾರ್ಜನ್ನೂ ಮತ್ತು ಲೈಸೆನ್ಸ್ ಶುಲ್ಕವನ್ನೂ ನಿಗಮವೇ ಭರಿಸುತ್ತದೆ.

## ಫೋರ್‌ಮನ್‌ಶಿಪ್ ತರಬೇತಿ

ಡಿಪ್ಲೊಮೊ ಹೊಂದಿರುವ ಹಿಂದುಳಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕೆಲಸದಲ್ಲಿ ಪರಿಣತರನ್ನಾಗಿ ಮಾಡಿಸಿ, ಉದ್ಯೋಗ ದೊರಕಿಸಿಕೊಳ್ಳುವಲ್ಲಿ ಅನುಕೂಲ ಮಾಡಿ ಕೊಡಲು, ಕೇಂದ್ರ ಸರ್ಕಾರದ

ಫೊರ್‌ಮನ್ ತರಬೇತಿ ಸಂಸ್ಥೆಯ ಮೂಲಕ ಒಂದು ವರ್ಷ ಅವಧಿಯ ಫೋರ್‌ಮನ್‌ಶಿಪ್ ತರಬೇತಿಯನ್ನು ನಿಗಮದಿಂದ ಕೊಡಿಸಲಾಗುತ್ತದೆ. ತರಬೇತಿಯ ಅವಧಿಯಲ್ಲಿ ತಿಂಗಳಿಗೆ ೫೦೦ ರೂ.ಗಳ ಸ್ಟೈಫಂಡನ್ನು ಶಿಕ್ಷಣಾರ್ಥಿಗಳಿಗೆ ನೀಡಲಾಗುತ್ತದೆ.

**ಕಂಪ್ಯೂಟರ್ ತರಬೇತಿ**

ವಿದ್ಯಾವಂತ ಹಿಂದುಳಿದ ವರ್ಗಗಳ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ನೆರವಾಗುವುದಕ್ಕಾಗಿ ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಸಂಸ್ಥೆಗಳ ಮೂಲಕ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿ ಶುಲ್ಕವನ್ನು ಸರ್ಕಾರವು ನೀಡುವ ಅನುದಾನದಿಂದ ಭರಿಸಲಾಗುತ್ತದೆ. ೨೦೦೪-೦೫ನೇ ಸಾಲಿನಿಂದ ಈ ಯೋಜನೆಗೆ ಸರ್ಕಾರವು ಆಯವ್ಯಯದಲ್ಲಿ ಹಣವನ್ನು ಒದಗಿಸದೇ ಇರುವುದರಿಂದ ಈ ಸಾಲಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿಲ್ಲ.

**ಶ್ರಮಶಕ್ತಿ ಯೋಜನೆ**

ರಾಜ್ಯದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ಕಸುಬುದಾರರು, ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ, ತಮ್ಮ ಸಾಂಪ್ರದಾಯಿಕ ಮಾರುಕಟ್ಟೆ ಮತ್ತು ವೃತ್ತಿ ಕುಶಲತೆಯನ್ನು ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಅವರ ಕುಶಲತೆ ಮತ್ತು ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಿ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯವಿರುವ ಆರ್ಥಿಕ ನೆರವನ್ನು ಒದಗಿಸುವ ದಿಸೆಯಲ್ಲಿ ಶ್ರಮಶಕ್ತಿ ಎಂಬ ನೂತನ ಯೋಜನೆಯನ್ನು ೨೦೦೫ನೇ ಸಾಲಿನಿಂದ ಅನುಷ್ಠಾನಗೊಳಿಸಿದೆ. ಶ್ರಮಶಕ್ತಿ ಯೋಜನೆಯು ಗರಿಷ್ಠ ೨೫೦೦೦/- ಸಾಲದ ಯೋಜನೆಯನ್ನೂ, ಹಾಗೂ ವೃತ್ತಿ ಕುಶಲತೆಯನ್ನು ಹೆಚ್ಚಿಸುವ ತರಬೇತಿ ಯೋಜನೆಯನ್ನೂ ಒಳಗೊಂಡಿರುತ್ತದೆ. ಅರ್ಜಿದಾರರಿಗೆ ಮೊದಲಿಗೆ ಘಟಕ ವೆಚ್ಚವನ್ನು ಸಾಲವಾಗಿ ನೀಡಿ, ಅರ್ಜಿದಾರರು ಶೇಕಡ ೭೫%ರಷ್ಟು ಸಾಲವನ್ನು ಬಡ್ಡಿ ಸಮೇತ ಮರುಪಾವತಿಸಿದಾಗ ಅವರ ಖಾತೆಗೆ ಶೇಕಡ ೨೫ರಷ್ಟು ಸಬ್ಸಿಡಿಯನ್ನು ಬ್ಯಾಕ್ ಎಂಡ್ ಸಬ್ಸಿಡಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಈ ಯೋಜನೆಯ ಉದ್ದೇಶಕ್ಕಾಗಿ ಸುಮಾರು ೩೪ ಅರ್ಹ ಪರಂಪರಾಗತ ಕುಶಲಕರ್ಮಿಗಳು/ ಕುಲಕಸುಬುಗಳೆಂದು ಗುರುತಿಸಿಡಲಾಗಿದೆ. ಅವೆಂದರೆ: ಬಡಗಿ ಕೆಲಸ/ಮರದ ಕೆತ್ತನೆ ಕೆಲಸ, ಚಿನ್ನ ಬೆಳ್ಳಿ ಕೆಲಸ, ಕಂಚು ಕೆಲಸ, ದರ್ಜಿ/ಹೊಲಿಗೆ ಕೆಲಸ, ಶೀಟ್ ಮೆಟಲ್ ಕೆಲಸ, ನಾರಿನಿಂದ ವಿವಿಧ ವಸ್ತುಗಳ ತಯಾರಿಕೆ ಕೆಲಸ ಕುಂಬಾರಿಕೆ/ ಕಲಾತ್ಮಕ ಮಡಕೆ ತಯಾರಿಕೆ ಕೆಲಸ; ಬಣ್ಣಗಾರಿಕೆ ಮತ್ತು ಮುದ್ರಣ, ದಂತ ಕೆತ್ತನೆ ಕೆಲಸ, ಕಮ್ಮಾರಿಕೆ, ಹತ್ತಿ ನೇಯ್ಗೆ, ಬೆತ್ತ ಮತ್ತು ಬಿದಿರು ಕೆಲಸ, ಕೆತ್ತನೆ ಕೆಲಸ, ಅಗರಬತ್ತಿ ತಯಾರಿಕೆ, ಗಾಡಿ/ರಥ ತಯಾರಿಕೆ, ಪೊರಕೆ ಕಡ್ಡಿ ತಯಾರಿಕೆ ಕೆಲಸ, ಟಿನ್ ವಸ್ತುಗಳ ತಯಾರಿಕೆ, ಜೇನು ಸಾಕಾಣಿಕೆ, ಕಲ್ಲು ಕೆತ್ತನೆ ಕೆಲಸಗಳು, ಮೆಟಲ್ ಕ್ರಾಫ್ಟ್, ಸುಣ್ಣ ಸುಡುವುದು, ಲಾಂಡ್ರಿ/ಧೋಬಿ ಕೆಲಸ, ಕ್ಷೌರಿಕ ವೃತ್ತಿ, ಮತ್ತು ಗಾಣದ ಕೆಲಸ. ಕುಶಲಕರ್ಮಿಗಳ ಸ್ವಸಹಾಯ ಗುಂಪುಗಳ ಗುಂಪು ಚಟುವಟಿಕೆಗೆ ಗರಿಷ್ಠ ಹತ್ತು ಜನರಿಗೆ ವೃತ್ತಿ/ಕುಲಕಸುಬನ್ನು ಆಧರಿಸಿದ ಯೋಜನೆಗೆ ತಕ್ಕಂತೆ ಅಥವಾ ಪ್ರತಿ ವ್ಯಕ್ತಿಗೆ ಗರಿಷ್ಠ ೧೫,೦೦೦/- ರೂ.ಗಳು ಮೀರದಂತೆ, ಗುಂಪಿಗೆ ಗರಿಷ್ಠ ಒಂದೂವರೆ ಲಕ್ಷ ರೂ.ಗಳನ್ನೂ; ಕುಶಲಕರ್ಮಿಗಳ ಸಹಕಾರ ಸಂಘಗಳ ಮೂಲಕ ಗುಂಪು ಚಟುವಟಿಕೆಗೆ ಗರಿಷ್ಠ ಇಪ್ಪತ್ತು ಜನರಿಗೆ ವೃತ್ತಿ/ ಕುಲಕಸುಬನ್ನು ಆಧರಿಸಿದ ಯೋಜನೆಗೆ ತಕ್ಕಂತೆ ಅಥವಾ ಪ್ರತಿ ವ್ಯಕ್ತಿಗೆ ಗರಿಷ್ಠ ೧೫,೦೦೦/- ರೂ.ಗಳು ಮೀರದಂತೆ, ಗುಂಪಿಗೆ ಸಹಕಾರ ಸಂಘದ ಮೂಲಕ ಗರಿಷ್ಠ ಮೂರು ಲಕ್ಷ ರೂ.ಗಳನ್ನೂ; ಮಂಜೂರು ಮಾಡಲಾಗುತ್ತದೆ. ಶ್ರಮಶಕ್ತಿ ಯೋಜನೆಯಲ್ಲಿ ಕೊಡುವ ಸಾಲಕ್ಕೆ ವಾರ್ಷಿಕ ಶೇಕಡ ನಾಲ್ಕರಂತೆ ಸರಳ ಬಡ್ಡಿಯನ್ನು ವಿಧಿಸಲಾಗುತ್ತದೆ.

## ಅಲ್ಪ ಸಂಖ್ಯಾತರ ಕಲ್ಯಾಣ

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ೧೯೯೮ರ ವರೆಗೆ ಒಂದೇ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರವು, ೧೯೯೮ರ ಡಿಸೆಂಬರ್

ಒಂಬತ್ತರ ಆದೇಶದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯನ್ನು ರಚಿಸಿ, ಈ ಸಂಬಂಧದ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಪ್ರತ್ಯೇಕಗೊಳಿಸಿದೆ. ಅದರಂತೆ ಈ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯು ೧೯೯೯ರ ಮೇ ೨೦ರಿಂದ ಕಾರ್ಯಾರಂಭ ಮಾಡಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಇಲಾಖಾ ಅಧಿಕಾರಿಗಳೇ ಈ ನಿರ್ದೇಶನಾಲಯದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಕಾನೂನು ಪದವೀಧರರಿಗೆ ತರಬೇತಿ, ಐ.ಟಿ.ಐ./ ಡಿಪ್ಲಮೊ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ, ಅಲ್ಪ ಸಂಖ್ಯಾತರ ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಅನುದಾನ ಮತ್ತು ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವವರಿಗೆ ತರಬೇತಿ, ಸಮುದಾಯ ಭವನ/ಶಾದಿ ಮಹಲ್ ನಿರ್ಮಾಣಕ್ಕೆ ಅನುದಾನ, ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ, ಮುಂತಾಗಿ, ಹೆಚ್ಚಿನ ಪ್ರಮಾಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಜಾರಿಗೊಳಿಸುವ ಹಲವಾರು ಕಾರ್ಯಕ್ರಮಗಳನ್ನೇ ಅದೇ ನಿಯಮಗಳನ್ನನುಸರಿಸಿ ಅಲ್ಪ ಸಂಖ್ಯಾತರಿಗಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಾರಿಗೊಳಿಸಬೇಕಾಗಿರುತ್ತದೆ. ಅದರಂತೆ ಮೇಲಿನ ನಿಯಮಗಳನ್ನನುಸರಿಸಿ, ಜಿಲ್ಲೆಯಲ್ಲಿ ಜಾರಿಗೊಳ್ಳುತ್ತಿರುವ ಮಾಂಗಲ್ಯ ಭಾಗ್ಯ, ಶುಲ್ಕ ವಿನಾಯಿತಿ, ಪ್ರೋತ್ಸಾಹಧನ, ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ, ಹೆಚ್ಚುವರಿ ಭೋಜನ ವೆಚ್ಚ, ಮುಂತಾದ ವಿವಿಧ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾದ ಮೊತ್ತ ಮತ್ತು ಇವುಗಳ ಪ್ರಯೋಜನ ಪಡೆದ ಫಲಾನುಭವಿಗಳ ವಿವರಗಳನ್ನು ಕೆಳಗಿನ ಕೋಷ್ಟಕ ೧೬.೩೫ ಹಾಗೂ ೧೬.೩೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೫ : ವಿವಿಧ ಯೋಜನೆಗಳಿಗೆ (೨೦೦೪-೦೫) ಆದ ವೆಚ್ಚ ಹಾಗೂ ಫಲಾನುಭವಿಗಳ ವಿವರ**

| ಕ್ರ ಸಂ | ವಿವಿಧ ಯೋಜನೆಗಳು | ಫಲಾನುಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| ೧ | ಮಾಂಗಲ್ಯ ಭಾಗ್ಯ | ೦ | ೦ |
| ೨ | ಶುಲ್ಕ ವಿನಾಯಿತಿ | ೩೭೬೦ | ೧೬.೭೮ |
| ೩ | ಪ್ರೋತ್ಸಾಹಧನ ಪಡೆದ ವಿದ್ಯಾರ್ಥಿಗಳು | ೧೩ | ೦.೦೩ |
| ೪ | ವಿದ್ಯಾರ್ಥಿ ವೇತನ | ೧೨೯೮ | ೧.೪೯ |
| ೫. | ಹೆಚ್ಚುವರಿ ಭೋಜನ ವೆಚ್ಚ | ೧೨೬ | ೦.೯೬ |
| ೬. | ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿಯ ಸೌಲಭ್ಯ | ೧ | ೦.೦೦೫ |
| | ಒಟ್ಟು | ೫೧೯೮ | ೧೯.೨೬೫ |

*(ಮಾಹಿತಿ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ)*

**ಕೋಷ್ಟಕ ೧೬.೩೬ : ಕಾನೂನು ಪದವೀಧರ ತರಬೇತಿ ಸೌಲಭ್ಯ ಪಡೆದ ಅಲ್ಪಸಂಖ್ಯಾತ ಅಭ್ಯರ್ಥಿಗಳ ವಿವರ**

| ವರ್ಷ | ಪುರುಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ಆದ ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| ೨೦೦೧-೦೨ | ೪ | – | ೦.೨೯ |
| ೨೦೦೨-೦೩ | ೪ | ೧ | ೦.೫೫ |
| ೨೦೦೩-೦೪ | ೫ | ೧ | ೦.೪೮ |

*(ಮಾಹಿತಿ : ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ)*

**ಅನುದಾನಿತ ಖಾಸಗಿ ಅನಾಥಾಲಯಗಳು :** ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ, ಅನಾಥಾಲಯಗಳಿಗೆ ಪ್ರೋತ್ಸಾಹ/ನೆರವು ನೀಡುವ ದೃಷ್ಟಿಯಿಂದ ತಂದೆ ತಾಯಿ ಅಥವಾ ಇಬ್ಬರೂ ಇಲ್ಲದ ಮಗುವಿನ ಪೋಷಕರ ವಾರ್ಷಿಕ ಆದಾಯವು,

ಎಲ್ಲಾ ಮೂಲಗಳಿಂದ ರೂ. ೧೧೦೦೦ ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹವರನ್ನು ಅನಾಥರೆಂದು ಪರಿಗಣಿಸಿ ಮಾಹೆಯಾನ ರೂ.೧೫೦ರ ದರದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಿಗೆ ಆಹಾರದ ಬಾಬ್ತಾಗಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಅನಾಥ ಮತ್ತು ನಿರ್ಗತಿಕ ಮಕ್ಕಳು ಅವರ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸುವವರೆಗೂ ಈ ಅನಾಥಾಲಯಗಳಲ್ಲಿ ಮುಂದುವರೆಯಲು ಅವಕಾಶವಿರುತ್ತದೆ. ಪ್ರಾಥಮಿಕ ತರಗತಿ, ಮಾಧ್ಯಮಿಕ ತರಗತಿಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮಕ್ಕಳು ಮಾತ್ರ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ ಅನಾಥಾಲಯವು ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಮಾತ್ರ ಸಹಾಯಧನ ಮಂಜೂರು ಮಾಡಲಾಗುವುದು. ನಿಲಯಾರ್ಥಿಗಳ ಶಾಲಾ ಮತ್ತು ಅನಾಥಾಲಯದ ಹಾಜರಾತಿ ಮತ್ತು ವಾಸ್ತವಿಕ ಖರ್ಚುಗಳಿಗೆ ಒಳಪಟ್ಟಂತೆ ಸಹಾಯಧನಕ್ಕೆ ಲೆಕ್ಕ ಹಾಕಲಾಗುವುದು. ಈ ಜಿಲ್ಲೆಯಲ್ಲಿ ಅನುದಾನ ಪಡೆಯುತ್ತಿರುವ ಮೂರು ಖಾಸಗಿ ಅನುದಾನಿತ ಅಲ್ಪ ಸಂಖ್ಯಾತರ ಅನಾಥಾಲಯಗಳು ಮಾತ್ರ ಇದ್ದು ಅವು ಅಲ್ಪ ಸಂಖ್ಯಾತರ ಇಲಾಖೆಯಿಂದ ಹಿಂದುಳಿದ ವರ್ಗಗಳ ಅಧಿಕಾರಿಗಳ ಮೂಲಕ ಅನುದಾನವನ್ನು ಪಡೆಯುತ್ತಿವೆ. ಆದರೆ ಉಡುಪಿ ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಾಗಲೀ, ಅಲ್ಪ ಸಂಖ್ಯಾತರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಾಗಲೀ, ಇರುವುದಿಲ್ಲ.

**ಕೋಷ್ಟಕ ೧೬.೩೭ : ಅಲ್ಪಸಂಖ್ಯಾತರ ಖಾಸಗಿ ಅನಾಥಾಲಯಗಳ ವಿವರ**

| ವರ್ಷ | ಅಲ್ಪಸಂಖ್ಯಾತರ ಬಾಲಕರ ಅನಾಥಾಲಯಗಳು | | ಅಲ್ಪಸಂಖ್ಯಾತರ ಬಾಲಕಿಯರ ಅನಾಥಾಲಯಗಳು | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ನಿಲಯಗಳ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|---|---|---|
| | ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ನಿಲಯಗಳ ಸಂಖ್ಯೆ | ಬಾಲಕಿಯರ ಸಂಖ್ಯೆ | | | |
| ೨೦೦೨-೦೩ | ೧ | ೫೯ | ೨ | ೯೬ | ೧೫೫ | ೩ | ೨.೨೬ |
| ೨೦೦೩-೦೪ | ೧ | ೫೦ | ೨ | ೯೨ | ೧೪೨ | ೩ | ೨.೦೭ |
| ೨೦೦೪-೦೫ | ೧ | ೪೯ | ೨ | ೯೪ | ೧೪೩ | ೩ | ೨.೦೮ |

***ಮಾಹಿತಿ :** ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ*

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ೧೯೮೬ರಲ್ಲಿ ಸ್ಥಾಪನೆಗೊಂಡಿದೆ. ಮತೀಯ ಅಲ್ಪ ಸಂಖ್ಯಾತರಾದ ಮುಸ್ಲಿಮರು, ಕ್ರಿಶ್ಚಿಯನ್ನರು, ಜೈನರು, ಬೌದ್ಧರು, ಸಿಖ್ಖರು, ಪಾರ್ಸಿಗಳು ಮತ್ತು ಆಂಗ್ಲೋ ಇಂಡಿಯನ್ ಜನಾಂಗದವರ ಏಳಿಗೆಗಾಗಿ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವುದು ನಿಗಮದ ಉದ್ದೇಶವಾಗಿದೆ. ಸ್ವಾವಲಂಬನೆ ಸಾಫ್ಟ್ ಲೋನ್ ಯೋಜನೆ, ವೃತ್ತಿ ತರಬೇತಿ ಯೋಜನೆ ಹಾಗೂ ಗಂಗಾಕಲ್ಯಾಣ ಯೋಜನೆ ಮುಂತಾದ ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಿಗಮದ್ದಾಗಿದೆ. ಸ್ವಾವಲಂಬನೆ ಸಾಫ್ಟ್ ಲೋನ್ ಯೋಜನೆ: ಅಲ್ಪಸಂಖ್ಯಾತರು ಕೈಗೊಳ್ಳುವ ವ್ಯಾಪಾರ ಸೇವಾ ಉದ್ದಿಮೆಗಳು, ಕೈಗಾರಿಕೆಗಳು ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳ ಸಾಲ ಸೌಲಭ್ಯ ಒದಗಿಸಿಕೊಡಲಾಗುತ್ತದೆ.

**ತರಬೇತಿ ಯೋಜನೆಗಳು :** ನಿಗಮವು ನಿರುದ್ಯೋಗ ವಿದ್ಯಾವಂತ ಯುವಕರಿಗೆ ಹಾಗೂ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವೃತ್ತಿ ತರಬೇತಿ ಯೋಜನೆಗಳಲ್ಲಿ ಕಂಪ್ಯೂಟರ್ ತರಬೇತಿ, ಫೋರ್‌ಮನ್ ತರಬೇತಿ ವಾಹನ ಚಾಲನ ತರಬೇತಿ, ಟೈಲರಿಂಗ್, ಎಂಬ್ರಾಯಿಡರಿ, ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್, ಬೂಟು ತಯಾರಿಕೆ, ಚರ್ಮದ ಬಟ್ಟೆ ತಯಾರಿಕೆ, ಫ್ಯಾಶನ್ ಡಿಸೈನಿಂಗ್ ತಯಾರಿಕಾ ತಂತ್ರಜ್ಞಾನ, ರೇಷ್ಮೆ ಹಾಗೂ ಹತ್ತಿ ಬಟ್ಟೆ ನೇಯ್ಗೆ ತರಬೇತಿ ನೀಡಲಾಗುತ್ತದೆ. ಇದಕ್ಕೆ ಸರ್ಕಾರವು ಅನುದಾನ ನೀಡುತ್ತಿದೆ.

**ಗಂಗಾಕಲ್ಯಾಣ ಯೋಜನೆ :** ಮತೀಯ ಅಲ್ಪಸಂಖ್ಯಾತರಲ್ಲಿ ಇಬ್ಬರಿಂದ ನಾಲ್ಕು ಜನರಿರುವ ರೈತರುಗಳಿಗೆ ಕನಿಷ್ಠ ಎಂಟು ಎಕರೆ ಜಮೀನು ಇರುವ ಇಬ್ಬರಿಂದ ನಾಲ್ಕು ಜನರ ಕುಟುಂಬದವರಿಗೆ ಎರಡು ಕೊಳವೆ ಬಾವಿ ತೆಗೆಯಲು ತಗಲುವ ವೆಚ್ಚ ಹಾಗೆಯೇ ಎಂಟರಿಂದ ೧೫ ಎಕರೆ ಜಮೀನು ಇರುವವರಿಗೆ ಮೂರು ಕೊಳವೆ ಬಾವಿ ಕೊರೆಯಲು ಹಾಗೂ ಸಂಪೂರ್ಣ ನೀರಾವರಿ ಸೌಲಭ್ಯ ಪಡೆದುಕೊಳ್ಳಲು ಆಗುವ ವೆಚ್ಚವನ್ನು ನಿಗಮ ಅನುದಾನ ರೂಪದಲ್ಲಿ ಒದಗಿಸುತ್ತವೆ. ನೆಲಮಟ್ಟದಲ್ಲಿ ದೊರೆಯುವ ನದಿ, ಹಳ್ಳಗಳಿಂದ ದೊರೆಯುವ ನೀರನ್ನು ಏತ ನೀರಾವರಿ ಯೋಜನೆ ಮೂಲಕ ಗಂಗಾ ಕಲ್ಯಾಣ ಯೋಜನೆಯಡಿ ಅಳವಡಿಸಿ ಯೋಜನೆಗೆ ತಗಲುವ ಸಂಪೂರ್ಣ ವೆಚ್ಚವನ್ನು ಧನಸಹಾಯರೂಪದಲ್ಲಿ ನಿಗಮ ನೀಡುವುದು. ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕ  ಕಚೇರಿಯಿಂದ ಆಯ್ಕೆಗೊಂಡ ಎರಡರಿಂದ ನಾಲ್ಕು ಎಕರೆ ಜಮೀನು ಹೊಂದಿರುವವರು ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿ ಒಂದು ಕೊಳವೆ ಬಾವಿ ಕೊರೆದು, ಪಂಪನ್ನು ಅಳವಡಿಸಿಕೊಡಲು ಆಗುವ ವೆಚ್ಚವನ್ನು ಧನಸಹಾಯ ರೂಪದಲ್ಲಿ ಪಡೆಯಲು ಅವಕಾಶವಿದೆ. ಅರಿವು ಯೋಜನೆಯಡಿಯಲ್ಲಿ ವೃತ್ತಿಪರ ವಿದ್ಯಾಭ್ಯಾಸಕ್ಕಾಗಿ ಅಂದರೆ ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಹಾಗೂ ಬಿ.ಡಿ.ಎಸ್ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ. ೫೦,೦೦೦ಗಳ ವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ವಿದ್ಯಾಭ್ಯಾಸ ಪೂರ್ಣಗೊಂಡ ನಂತರ ನಿಗಮದಿಂದ ಪಡೆದ ಸಾಲವನ್ನು ಶೇ. ಎರಡರ ಬಡ್ಡಿದರದಲ್ಲಿ ಮರು ಪಾವತಿ ಮಾಡಬೇಕಾಗುವುದು.

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

ಬಡ ಮಹಿಳೆಯರು, ಹಿಂದುಳಿದ ಮಹಿಳೆಯರು ಹಾಗೂ ಮಕ್ಕಳ ಅಭಿವೃದ್ಧಿಗಾಗಿ 'ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ' ಇಲಾಖೆಯು ಕಾರ್ಯ ನಿರ್ವಹಿಸುತ್ತಿದೆ. ಈ ಇಲಾಖೆ ಮುಖ್ಯವಾಗಿ ಬಡತನ ರೇಖೆಗಿಂತ ಕೆಳಗಿರುವ ಅಥವಾ ಬಡತನದ ಅಂಚಿನಲ್ಲಿರುವ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನವಿಟ್ಟು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸುತ್ತಿದೆ. ಮಹಿಳೆ ಕೇವಲ ಗೃಹಿಣಿಯಾಗಿದ್ದು, ಗೃಹಕಾರ್ಯಕ್ಕಷ್ಟೇ ತನ್ನ ಶಕ್ತಿ ಸಾಮರ್ಥ್ಯಗಳನ್ನು ಸೀಮಿತಗೊಳಿಸಿಕೊಳ್ಳದೇ, ಘನತೆ–ಗೌರವಗಳನ್ನು ಆಕೆಗೆ ದೊರಕಿಸಿಕೊಡುವಂತಹ ಇನ್ನಿತರ ಪ್ರಮುಖ ಕಾರ್ಯಗಳನ್ನೂ ನಿರ್ವಹಿಸಲು ಅನುವಾಗುವಂತೆ ಸೂಕ್ತ ನೆರವು ಮತ್ತು ಪ್ರೋತ್ಸಾಹಗಳನ್ನು ನೀಡುವಂತಹ ಅನೇಕ ಯೋಜನೆಗಳನ್ನು ಈ ಇಲಾಖೆಯ ಮೂಲಕ ಜಾರಿಗೊಳಿಸಲಾಗುತ್ತದೆ. ಸಮಾನತೆ ಹಾಗೂ ಸಾಮಾಜಿಕ ನ್ಯಾಯವನ್ನು ಗಳಿಸಿಕೊಡುವ ಮೂಲಕ ಸಾಮಾಜಿಕ ಸುಧಾರಣೆ ಮಾಡುವುದೂ ಈ ಇಲಾಖೆಯ ಉದ್ದೇಶಗಳಲ್ಲಿ ಒಂದು. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ ಹೆಣ್ಣು ಮಕ್ಕಳು ಸುಖ ಸೌಲಭ್ಯಗಳನ್ನು ಹೊಂದಿರಬೇಕಾದರೆ ಮತ್ತು ರಾಷ್ಟ್ರದ ಅಭಿವೃದ್ಧಿವಾಹಿನಿಯಲ್ಲಿ ಬರಬೇಕಾದರೆ, ಅವರು ತಮ್ಮನ್ನು ವಿವಿಧ ಉತ್ಪಾದನಾ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದಬೇಕು, ಇದರೊಂದಿಗೆ ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು, ಎಂಬ ದೃಷ್ಟಿಯಿಂದ ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಈ ಇಲಾಖೆಯ ಮುಖಾಂತರ ಕೆಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮಕ್ಕಳ ಉಳಿವು, ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನೂ ಇದು ಅನುಷ್ಠಾನಗೊಳಿಸುತ್ತಿದೆ. ಉಡುಪಿ ಜಿಲ್ಲೆಯಲ್ಲಿ, ಜಿಲ್ಲಾ ಪಂಚಾಯಿತಿಯು ಈ ಇಲಾಖೆಯ ಕಾರ್ಯಕ್ರಮಗಳನ್ನು, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳ ಕಛೇರಿಯ ಮೂಲಕ ಅನುಷ್ಠಾನಗೊಳಿಸುತ್ತಿದೆ. ಹೀಗೆ ಸುಸಂಘಟಿತ ಶಿಶು ಅಭಿವೃದ್ಧಿ ಯೋಜನೆ, ಅಂಗನವಾಡಿ ಕೇಂದ್ರಗಳು, ಪೂರಕ ಪೌಷ್ಟಿಕ ಆಹಾರ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆ, ಸ್ತ್ರೀ ಶಕ್ತಿ ಯೋಜನೆ, ಸುಧಾರಣಾ ಸಂಸ್ಥೆಗಳ ಅನುಷ್ಠಾನ, ವೃದ್ಧರ ಮತ್ತು ಅಶಕ್ತರ ಯೋಜನೆ, ಉದ್ಯೋಗಿನಿ ಮಾರುಕಟ್ಟೆ ಸಹಾಯ ಯೋಜನೆ, ನಮ್ಮ ಮಗಳು ನಮ್ಮ ಶಕ್ತಿ ಯೋಜನೆ, ಅಂಗನವಾಡಿ ಕಟ್ಟಡಗಳ ನಿರ್ಮಾಣ ಯೋಜನೆ, ವೃತ್ತಿ ಶಿಕ್ಷಣ ಯೋಜನೆ, ಮಹಿಳಾ ಕಾನೂನು ಪದವೀಧರರಿಗೆ ಧನಸಹಾಯ, ಗ್ರಾಮೀಣ ಪ್ರದೇಶ ಹೆಣ್ಣುಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿವೇತನ, ವಿಧವೆಯರ ಪುನರ್ವಿವಾಹಕ್ಕಾಗಿ ಹಣಕಾಸು ನೆರವು ಹಾಗೂ ಕಿತ್ತೂರು ಚೆನ್ನಮ್ಮ ಮಕ್ಕಳ ರಾಷ್ಟ್ರೀಯ ಪುರಸ್ಕಾರ ಯೋಜನೆ – ಇವು ಈ ಕಛೇರಿಯಿಂದ ಕಾರ್ಯಗತಗೊಳಿಸಲಾಗುತ್ತಿರುವ ಕಾರ್ಯಕ್ರಮಗಳಾಗಿವೆ.

**ಬಾಲಿಕಾ ಸಮೃದ್ಧಿ ಯೋಜನೆ :** ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಇರುವ ಕೀಳು ಮನೋಭಾವನೆಯನ್ನು ಹೋಗಲಾಡಿಸಿ ಗೌರವ ಮತ್ತು ವಿಶ್ವಾಸದ ಭಾವನೆ ಮೂಡಿಸುವ ನಿಟ್ಟಿನಲ್ಲಿ ಹೆಣ್ಣು ಮಗುವಿಗೆ ಸಾಮಾಜಿಕ ಭದ್ರತೆ ನೀಡುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ದಿ. ೧೫–೬–೧೯೯೭ ರ ನಂತರ ಹುಟ್ಟಿದ ಹೆಣ್ಣು ಮಗುವಿಗೆ ಕೊಡುಗೆ ರೂಪದಲ್ಲಿ ರೂ.೫೦೦/– ಗಳನ್ನು ನೀಡಲಾಗುವುದು. ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಮತ್ತು ಸಹಾಯಕಿಯರು ಈ ಯೋಜನೆ ಯಡಿಯಲ್ಲಿ ಫಲಾನುಭವಿಗಳೆಂದು ಪರಿಗಣಿಸಿ ಅವರಿಗೆ ಈ ಸೌಲಭ್ಯಗಳನ್ನು ನೀಡಲಾಗಿದೆ. ಶಾಲೆಯಲ್ಲಿ ಹೆಣ್ಣು ಮಕ್ಕಳ ಹಾಜರಾತಿ ಸುಧಾರಿಸುವ ಮತ್ತು ಬಾಲಕಿಯರ ಮದುವೆಯ ವಯಸ್ಸನ್ನು ಹೆಚ್ಚಿಸುವ ದೃಷ್ಟಿಯಿಂದಲೂ, ಈ ಯೋಜನೆಯನ್ನು ರೂಪಿಸಲಾಗಿದೆ. ಹೆಣ್ಣು ಮಗುವು ಶಾಲೆಗೆ ಹಾಜರಾಗಿ ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮುಂದುವರೆಸಿ, ಹದಿನೆಂಟು ವರುಷದವರೆಗೆ ಮದುವೆಯಾಗದಿದ್ದಲ್ಲಿ, ಪ್ರತೀ ತರಗತಿಗೆ ಪ್ರತಿ ವರ್ಷಕ್ಕೆ, ಈ ಕೆಳಗಿನಂತೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಜಂಟಿ ಉಳಿತಾಯ ಖಾತೆಯಲ್ಲಿ ಠೇವಣಿಯನ್ನು ಬಡ್ಡಿ ಸಮೇತ ನೀಡಲಾಗುತ್ತದೆ.

**ಕೋಷ್ಟಕ ೧೬.೩೮ : ವಾರ್ಷಿಕ ವಿದ್ಯಾರ್ಥಿ ವೇತನ ವಿವರ**

| | | |
|---|---|---|
| ಒಂದರಿಂದ ಮೂರನೇ ತರಗತಿಯವರೆಗೆ | ರೂ.೩೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| ನಾಲ್ಕನೇ ತರಗತಿಗೆ | ರೂ.೫೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| ಐದನೇ ತರಗತಿಗೆ | ರೂ.೬೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| ಆರನೇ ತರಗತಿಯಿಂದ ಏಳನೇ ತರಗತಿ | ರೂ.೭೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| ಎಂಟನೇ ತರಗತಿಯಿಂದ | ರೂ.೮೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| ಒಂಭತ್ತನೇ ತರಗತಿಯಿಂದ ಹತ್ತನೇ ತರಗತಿ | ರೂ.೧೦೦೦/– | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |

*ಮಾಹಿತಿ: ಇಲಾಖೆಯ ವಾರ್ಷಿಕ ವರದಿ*

ಸುವರ್ಣ ಸ್ವಾತಂತ್ರ್ಯೋತ್ಸವದ ಸಲುವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಲ್ಲಿ ಜನಿಸಿದ ಹೆಣ್ಣು ಮಗುವಿನ ತಾಯಂದಿರಿಗೆ ರೂಪಾಯಿ ಐನೂರುಗಳನ್ನು ಬಹುಮಾನವಾಗಿಯೂ ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಈ ಯೋಜನೆಯಡಿ ವಿದ್ಯಾರ್ಥಿ ವೇತನ ಮತ್ತು ತಾಯಂದಿರ ಬಹುಮಾನದ ಪ್ರಯೋಜನ ಪಡೆದವರ ಹಾಗೂ ಖರ್ಚು ಮಾಡಲಾದ ಹಣದ ವಿವರಗಳನ್ನು ಕೋಷ್ಟಕ ೧೬.೩೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೯ : ಬಾಲಿಕಾ ಸಮೃದ್ಧಿ ಯೋಜನೆಯಡಿ ಪ್ರಯೋಜನ ಪಡೆದವರ ವಿವರ**

| ಕ್ರ. ಸಂ. | ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು ಮಾಡಲಾದ ಹಣ (ಲಕ್ಷ ರೂ.ಗಳಲ್ಲಿ) |
|---|---|---|---|
| ೧ | ೨೦೦೧–೦೨ | ೨೬೦ | ೬.೫೦ |
| ೨ | ೨೦೦೨–೦೩ | ೧೬೦ | ೪.೦೦ |
| ೩ | ೨೦೦೩–೦೪ | – | – |
| ೪ | ೨೦೦೪–೦೫ | ೨೦೦ | ೬.೦೦ |

*ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

**ಸ್ತ್ರೀ ಶಕ್ತಿ ಯೋಜನೆ :** ರಾಜ್ಯದಲ್ಲಿ ಹೊಸದಾಗಿ, ೨೦೦೦ನೇ ಸಾಲಿನ ಅಕ್ಟೋಬರ್ ತಿಂಗಳಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ರಾಜ್ಯದಲ್ಲಿ ಬಹಳ ಅಲ್ಪಾವಧಿಯಲ್ಲೇ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಕಾರ್ಯಕ್ರಮವೆಂದರೆ ಈ ಸ್ತ್ರೀ ಶಕ್ತಿ ಯೋಜನೆ. ರಾಜ್ಯದ ಹಲವಾರು ಸ್ತ್ರೀಯರು ಈ ಯೋಜನೆಯಡಿ ಆರ್ಥಿಕವಾಗಿ ಮಾತ್ರವಲ್ಲದೆ, ಹಣಕಾಸು ವ್ಯವಹಾರ, ಓದು–ವಿದ್ಯೆಗಳಲ್ಲೂ ಮುಂದುವರಿದಿದ್ದು, ಜೀವನವನ್ನು ಸ್ವತಃ ನಡೆಸಬಲ್ಲೆವೆಂಬ ಆತ್ಮ ವಿಶ್ವಾಸವನ್ನು ಪಡೆದುಕೊಂಡಿರುವ ಬಗ್ಗೆ,

ಸ್ವಾವಲಂಬಿಗಳಾಗಿರುವ ಬಗ್ಗೆ ಮತ್ತು ಸಂಕಷ್ಟದ ಬದುಕನ್ನು ಹಸನು ಮಾಡಿಕೊಂಡಿರುವ ಬಗ್ಗೆ ಈ ಯೋಜನೆಯಡಿ ಪ್ರಯೋಜನ ಪಡೆದಿರುವ ಸಾವಿರಾರು ಸ್ತ್ರೀಯರ ಉದಾಹರಣೆಗಳು ದೊರಕುತ್ತವೆ. ಗ್ರಾಮೀಣ ಮಹಿಳೆಯರಲ್ಲಿ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆಯನ್ನು ತರುವುದು ಸ್ತ್ರೀ-ಶಕ್ತಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯು ಸ್ತ್ರೀಯರಿಗೆ ಅತ್ಯಂತ ಸಹಕಾರಿಯಾಗಿದೆ.

ಈ ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೆ ೨೨೦೦ ಗುಂಪುಗಳನ್ನು ರಚಿಸಲಾಗಿದೆ. ಮತ್ತು ೨೦೦೫ರ ಅಂತ್ಯಕ್ಕೆ ಒಟ್ಟು ೩೧೪೯೭ ಸದಸ್ಯರನ್ನು ನೊಂದಾಯಿಸಿಕೊಳ್ಳಲಾಗಿದೆ. ಈ ಸದಸ್ಯರುಗಳ ಪೈಕಿ ೨೩೧೦ ಮಹಿಳೆಯರು ಪರಿಶಿಷ್ಟ ಜಾತಿಗೂ; ೧೯೭೭ ಮಹಿಳೆಯರು ಪರಿಶಿಷ್ಟ ಪಂಗಡಕ್ಕೂ; ೧೯೧೫ ಮಹಿಳೆಯರು ಅಲ್ಪ ಸಂಖ್ಯಾತರ ವರ್ಗಕ್ಕೂ ಹಾಗೂ ೨೫,೯೫೫ ಮಹಿಳೆಯರು ಇತರೇ ವರ್ಗಗಳಿಗೂ ಸೇರಿದವರಾಗಿರುತ್ತಾರೆ.

ಬ್ಯಾಂಕ್ ಸಾಲ ಹಾಗೂ ಆಂತರಿಕ ಸಾಲದ ಮೂಲಕ ಗುಂಪುಗಳ ಸದಸ್ಯರು ಆದಾಯೋತ್ಪನ್ನ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಡಿಸೆಂಬರ್ ೨೦೦೫ರ ಅಂತ್ಯದ ವೇಳೆಗೆ ೧೨.೭೫ ಕೋಟಿ ರುಪಾಯಿಗಳ ಮೊತ್ತವನ್ನು ೨೨೦೦ ಸ್ತ್ರೀಶಕ್ತಿ ಗುಂಪುಗಳ ಮೂಲಕ ಉಳಿತಾಯ ಮಾಡಲಾಗಿದ್ದು, ೨೯೫೭೨ ಸದಸ್ಯರಿಗೆ ರೂ. ೧೮ ಕೋಟಿ ಆಂತರಿಕ ಸಾಲ ಹಾಗೂ ರೂ.೧೦೭.೬೦ ಲಕ್ಷಗಳನ್ನು ಇಲಾಖಾವತಿಯಿಂದ ಸುತ್ತು ನಿಧಿಯಾಗಿಯೂ, ರೂ. ೨.೪೦ ಲಕ್ಷಗಳನ್ನು ಎಸ್‌ಜಿಎಸ್‌ವೈನಿಂದ ಸುತ್ತು ನಿಧಿಯಾಗಿಯೂ ವಿತರಿಸಲಾಗಿದೆ. ಇವರುಗಳು ಮಾಡುವ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಹೈನುಗಾರಿಕೆ ೯೩೯, ಮೀನುಗಾರಿಕೆ ೨೦೨, ಕೋಳಿ ಸಾಕಾಣಿಕೆ ೯, ಕೃಷಿ ೨೦೨, ತೋಟಗಾರಿಕೆ ೨೭೭, ಸಣ್ಣ ವ್ಯಾಪಾರ ೫೧, ಗುಡಿ ಕೈಗಾರಿಕೆ ೪೦, ಟೇಲರಿಂಗ್ ೧೨ ಹಾಗೂ ಇತರ ಚಟುವಟಿಕೆಗಳಲ್ಲಿ ಒಂದು ಗುಂಪು ಒಳಗೊಂಡಿರುತ್ತದೆ.

ಈ ವ್ಯಾಪಾರಗಳ ಮೂಲಕ ಆರ್ಥಿಕವಾಗಿ ಸ್ತ್ರೀಯರು ಸ್ವಾವಲಂಬಿಗಳಾಗಿರುವುದಲ್ಲದೆ, ಮನೋದಾರ್ಢ್ಯತೆಯನ್ನೂ ಹೊಂದಿ, ಸಮಾಜ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಷ್ಟು ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತುವಷ್ಟು ಆಸಕ್ತಿ ಮತ್ತು ಧೈರ್ಯವನ್ನೂ ಪಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದರಿಂದ ಅವರಿಗೆ ಸಾಮಾಜಿಕ ಮನ್ನಣೆ ದೊರಕಿಸಿಕೊಡುವಲ್ಲಿಯೂ ಈ ಯೋಜನೆಯು ಒಂದು ಸಾಧನವಾಗಿ ನೆರವಾಗಿದೆ ಎನ್ನಬಹುದಾಗಿದೆ.

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ :** ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳುಗಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಸಮತೋಲನ ಆಹಾರ ಒದಗಿಸುವ ಅಗತ್ಯವನ್ನು ಕಂಡುಕೊಂಡು, ಈ ಆಶಯವನ್ನು ಕಾರ್ಯಗತಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಪೌಷ್ಟಿಕ ಆಹಾರಗಳನ್ನು ಇವರಿಗೆ ಒದಗಿಸಲಾಗುತ್ತಿದೆ. ಅದಲ್ಲದೆ ರೋಗ ನಿರೋಧಕ ಚುಚ್ಚುಮದ್ದು ನೀಡಿಕೆ, ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡುವುದು ಮುಂತಾದವುಗಳನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ೦-೬ ವಯೋವರ್ಗದ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪ್ರತಿದಿನ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುತ್ತದೆ.

**ಅಂಗನವಾಡಿ ಕೇಂದ್ರಗಳು :** ಮೇಲೆ ತಿಳಿಸಿದಂತೆ, ಶಾಲಾ ಪೂರ್ವ ಮಕ್ಕಳಿಗೆ ಉತ್ತಮ ಆಹಾರ ಮತ್ತು ಆರೈಕೆ ನೀಡುವುದಲ್ಲದೆ, ಮಕ್ಕಳ ತಾಯಿಯರಿಗೆ ಗರ್ಭಿಣಿಯಾದ ಮೂರು ತಿಂಗಳಿನಿಂದ ಹೆರಿಗೆಯಾಗಿ ಆರು ತಿಂಗಳ ಅವಧಿಯವರೆಗೆ ಅವರ ಆರೈಕೆಗಾಗಿ ಅಕ್ಕಿ, ಮೊಟ್ಟೆ, ಹಣ್ಣು ಮೊದಲಾದ ಪೌಷ್ಟಿಕ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಲಾಗುವುದು. ಅಂಗನವಾಡಿಯ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಅರ್ಹ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಈ ಆಹಾರವನ್ನು ಪೂರೈಕೆ ಮಾಡುತ್ತಾರೆ ಮತ್ತು ಅಗತ್ಯ ಸೇವೆ ಸಲ್ಲಿಸುತ್ತಾರೆ. ಜಿಲ್ಲೆಯ ಮೂರೂ ತಾಲೂಕುಗಳಲ್ಲಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

**ಕೋಷ್ಟಕ ೧೬.೪೦ : ಅಂಗನವಾಡಿ ಕೇಂದ್ರಗಳಲ್ಲಿ ಪ್ರಯೋಜನ ಪಡೆಯುತ್ತಿರುವ ಮಕ್ಕಳ ವಿವರ**

| ತಾಲೂಕಿನ ಹೆಸರು | ಮಂಜೂರಾದ ಅಂಗನವಾಡಿ ಕೇಂದ್ರಗಳು | | ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು | ಫಲಾನುಭವಿಗಳ ಸಂಖ್ಯೆ |
|---|---|---|---|---|
| | ಸಂಖ್ಯೆ | | | |
| ಉಡುಪಿ | ೪೯೫ | ೭೬–೭೭ | ೪೯೫ | ೨೯೪೬೧ |
| ಕಾರ್ಕಳ | ೧೮೯ | ೮೨–೮೩ | ೧೮೯ | ೧೨೧೪೩ |
| ಕುಂದಾಪುರ | ೩೪೩ | ೮೨–೮೩ | ೩೪೩ | ೨೫೧೫೮ |
| | ೧೦೨೭ | – | ೧೦೨೭ | ೬೬೭೬೨ |

***ಮಾಹಿತಿ:*** *ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ

ಪ್ರತೀ ವರ್ಷ ಮಾರ್ಚ್ ಎಂಟರಂದು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇಲಾಖೆಯ ಮೂಲಕ, ಆಚರಿಸುವ ಕಾರ್ಯಕ್ರಮವಿದೆ. ಮಹಿಳೆಯ ಪ್ರಗತಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಶ್ರಮಿಸಿದ ಸ್ವಯಂ ಸೇವಾ ಸಂಸ್ಥೆಗೆ ಮತ್ತು ಸಾಹಿತ್ಯ, ಕಲೆ, ಶಿಕ್ಷಣ, ಮಹಿಳಾಭಿವೃದ್ಧಿ, ಮುಂತಾದ ಕ್ಷೇತ್ರಗಳಲ್ಲಿ ಸತತ ತೊಡಗಿದ ವ್ಯಕ್ತಿಗಳಿಗೆ (ಮಹಿಳೆ) ಈ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿ ಪತ್ರಗಳೊಂದಿಗೆ, ಸ್ವಯಂ ಸೇವಾ ಸಂಸ್ಥೆಗೆ ಕೊಡುವ ಪ್ರಶಸ್ತಿಯು ೨೫,೦೦೦ ರೂ.ಗಳನ್ನೂ; ವೈಯುಕ್ತಿಕ ಪ್ರಶಸ್ತಿಯು ೧೦,೦೦೦ ರೂ.ಗಳನ್ನೂ ಒಳಗೊಂಡಿರುತ್ತದೆ. ಉಡುಪಿ ಜಿಲ್ಲೆಯ ಕಟ್ಪಾಡಿ ಬೆಳಪು ಪ್ರದೇಶದ ಮಮತಾಜ್ ಬೇಗಂ ಎಂಬುವ ಮಹಿಳೆಯು, ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದುದಕ್ಕಾಗಿ, ೨೦೦೫–೦೬ನೇ ಸಾಲಿನ ವೈಯುಕ್ತಿಕ ಪ್ರಶಸ್ತಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಗಳಿಸಿದ್ದಾರೆ.

## ಮಹಿಳಾ ಮಂಡಲಿಗಳಿಗೆ ಆರ್ಥಿಕ ನೆರವು

ಉಡುಪಿ ಜಿಲ್ಲೆಯಲ್ಲಿ ಸುಮಾರು ಇನ್ನೂರು ಮಹಿಳಾ ಮಂಡಲಿಗಳು ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆಯಡಿ, ಗುಡಿ ಕೈಗಾರಿಕೆಗಳಿಗೆ, ಮತ್ತು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುವಾಗುವಂತೆ, ಮಂಡಲಿಗಳು ದೃಢವಾಗಿ ನಿಲ್ಲುವಂತಾಗಲು ಪ್ರತಿ ವರ್ಷ ಪ್ರತಿ ಮಂಡಳಿಗೆ ಒಂದು ಸಾವಿರ ರೂ.ಗಳನ್ನು ಐದು ವರ್ಷಗಳವರೆಗೆ ಅನುದಾನವಾಗಿ ನೀಡಲಾಗುತ್ತಿತ್ತು. ಆ ನಂತರದಲ್ಲಿ ಈ ಅನುದಾನದ ಮೊತ್ತವನ್ನು ರೂ.೫,೦೦೦/–ಗಳಿಗೆ ಹೆಚ್ಚಿಸಲಾಗಿತ್ತು. ಈಗ ಈ ಮಂಡಳಿಗಳಿಗೆ ಇಲಾಖೆಯಿಂದ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲವಾದರೂ, ಇಲಾಖೆಯ ಕೆಲವು ಕಾರ್ಯಕ್ರಮಗಳನ್ನು ಈ ಮಂಡಳಿಗಳು ನಿರ್ವಹಿಸಿದಾಗ, ಅಥವಾ ಈ ಮಂಡಳಿಗಳ ಮೂಲಕ ಇಲಾಖೆಯ ಯೋಜನೆಗಳನ್ನು ನಡೆಸಿದಾಗ, ಸದರಿ ಕಾರ್ಯಕ್ರಮಗಳಿಗೆ ಮಾಡಿದ ಖರ್ಚಿನ ಬಗ್ಗೆ ವಿವರಗಳನ್ನು ಇಲಾಖೆಗೆ ನೀಡಿ, ಹಣವನ್ನು ಪಡೆಯಲು ಅವಕಾಶವಿರುತ್ತದೆ. ೨೦೦೩–೦೪ನೇ ಸಾಲಿನಲ್ಲಿ, ಕುಂದಾಪುರ ತಾಲೂಕಿನಲ್ಲಿ ೯೬, ಕಾರ್ಕಳ ತಾಲೂಕಿನಲ್ಲಿ ೮೨ ಮತ್ತು ಉಡುಪಿ ತಾಲೂಕಿನಲ್ಲಿ ಒಟ್ಟು ೨೯೮ ಮಹಿಳಾ ಮಂಡಲಿಗಳು ಕಾರ್ಯ ನಿರ್ವಹಿಸುತ್ತಿದ್ದವು.

## ಕಾನೂನು ಪದವೀಧರ ಮಹಿಳೆಯರಿಗೆ ತರಬೇತಿ ಮತ್ತು ಶಿಷ್ಯ ವೇತನ

ಕಾನೂನು ಪದವಿ ಪಡೆದ ಮಹಿಳೆಯರು, ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸಲು ಅಗತ್ಯ ಅನುಭವ ಮತ್ತು ಜ್ಞಾನವನ್ನು ಹೊಂದುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರತಿ ಪದವೀಧರೆಗೆ, ಮಾಸಿಕ ಒಂದು ಸಾವಿರ ರೂ.ಗಳಂತೆ ಶಿಷ್ಯವೇತನದ ನೆರವು ನೀಡಿ, ಪರಿಣತ ವಕೀಲರ ಬಳಿ ವಕೀಲಿ

ತರಬೇತಿಯನ್ನು ನಾಲ್ಕು ವರ್ಷಗಳ ಕಾಲ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಕಾನೂನು ಪದವೀಧರೆಯರನ್ನು ತರಬೇತಿಗೆ ಆಯ್ಕೆ ಮಾಡಿದ ಹಾಗೂ ಶಿಷ್ಯವೇತನಕ್ಕಾಗಿ ಖರ್ಚು ಮಾಡಿದ ವಿವರ ಕೆಳಕಂಡಂತಿತ್ತು.

| ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು |
|---|---|---|
| ೨೦೦೩–೦೪ | ೨ | ೦.೪೮ |
| ೨೦೦೪–೦೫ | ೨ | – |
| ೨೦೦೫–೦೬ | ೨ | ೦.೩೫ |

***ಮಾಹಿತಿ:*** *ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ.*

## ಸ್ವೀಕಾರ ಕೇಂದ್ರ

ನಿರಾಶ್ರಿತ ಹೆಣ್ಣು ಮಕ್ಕಳು ಹಾಗೂ ವಿಧವೆಯರು,ಪರಿತ್ಯಕ್ತರು, ಪೋಷಣೆ ಮತ್ತು ಆಶ್ರಯವನ್ನು ಕೋರಿ ಬರುವ ಮಹಿಳೆಯರು ಮತ್ತು ಬಾಲಕಿಯರನ್ನು ಸ್ವೀಕರಿಸಲು ಈ ಇಲಾಖೆಯಿಂದ ರಾಜ್ಯದಲ್ಲಿ ಹನ್ನೊಂದು ಸ್ವೀಕಾರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನ್ಯಾಯಾಲಯದ ಅನೈತಿಕ ವ್ಯವಹಾರಗಳ (ತಡೆಗಟ್ಟುವಿಕೆ) ಅಧಿನಿಯಮ ೧೯೫೬ರ ಮೇರೆಗೆ ಇಂಥ ಅನೈತಿಕ ವ್ಯವಹಾರಗಳ ಕಾರಣವಾಗಿ ತರಬೇತಿಗೆ ಮತ್ತು ಪುನರ್ವಸತಿಗೆಂದು ನ್ಯಾಯಾಲಯದಿಂದ ಕಳುಹಿಸಲ್ಪಟ್ಟ ಹೆಂಗಸರು ಮತ್ತು ಬಾಲಕಿಯರ ಆಶ್ರಯ ತಾಣವೂ ಇದಾಗಿರುತ್ತದೆ. ಸಾಮಾಜಿಕ ಕಾರ್ಯಕರ್ತರು ಅಥವಾ ಪೋಲೀಸರು ಕರೆತಂದು ಬಿಡುವ ಹೆಣ್ಣುಮಕ್ಕಳು ಮತ್ತು ತಾವಾಗಿ ಬಂದು ಸೇರುವ ಸ್ತ್ರೀಯರಿಗೂ ಇಲ್ಲಿ ಊಟ, ವಸತಿ, ಊಟೋಪಚಾರಗಳನ್ನು ಮಾಡಿ ಸರಳ ವೃತ್ತಿಗಳಲ್ಲಿ ತರಬೇತಿಯನ್ನು ಕೊಟ್ಟು ಆಸರೆ ನೀಡಲಾಗುತ್ತದೆ. ತಾತ್ಕಾಲಿಕವಾಗಿ ಮೂರು ತಿಂಗಳು ಇಲ್ಲಿ ಅವರನ್ನು ಉಳಿಸಿಕೊಳ್ಳಲಾಗುತ್ತದೆ. ಹಾಗೂ ಅವರ ಪುನರ್ವಸತಿಗೆ ಅಗತ್ಯವಾದ ತರಬೇತಿ ಮತ್ತು ತಿಳುವಳಿಕೆ ನೀಡಿ, ಅವರ ಮುಂದಿನ ಬದುಕು ಹಸನಾಗಿ ನಡೆಯುವಂತೆ ನೋಡಿಕೊಳ್ಳುವ ಪ್ರಯತ್ನ ಮಾಡಿ, ನಂತರ ಅವರಿಗೆ ಅವರ ಮನೆಗಳಿಗೆ ಸೇರಿಸಲು ಅಥವಾ ಮದುವೆ ಮಾಡಿ ಕಳಿಸಲು, ಇಲ್ಲವೇ ಉದ್ಯೋಗ ಕಲ್ಪಿಸಿಕೊಡಲು ಅಥವಾ ಹತ್ತಿರದ ರಾಜ್ಯ ಮಹಿಳಾ ನಿಲಯಗಳಿಗೆ ಕಳಿಸಲು ವ್ಯವಸ್ಥೆ ಮಾಡಲಾಗುವುದು. ಆದರೆ ಉಡುಪಿ ಜಿಲ್ಲೆಯಲ್ಲಿ ಯಾವುದೇ ಒಂದು ಸ್ವೀಕಾರ ಕೇಂದ್ರವನ್ನು ನಡೆಸಲಾಗುತ್ತಿಲ್ಲ.

## ರಾಜ್ಯ ಮಹಿಳಾ ನಿಲಯಗಳು

ಮೇಲೆ ತಿಳಿಸಿದ ಸ್ವೀಕಾರ ಕೇಂದ್ರಗಳಿಂದ ಕಳಿಸಲ್ಪಟ್ಟ ಹೆಣ್ಣು ಮಕ್ಕಳನ್ನು ಈ ನಿಲಯಗಳಲ್ಲಿ ನೋಡಿಕೊಳ್ಳಲಾಗುವುದು. ರಾಜ್ಯದಲ್ಲಿ ಒಟ್ಟು ಎಂಟು ಮಹಿಳಾ ನಿಲಯಗಳನ್ನು ಈ ಇಲಾಖೆಯಿಂದ ನಿರ್ವಹಿಸಲಾಗುತ್ತಿದ್ದು, ಪಾಲನೆ ಮತ್ತು ರಕ್ಷಣೆಯ ಅಗತ್ಯ ಇರುವ ಮಹಿಳೆಯರನ್ನು ಇಲ್ಲಿ ದಾಖಲು ಮಾಡಲಾಗುತ್ತದೆ. ಉಡುಪಿಯಲ್ಲಿ ಇಂಥ ಒಂದು ಮಹಿಳಾ ನಿಲಯವನ್ನು ನಡೆಸಲಾಗುತ್ತಿದೆ. ಇಲ್ಲಿ ಅವರಿಗೆ ವಿವಿಧ ಉದ್ಯೋಗಗಳಲ್ಲಿ ತರಬೇತಿ ನೀಡಲಾಗುತ್ತದೆ. ಮಹಿಳಾ ನಿಲಯಗಳಲ್ಲಿ ಇಂಥ ತರಬೇತಿ ಪಡೆದು, ದೀರ್ಘಕಾಲ ಉಳಿದವರೂ ಇದ್ದಾರೆ.

## ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು

ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ, ಮೂರು ವರ್ಷದೊಳಗಿನ ವಯಸ್ಸಿನ ಮಕ್ಕಳಿಗೆ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸುವ ಹಾಗೂ ಈ ಕೇಂದ್ರಗಳನ್ನು ನಡೆಸುವ ಅನುಭವಿ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಹುಟ್ಟಿನಿಂದ ಮೂರು ವರ್ಷದ ವರೆಗಿನ ಮಕ್ಕಳ ಪಾಲನೆ, ಅವನ್ನು ನೈಸರ್ಗಿಕ ಆಪತ್ತುಗಳಿಂದ ರಕ್ಷಿಸುವುದು, ಪೂರಕ ಪೌಷ್ಠಿಕ ಆಹಾರ ನೀಡುವುದು, ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವುದು ಮತ್ತು ಹೆಣ್ಣು ಮಕ್ಕಳ ಸಾಕ್ಷರತೆಯನ್ನು ಹೆಚ್ಚಿಸುವುದೂ ಸಹ ಈ ಯೋಜನೆಯ ಆಶಯವಾಗಿರುತ್ತದೆ. ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ೧೮೬೦ರನ್ವಯ ನೋಂದಣಿಯಾಗಿದ್ದು, ಸೌಲಭ್ಯಗಳು, ಸಾಧನೋಪಾಯಗಳು,

ಅನುಭವ ಮತ್ತು ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಲು ಅಗತ್ಯ ಸಿಬ್ಬಂದಿಯನ್ನು ಹೊಂದಿರುವಂತಹ ಸ್ವಯಂ ಸೇವಾ ಸಂಸ್ಥೆಗಳು ಈ ಯೋಜನೆಯಡಿ ಅನುದಾನ ಪಡೆಯಲು ಅರ್ಹವಾಗಿರುತ್ತವೆ.

## ರಾಜ್ಯ ವಲಯದ ಯೋಜನೆಯಡಿ ಗ್ರಾಮೀಣ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನ

ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ, ಕನಿಷ್ಟ ಶೇಕಡ ೮೦ ಹಾಜರಾತಿ ಪಡೆದು ಉತ್ತೀರ್ಣರಾದ ಐದರಿಂದ ಹತ್ತನೇ ತರಗತಿಗಳಲ್ಲಿ ಓದುವ ವಿದ್ಯಾರ್ಥಿನಿಯರಿಗೆ, ಹತ್ತು ತಿಂಗಳ ಅವಧಿಗೆ ಶಿಷ್ಯ ವೇತನವನ್ನು ಕೊಡಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯಾರ್ಥಿನಿಯ ಕುಟುಂಬದ ವಾರ್ಷಿಕ ವರಮಾನ ಹತ್ತು ಸಾವಿರಕ್ಕಿಂತ ಮೀರಿರಬಾರದು ಮತ್ತು ಆ ಬಾಲಕಿಯು ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಹಳ್ಳಿಯ ನಿವಾಸಿಯಾಗಿರಬೇಕಾದುದು ನಿಯಮ. ಈ ಯೋಜನೆಯಡಿ ಪ್ರಯೋಜನ ಪಡೆದ ಹೆಣ್ಣು ಮಕ್ಕಳು ಮತ್ತು ಮಾಡಿದ ಖರ್ಚಿನ ವಿವರ ಕೋಷ್ಟಕ ೧೬.೪೧ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೧ : ಪ್ರಯೋಜನ ಪಡೆದ ಹೆಣ್ಣು ಮಕ್ಕಳ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು |
|---|---|---|
| ೨೦೦೩–೦೪ | ೨೧೦ | ೧.೦೫ |
| ೨೦೦೪–೦೫ | – | – |
| ೨೦೦೫–೦೬ | ೨೦೦ | ೧.೦೦ |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

## ಮಕ್ಕಳ ಕಲ್ಯಾಣ ಸಮಿತಿ

ಮಾನಸಿಕ ಅಸ್ವಸ್ಥತೆ, ಅವಿವಾಹಿತ ತರುಣಿ ತ್ಯಜಿಸಿದ ಮಗು, ಮನೆಗೆಲಸ ಮಾಡಲಾಗದೆ ಹಿಂಸೆ ಅನುಭವಿಸುವ ಮಕ್ಕಳು, ಅಂಗವೈಕಲ್ಯತೆಯಿಂದ ಪರಿತಪಿಸುವ ಮಗು, ಅನಾಥ ಮಕ್ಕಳು – ಹೀಗೆ ನಾನಾ ರೀತಿಯ ಸಮಸ್ಯೆಗಳಲ್ಲಿ ಸಿಲುಕಿದ ಮಕ್ಕಳ ಪೋಷಣೆಗೆ ಹಾಗೂ ರಕ್ಷಣೆಯ ಉದ್ದೇಶದಿಂದ ಒಂದು ಶಾಸನಬದ್ಧ ಸ್ಥಾಪಿತ ವ್ಯವಸ್ಥೆಯನ್ನು ಸರ್ಕಾರವು ಮಾಡಿದೆ. ಈ ಸಂಬಂಧದ ಕಾನೂನನ್ನು ಜಾರಿಗೊಳಿಸಲು ಮಕ್ಕಳ ಕಲ್ಯಾಣ ಸಮಿತಿಗಳನ್ನು (ಸಿಡಬ್ಲೂಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ರಚಿಸಿರುತ್ತದೆ. ಈ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರನ್ನೊಳಗೊಂಡಂತೆ ಐವರು ಸದಸ್ಯರಿದ್ದು, ಇವರು ಪ್ರಥಮ ದರ್ಜೆ ನ್ಯಾಯಾಧೀಶರಂತೆ ಕಾರ್ಯ ನಿರ್ವಹಿಸುತ್ತಾರೆ. ತೊರೆಯಲ್ಪಟ್ಟ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೀಡಾದ ಅಥವಾ ಒಂದು ಸ್ಥಳದಿಂದ ಇನ್ನೊಂದು ಕಡೆಗೆ ದುರುದ್ದೇಶದಿಂದ ವರ್ಗಾಯಿಸಲ್ಪಟ್ಟ ಮಕ್ಕಳು, ಮೊದಲಾದವರು ಪತ್ತೆಯಾದಲ್ಲಿ ಯಾರೇ ಆದರೂ, ಜಿಲ್ಲೆಯ ಈ ಮಕ್ಕಳ ಕಲ್ಯಾಣ ಸಮಿತಿಯ ಎದುರು ಹಾಜರು ಪಡಿಸುವುದು ನ್ಯಾಯಯುತ ಮಾರ್ಗ. ಅಥವಾ ಅಂಥ ಮಗುವೊಂದು ತಾನೇ ಸಮಿತಿಯ ಮುಂದೆ ಹಾಜರಾಗಲೂಬಹುದು. ಈ ಸಮಿತಿಗಳು ಪ್ರತಿ ಜಿಲೆಯಲ್ಲೂ ಇದ್ದು, ರಾಜ್ಯ ಬಾಲ ಮಂದಿರಗಳಲ್ಲಿ ಕಾರ್ಯ ನಿರ್ವಹಿಸುತ್ತವೆ. ಹೀಗೆ ಹಾಜರು ಪಡಿಸಿದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದು ಪೋಷಕರನ್ನು ಹುಡುಕಿಸಿ ಒಪ್ಪಿಸುವುದು, ಪತ್ತೆ ಆಗದಿದ್ದಲ್ಲಿ ಮಗುವನ್ನು ರಕ್ಷಿಸಲು ಬಯಸಿದವರಿಗೆ ದತ್ತು ನೀಡುವುದು, ಅಥವಾ ಫಾಸ್ಟರ್ ಕೇರ್‌ನಲ್ಲಿ ಇಡುವುದು–ಇವೇ ಮುಂತಾದ ಮಾರ್ಗಗಳ ಮೂಲಕ ಮಕ್ಕಳಿಗೆ ಸೂಕ್ತ ನೆರವು ಮತ್ತು ರಕ್ಷಣೆಯನ್ನು ನೀಡಲಾಗುತ್ತದೆ.

## ಬಾಲಕ / ಬಾಲಕಿಯರ ವೀಕ್ಷಣಾಲಯ

ಮೇಲೆ ತಿಳಿಸಿದ ಪ್ರಕಾರ, ನಿರ್ಲಕ್ಷ್ಯಕ್ಕೆ ಒಳಗಾದ ಇಂಥ ಮಕ್ಕಳನ್ನು ಪೋಲೀಸ್ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸೂಚನೆಯ ಮೂಲಕ ವೀಕ್ಷಣಾಲಯಕ್ಕೆ ದಾಖಲು ಮಾಡಿಕೊಳ್ಳಲಾಗುತ್ತದೆ. ಈ ಮಕ್ಕಳು

ಬೆಳೆದ ವಾತಾವರಣ ಅವರ ನಡುವಳಿಕೆಗಳನ್ನು ತಿಳಿಯುವ ಸಲುವಾಗಿ ಪರಿವೀಕ್ಷಣಾಧಿಕಾರಿಗಳು ವಿವರವಾದ ತನಿಖೆಯನ್ನು ನಡೆಸಲು ಮಕ್ಕಳನ್ನು ಮೂರು ತಿಂಗಳ ಕಾಲ ವೀಕ್ಷಣಾಲಯದಲ್ಲಿ ಇಡಲಾಗುವುದು. ಬಾಲಾಪರಾಧಿಗಳನ್ನು ಬಾಲ ನ್ಯಾಯಾಲಯದ ಮುಂದೆ ಮತ್ತು ಇತರ ಮಕ್ಕಳನ್ನು ಬಾಲ ಕಲ್ಯಾಣ ಮಂಡಳಿಯ ಮುಂದೆ ಹಾಜರು ಪಡಿಸಿ ಮಕ್ಕಳ ಮುಂದಿನ ಪುನರ್‌ವಸತಿಯ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ. ಬಾಲ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ ೨೦೦೦ದ ಅಡಿಯಲ್ಲಿ ಇಲಾಖೆಯು ರಾಜ್ಯದಲ್ಲಿ ಒಟ್ಟು ಇಂಥ ಎಂಟು ವೀಕ್ಷಣಾಲಯಗಳನ್ನು ನಡೆಸುತ್ತಿದೆ. ಉಡುಪಿಯಲ್ಲಿ ಇದೇ ಬಾಲನ್ಯಾಯ ಕಾಯಿದೆಯನ್ವಯ ನಾಲ್ಕು ಸಂಸ್ಥೆಗಳನ್ನು ನಡೆಸಲಾಗುತ್ತಿದೆ, ಒಂದು ಬಾಲಕರ ಬಾಲ ಮಂದಿರ, ಒಂದು ವೀಕ್ಷಣಾಲಯ, ಒಂದು ಬಾಲಕಿಯರ ಮಂದಿರ ಮತ್ತು ಒಂದು ಸ್ತ್ರೀ ಸೇವಾ ನಿಕೇತನ, ಇವುಗಳೆಲ್ಲ ಉಡುಪಿಯ ನಿಟ್ಟೂರು ಎಂಬ ಸ್ಥಳದಲ್ಲಿ ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ನಾಲ್ಕೂ ಸಂಸ್ಥೆಗಳಲ್ಲಿ ಮೂರು ವರ್ಷಗಳಲ್ಲಿ ದಾಖಲಿಸಿಕೊಂಡ ಮಕ್ಕಳ ಸಂಖ್ಯೆ ಮತ್ತು ಖರ್ಚು ಮಾಡಲಾದ ವಿವರಗಳನ್ನು ಕೆಳಕಾಣಿಸಿದ ಕೋಷ್ಟಕ ೧೬.೪೨ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೨ : ಜಿಲ್ಲೆಯಲ್ಲಿ ತನಿಖೆಗೆ ಒಳಪಟ್ಟ ಮಕ್ಕಳ ಸಂಖ್ಯೆ ಮತ್ತು ಮಾಡಲಾದ ಖರ್ಚಿನ ವಿವರ**

| ವೀಕ್ಷಣಾಲಯಗಳ ಸಂಖ್ಯೆ | ಇರುವ ಸ್ಥಳ | ವರ್ಷ | ಮಕ್ಕಳ ಸಂಖ್ಯೆ | ಮಾಡಲಾದ ಖರ್ಚು |
|---|---|---|---|---|
| ೧.ಬಾಲಕರ ಬಾಲ ಮಂದಿರ<br>೨.ಬಾಲಕಿಯರ ಮಂದಿರ<br>೩.ವೀಕ್ಷಣಾಲಯ<br>೪.ಸ್ತ್ರೀ ಸೇವಾ ನಿಕೇತನ | ನಿಟ್ಟೂರು,<br>ಉಡುಪಿ. | ೨೦೦೨-೦೩<br>೨೦೦೩-೦೪<br>೨೦೦೪-೦೫ | ೨<br>೨<br>೩ | ೧.೪೮ಲಕ್ಷ ರೂ.ಗಳು<br>೪.೫೦ಲಕ್ಷ ರೂ.ಗಳು<br>೩.೨೦ಲಕ್ಷ ರೂ.ಗಳು |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

## ಬಾಲ ಭವನ

ಮಕ್ಕಳಿಗೆ ಶಾಲೆಯ ವಿದ್ಯಾಭ್ಯಾಸವಲ್ಲದೆ ಇನ್ನಿತರ ಹೊರಗಿನ ಕ್ಷೇತ್ರಗಳಲ್ಲಿ ತೊಡಗಿಸಿ ಸೃಜನಶೀಲರನ್ನಾಗಿಸುವ ಉದ್ದೇಶದಿಂದ, ಬಾಲ ಭವನ ಸೊಸೈಟಿಯು ೧೯೮೬ರಲ್ಲಿ ನೊಂದಾವಣೆಗೊಂಡಿತು. ಮಕ್ಕಳಿಗಾಗಿ ರಂಗಮಂದಿರವನ್ನು ಸ್ಥಾಪಿಸುವುದು, ಉದ್ಯಾನವನವನ್ನು ಅಭಿವೃದ್ಧಿ ಪಡಿಸುವುದು, ಮಕ್ಕಳಿಗೆ ವಿವಿಧ ರೀತಿಯಲ್ಲಿ ಮನೋರಂಜನೆ ಒದಗಿಸುವುದು, ಗ್ರಂಥಾಲಯ, ಅಕ್ಟೋಬರ್ ಹಾಗೂ ಏಪ್ರಿಲ್ ತಿಂಗಳ ರಜಾ ಅವಧಿಯಲ್ಲಿ, ಬೇಸಿಗೆ ಶಿಬಿರಗಳನ್ನು ನಡೆಸುವುದು-ಇವೇ ಮುಂತಾದ ಕಾರ್ಯಕ್ರಮಗಳನ್ನು ಈ ಬಾಲ ಭವನಗಳಲ್ಲಿ ನಡೆಸಲಾಗುವುದು. ಉಡುಪಿಯ ಬ್ರಹ್ಮಗಿರಿಯಲ್ಲಿ, ಒಂದು ಬಾಲಭವನವನ್ನು ಇಲಾಖೆಯ ಮೂಲಕ ನಡೆಸಲಾಗುತ್ತಿದೆ. ಇಲ್ಲಿ ಬೇಸಿಗೆ ಶಿಬಿರ, ಮನರಂಜನೆ ಕಾರ್ಯಕ್ರಮಗಳೇ ಅಲ್ಲದೆ, ಪ್ರತಿ ಶನಿವಾರ, ಹನ್ನೆರಡು ವರ್ಷದೊಳಗಿನ ಮಕ್ಕಳಿಗಾಗಿ ಉಚಿತ ಸಂಗೀತ ತರಗತಿಗಳನ್ನು ನಡೆಸಲಾಗುತ್ತದೆ. ಈ ಭವನದಲ್ಲಿ ಮಂಜೂರಾತಿ ಸಂಖ್ಯೆ ೩೫ ಇದ್ದು ಇದಕ್ಕಿಂತ ಹೆಚ್ಚಿನ ಮಕ್ಕಳೂ ಇದರ ಪ್ರಯೋಜನ ಪಡೆಯುವುದುಂಟು. ಇದರ ಪ್ರಯೋಜನ ಪಡೆದ ಮಕ್ಕಳ ಸಂಖ್ಯೆ ಮತ್ತು ಮಾಡಿದ ಖರ್ಚಿನ ವಿವರಗಳನ್ನು ಕೆಳಕಾಣಿಸಿದ ಕೋಷ್ಟಕ ೧೬.೪೩ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೩ : ಪ್ರಯೋಜನ ಪಡೆದ ಮಕ್ಕಳ ಸಂಖ್ಯೆ ಮತ್ತು ಮಾಡಿದ ಖರ್ಚಿನ ವಿವರ**

| ಬಾಲಭವನ ಇರುವ ಸ್ಥಳ | ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು |
|---|---|---|---|
| ಬ್ರಹ್ಮಗಿರಿ, ಉಡುಪಿ | ೨೦೦೩-೦೪ | ೩೫+೨೦ | ರೂ.೦.೬೨ ಲಕ್ಷ |
| | ೨೦೦೪-೦೫ | ೩೨+೨೦ | ರೂ.೦.೬೨ ಲಕ್ಷ |
| | ೨೦೦೫-೦೬ | ೩೫ | ರೂ.೦.೬೨ ಲಕ್ಷ |

***ಮಾಹಿತಿ:*** *ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

## ನಿರ್ಗತಿಕ ಮಕ್ಕಳಿಗಾಗಿ ಕುಟೀರಗಳು

ನಿರ್ಗತಿಕ ಮಕ್ಕಳಿಗೆ ಪುನರ್ ವಸತಿ ಒದಗಿಸಿ ಆ ಮೂಲಕ ಅವರ ರಕ್ಷಣೆ ಹಾಗೂ ಪಾಲನೆ ಪೋಷಣೆ ಮಾಡಿ ಅವರನ್ನು ಉತ್ತಮ ಪಜೆಗಳನ್ನಾಗಿ ರೂಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ನೊಂದಾಯಿತ ಅನುಭವಿ ಸ್ವಯಂ ಸೇವಾ ಸಂಸ್ಥೆಗಳು ಈ ಕುಟೀರಗಳನ್ನು ನಡೆಸುತ್ತವೆ. ಈ ಸಂಸ್ಥೆಗಳಿಗೆ ಶೇ ೯೦ರಷ್ಟು ಕುಟೀರದ ನಿರ್ವಹಣೆಯ ಖರ್ಚನ್ನೂ ಸೇರಿಸಿ, ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ೪೦೦ ರೂ.ನಂತೆಗಳನ್ನು ಅನುದಾನವಾಗಿ ಪಡೆಯಲು ಅವಕಾಶವಿರುತ್ತದೆ. ಇದರಲ್ಲಿ ಶೇ.೧೦ ರಷ್ಟು ಖರ್ಚನ್ನು ಸ್ವಯಂ ಸಂಸ್ಥೆಗಳು ಭರಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಈ ಯೋಜನೆಯಡಿ ಹದಿನೆಂಟು ನೋಂದಾಯಿತ ಸೇವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವು ಜಿಲ್ಲಾ ಪಂಚಾಯತ್‌ನ ಕಾರ್ಯಕ್ರಮದಡಿ ಬರುತ್ತವೆ. ಈ ಜಿಲ್ಲೆಯಲ್ಲಿ ಇಲಾಖೆಯಿಂದ ನಡೆಸುತ್ತಿರುವ ಇಂಥ ಯಾವುದೇ ಕುಟೀರಗಳಿರುವುದುಲ್ಲ.

## ಕರ್ನಾಟಕ ಮಹಿಳಾ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಕಂಪೆನಿಯ ಕಾಯಿದೆ ೧೯೫೬ರಡಿಯಲ್ಲಿ ೧೯೮೭ರಲ್ಲಿ ಸ್ಥಾಪಿಸಲ್ಪಟ್ಟಿದೆ. ಕೆಳಗೆ ನಮೂದಿಸಿರುವ ಅಂಶಗಳು ಈ ನಿಗಮದ ಪ್ರಮುಖ ಉದ್ದೇಶಗಳಾಗಿವೆ.

೧) ಮಹಿಳಾ ಉದ್ಯಮಾಕಾಂಕ್ಷಿಗಳನ್ನು ಗುರುತಿಸುವುದು, ೨)ಮಹಿಳೆಯರಿಗಾಗಿ ನಿಗದಿತ ಸಂಯೋಜನಾ ವರದಿಗಳನ್ನು ತಯಾರಿಸುವುದು, ೩) ತಾಂತ್ರಿಕ ಸಲಹಾ ಸೇವೆಯನ್ನು ಒದಗಿಸುವುದು, ಬ್ಯಾಂಕ್ ಮತ್ತು ಇತರೆ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಒದಗಿಸುವಲ್ಲಿ ಅನುಕೂಲ ಕಲ್ಪಿಸುವುದು, ೪) ಮಹಿಳೆಯರು ತಯಾರಿಸುವ ಸರಕುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವುದು, ೫) ಮಹಿಳಾ ಸಂಘಗಳನ್ನು, ಸಮಾಜಗಳನ್ನು ಮಂಡಳಿಗಳನ್ನು ಮತ್ತು ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವುದು ಹಾಗೂ, ೬) ಮಹಿಳೆಯರಿಗೆ ಅವಶ್ಯಕ ಕೌಶಲ್ಯ ತರಬೇತಿಯನ್ನು ವ್ಯವಸ್ಥೆಗೊಳಿಸುವುದು. ಉಡುಪಿ ಜಿಲ್ಲೆಯಲ್ಲಿ, ಬಡತನದ ಅಂಚಿನಲ್ಲಿರುವ ಮಹಿಳೆಯರ ಅಭಿವೃದ್ಧಿಗಾಗಿ ಮತ್ತು ಅವರ ಸಾಮರ್ಥ್ಯವನ್ನು ಹೆಚ್ಚಿಸಿ ಅವರನ್ನು ಸ್ವಾವಲಂಬಿಗಳಾಗಿಸಲು ಮೇಲೆ ತಿಳಿಸಿದ ನಿಗಮವು, ಈ ಕೆಳಗಿನ ಕಾರ್ಯಕ್ರಮಗಳನ್ನು ನಿರ್ವಹಿಸಿರುತ್ತದೆ.

## ಮಾರುಕಟ್ಟೆ ಸಹಾಯ ಯೋಜನೆ

ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳಿಗೆ ಸಮರ್ಥ ಗ್ರಾಹಕರನ್ನು ಒದಗಿಸಲು, ನಿಗಮವು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುತ್ತದೆ. ಜಿಲ್ಲಾ ಕೇಂದ್ರಗಳಲ್ಲಿ ಮಾತ್ರವಲ್ಲದೆ, ಮಾರ್ಚ್ ತಿಂಗಳಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ, ವರ್ಷಕ್ಕೆ ಎರಡು ಸಲ ರಾಜ್ಯ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸಿ, ಮಹಿಳೆಯರಿಗೆ ಮಾರುಕಟ್ಟೆಯನ್ನು ಯೋಜಿಸಿ ಕೊಡುತ್ತದೆ. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ೫೫ ಮಹಿಳಾ ಉದ್ದಿಮೆದಾರರು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ. ಉದ್ಯೋಗಿನಿ ಮಾರುಕಟ್ಟೆ ಯೋಜನೆಯ ನೆರವು ಪಡೆದ ಮಹಿಳೆಯರ ಮತ್ತು ಖರ್ಚು ಮಾಡಿದ ವಿವರಗಳನ್ನು ಕೆಳಗಿನ ಕೋಷ್ಟಕ ೧೬.೪೪ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೪ : ಮಾರುಕಟ್ಟೆ ಯೋಜನೆ ನೆರವು ಪಡೆದ ಮಹಿಳೆಯರ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು |
|---|---|---|
| ೨೦೦೩-೦೪ | ೨೫ | ರೂ. ೦.೨೫ ಲಕ್ಷ |
| ೨೦೦೪-೦೫ | – | – |
| ೨೦೦೫-೦೬ | ೩೦ | ರೂ. ೦.೩೦ ಲಕ್ಷ |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

## ಮನೆ ಬೆಳಕು ಮತ್ತು ಉದ್ಯೋಗಿನಿ ಯೋಜನೆ

ಯಾವುದೇ ವ್ಯಕ್ತಿಯ ಸ್ವಾವಲಂಬನೆಗೆ ಮತ್ತು ಆತ್ಮವಿಶ್ವಾಸಕ್ಕೆ ಅರ್ಥಿಕ ಉನ್ನತಿಯೇ ಮೊದಲ ಮೆಟ್ಟಿಲು. ಮಹಿಳೆಯರು ಅರ್ಥಿಕವಾಗಿ ಅಭಿವೃದ್ಧಿ ಹೊಂದುವುದಕ್ಕೆ ಒಂದು ಮಾರ್ಗವಾಗಿ ಅವರನ್ನು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಲು ಹಾಗೂ ವ್ಯಾಪಾರ ಉದ್ದಿಮೆಗಳನ್ನು ಸ್ಥಾಪಿಸಲು, ಈ ಯೋಜನೆಯಲ್ಲಿ ಅವರಿಗೆ ಸಾಲ ಮತ್ತು ಸಹಾಯ ಧನ ನೀಡಲು ಅವಕಾಶವಿದೆ. ಬ್ಯಾಂಕುಗಳ ಮೂಲಕ ರೂ.೨೫,೦೦೦ದ ವರೆಗೆ ಸಾಲ ಸೌಲಭ್ಯವನ್ನು ಕೊಡಿಸುವ ವ್ಯವಸ್ಥೆ ಮಾಡಿ, ನಿಗಮವು ಈ ಸಾಲಕ್ಕೆ ಶೇ. ೨೫ ಅಥವಾ ಗರಿಷ್ಠ ರೂ. ೫೦೦೦ ಗಳ ಸಬ್ಸಿಡಿಯನ್ನು ನೀಡುವುದು. ಕಳೆದ ಮೂರು ವರ್ಷಗಳಲ್ಲಿ ಮೇಲಿನ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯ ವಿವರ ಕೋಷ್ಟಕ ೧೬.೪೫ರಲ್ಲಿದೆ.

**ಕೋಷ್ಟಕ ೧೬.೪೫ : ಯೋಜನೆಯಡಿ ಸಾಧಿಸಿದ ಪ್ರಗತಿಯ ವಿವರ**

| ಕ್ರ. ಸಂ. | ಯೋಜನೆಯ ಹೆಸರು | ವರ್ಷ | ಸಾಧನೆ | |
|---|---|---|---|---|
| | | | ಆರ್ಥಿಕ | ಭೌತಿಕ |
| ೧ | ಉದ್ಯೋಗಿನಿ | ೨೦೦೩-೦೪ | ೧,೭೦,೪೦೦ | ೫೩ |
| ೨ | | ೨೦೦೪-೦೫ | ೩,೦೬,೦೦೦ | ೪೬ |
| ೩ | | ೨೦೦೫-೦೬ | ೧,೭೯,೦೦೦ | ೨೧ |

*ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

## ಸಾಂತ್ವನ ಮಹಿಳಾ ಸಹಾಯವಾಣಿ

ಸರ್ಕಾರವು ಈ ಯೋಜನೆಗೆ ೨೦೦೦-೦೧ನೇ ಸಾಲಿನಲ್ಲಿ ಅನುಮೋದನೆ ನೀಡಿದೆ. ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ ಮತ್ತು ಶೋಷಣೆ, ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ವೈವಾಹಿಕ ಜೀವನದಲ್ಲಿನ ತೀವ್ರತರ ಸಮಸ್ಯೆಗಳು ಮತ್ತು ಇಂಥ ಇನ್ನಿತರ ಕಷ್ಟಗಳಿಂದ ಯಾತನೆ ಪಡುತ್ತಿರುವ ಮಹಿಳೆಯರಿಗೆ ಕಾನೂನು ನೆರವು, ಆರ್ಥಿಕ ಪರಿಹಾರ, ತಾತ್ಕಾಲಿಕ ಆಸರೆ ಹಾಗೂ ತರಬೇತಿ ನೀಡಿ, ಸ್ಥಿರವಾಗಿ ನಿಲ್ಲುವಂತೆ ಮಾಡುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯನ್ನು ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮಹಿಳಾ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಕೇಂದ್ರಗಳಿಗೆ ಶುಲ್ಕ ರಹಿತ ದೂರವಾಣಿ ಸಂಖ್ಯೆಯನ್ನು ಅಳವಡಿಸಲಾಗಿದೆ. ಸಮಸ್ಯೆಯ ಸ್ವರೂಪ ಮತ್ತು ಗಂಭೀರತೆಯ ಆಧಾರದ ಮೇಲೆ ಪ್ರಕರಣಗಳನ್ನು ನೊಂದಾಯಿಸಿಕೊಂಡು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ಸಮಿತಿಯ ಮುಂದಿಟ್ಟು ಅಗತ್ಯ ಸಹಾಯವನ್ನು ಮತ್ತು ಇತರ ಪುನರ್ವಸತಿ ಸೌಲಭ್ಯಗಳನ್ನು ಅರ್ಹತೆಗನುಗುಣವಾಗಿ ಪ್ರತಿ ಪ್ರಕರಣದಲ್ಲಿ ನೀಡಲಾಗುತ್ತಿದೆ. ದೌರ್ಜನ್ಯಕ್ಕೊಳಗಾದ ಮಹಿಳೆಗೆ ಅವಶ್ಯಕತೆ ಇದ್ದಲ್ಲಿ ರೂ.೨೦೦೦ ದಿಂದ ಗರಿಷ್ಠ ರೂ.೧೦,೦೦೦ದ ವರೆಗೆ, ತಕ್ಷಣದ ಅರ್ಥಿಕ ನೆರವನ್ನೂ ನೀಡಲಾಗುವುದು. ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ವಿವರಗಳನ್ನು ಕೋಷ್ಟಕ ೧೬.೪೬ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೬ : ದಾಖಲಾದ ಪ್ರಕರಣಗಳ ವಿವರ**

| ಕ್ರಮ ಸಂಖ್ಯೆ | ವರ್ಷ | ದಾಖಲಾದ ಪ್ರಕರಣಗಳು |
|---|---|---|
| ೧ | ೨೦೦೧-೦೨ | - |
| ೨ | ೨೦೦೨-೦೩ | ೧೭ |
| ೩ | ೨೦೦೩-೦೪ | ೪೬ |
| ೪ | ೨೦೦೪-೦೫ | ೨೮ |
| ೫ | ೨೦೦೫-೦೬ | ೪೩ |

*ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

## ಮಹಿಳಾ ತರಬೇತಿ ಯೋಜನೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ಅನುಷ್ಠಾನಗೊಳಿಸುತ್ತಿದ್ದ ಸ್ವಶಕ್ತಿ ಯೋಜನೆಯನ್ನು ಮಹಿಳಾ ತರಬೇತಿ ಯೋಜನೆ ಎಂದು ಹೆಸರಿಸಿ ಈ ಯೋಜನೆಯನ್ನು ಮಹಿಳಾ ಅಭಿವೃದ್ಧಿ ನಿಗಮಕ್ಕೆ ಮಹಿಳೆಯರು ಆರ್ಥಿಕ ಸಬಲೀಕರಣ ಹೊಂದಲು, ವಿವಿಧ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿಪರ ತರಬೇತಿಗಳನ್ನು ಉಚಿತವಾಗಿ ನೀಡಿ ಅವರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿ ಸ್ವಾವಲಂಬಿಗಳನ್ನಾಗಿಸುವ ಉದ್ದೇಶವುಳ್ಳ ಯೋಜನೆ ಇದು. ಬ್ಯೂಟಿ ಪಾರ್ಲರ್, ಹೊಲಿಗೆ, ಎಂಬ್ರಾಯಿಡರಿ, ಸಿದ್ದ ಉಡುಪು ತಯಾರಿಕೆ, ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮತ್ತು ನಿರ್ವಹಣೆ, ಕಂಪ್ಯೂಟರ್ ಹಾರ್ಡ್‌ವೇರ್, ಗಾರೆ ಕೆಲಸದ ತರಬೇತಿ, ನರ್ಸಿಂಗ್ ಮತ್ತು ವಾರ್ಡ್ ಅಸಿಸ್ಟೆನ್ಸ್, ಲಘು ಮೋಟಾರ್ ವಾಹನ ಚಾಲನಾ ತರಬೇತಿ, ಬೇಕರಿ ತಿನಿಸುಗಳ ತಯಾರಿಕಾ ತರಬೇತಿ, ಇತ್ಯಾದಿ ಈ ಯೋಜನೆಯಲ್ಲಿ ನೀಡುವ ತರಬೇತಿಗಳಾಗಿವೆ. ಜಿಲ್ಲೆಯಲ್ಲಿ ೨೦೦೩–೦೫ರ ಸಾಲಿನಲ್ಲಿ ಒಟ್ಟು ನೂರು ಮಹಿಳೆಯರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗಿದೆ.

**ಕೋಷ್ಟಕ ೧೬.೪೭ : ಮಹಿಳಾ ತರಬೇತಿ ಯೋಜನೆಯಡಿ ತರಬೇತಿ ಪಡೆದ ಮಹಿಳೆಯರ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಖರ್ಚು |
|---|---|---|
| ೨೦೦೩–೦೪ | ೬೫ | ರೂ.೧,೭೩,೫೪೬/– |
| ೨೦೦೪–೦೫ | ೩೫ | ರೂ.೧,೩೭,೮೬೭/– |

## ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ

ಮಹಿಳಾಭಿವೃದ್ಧಿಗೆ ಪೂರಕವಾಗುವ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಲು ಸಹಾಯ ಮಾಡುವುದು ಮತ್ತು ಗ್ರಂಥಾಲಯ ಸ್ಥಾಪಿಸುವುದು, ಮಹಿಳಾಭಿವೃದ್ಧಿ ನಿಗಮದ ಯೋಜನೆಗಳ ಮೌಲ್ಯ ಮಾಪನ ಮಾಡುವುದು ಮತ್ತು ಮಹಿಳೆಯರಿಗೆ ಸಲಹಾ ಕೇಂದ್ರವನ್ನು ಸ್ಥಾಪಿಸುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯು ಉಡುಪಿ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ.

## ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ

ಸ್ವಾತಂತ್ರ್ಯ ಪೂರ್ವದಲ್ಲಿ ಅಂಗವಿಕಲರ ಕಲ್ಯಾಣದ ಬಗ್ಗೆ ಸರ್ಕಾರವು ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ. ಅಂಗವಿಕಲರಿಗೆ ಸಂಬಂಧಿಸಿದ ಕಾರ್ಯಗಳನ್ನು ಮೊದಲು ಮಹಿಳಾ ಮತ್ತು ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿತ್ತು. ನಂತರ ರಾಜ್ಯ ಸರ್ಕಾರ ೧–೮–೮೮ ರಂದು ಅಂಗವಿಕಲರ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ತೆರೆಯಿತು. ಅಂಗವಿಕಲರನ್ನು ಕ್ರಿಯಾಶೀಲ ಪ್ರಜೆಗಳನ್ನಾಗಿಸುವ ದಿಕ್ಕಿನಲ್ಲಿ, ಸರ್ಕಾರವು ಅಂಗವಿಕಲರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದು ಅವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಕಾರ್ಯಗತಗೊಳಿಸುತ್ತಿದೆ. ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಕೇಂದ್ರ ಕಛೇರಿಯಲ್ಲಿ ಅವರಿಗೆ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಪತ್ರಾಂಕಿತ ಅಧಿಕಾರಿಗಳು ಮತ್ತು ಇತರರು ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ.

ದೇಹದ ಯಾವುದಾದರೂ ಒಂದು ಅಥವಾ ಹೆಚ್ಚು ಅಂಗಾಂಗಗಳು ಊನವಾಗಿದ್ದು, ಅದರಿಂದ ಅವರ ಶಕ್ತಿ, ಸಾಮರ್ಥ್ಯಗಳು ಕ್ಷೀಣಗೊಂಡಿದ್ದರೆ, ಅಥವಾ ಯಾವುದೇ ವ್ಯಕ್ತಿ ತನ್ನ ದೈನಂದಿನ ಕೆಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ ಅಂತಹ ವ್ಯಕ್ತಿಯನ್ನು ಅಂಗವಿಕಲನೆಂದು ಪರಿಗಣಿಸಲಾಗುತ್ತದೆ. ಅಂಗವಿಕಲತೆಯಲ್ಲಿ ದೈಹಿಕ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣ ದೋಷದಿಂದ ಕೂಡಿರುವವರು,

ಬುದ್ಧಿಮಾಂದ್ಯರು, ಕುಷ್ಟರೋಗ ನಿವಾರಿತ ಅಂಗವಿಕಲರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಕಲತೆಯುಳ್ಳವರು ಎಂದು ವರ್ಗೀಕರಣ ಮಾಡಲಾಗಿದೆ.

ಅಂಗವಿಕಲರು ಎಲ್ಲರಂತೆ ಬದುಕಲು ಬೇಕಾದದ್ದು ಶಿಕ್ಷಣ ಮತ್ತು ಉದ್ಯೋಗ. ಅವರು ಆರಿಸಿಕೊಳ್ಳುವ ವೃತ್ತಿಗೆ ಬೇಕಾದ ತರಬೇತಿ ಅಷ್ಟೇ ಆದರೆ ಸಾಲದು ಅವರು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಟ್ಟು, ಸಾಮಾಜಿಕ ಭದ್ರತೆಯ ಬಗ್ಗೆ ಆಶ್ವಾಸನೆ ನೀಡಬೇಕಾಗುತ್ತದೆ. ಹೀಗಾದಲ್ಲಿ ಅವರು ದೇಶದ ಕ್ರಿಯಾಶೀಲ ಪ್ರಜೆಗಳಾಗುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ಸರ್ಕಾರವು ಮನಗಂಡು ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ.

## ಅ) ಶೈಕ್ಷಣಿಕ ಯೋಜನೆಗಳು

**ಅಂಗವಿಕಲರ ವಿದ್ಯಾರ್ಥಿ ವೇತನ** : ಒಂದನೇ ತರಗತಿಯಿಂದ ವಿಶ್ವವಿದ್ಯಾಲಯ ಮಟ್ಟದವರೆಗೆ ಓದುತ್ತಿರುವ ಅರ್ಹ ಅಂಗವಿಕಲರಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮವಿದೆ. ಒಂದರಿಂದ ಐದನೇ ತರಗತಿಯಲ್ಲಿ ಓದುತ್ತಿರುವ ಅಂಗವಿಕಲರಿಗೆ ಮಾಹೆಯಾನ ರೂ.೨೫, ಐದರಿಂದ ಒಂಬತ್ತನೇ ತರಗತಿಯವರೆಗೆ ಓದುತ್ತಿರುವ ಅಂಗವಿಕಲರಿಗೆ ಮಾಹೆಯಾನ ರೂ.೩೫, ಒಂಬತ್ತರಿಂದ ಪಿ.ಯು.ಸಿ. ವರೆಗೆ ಓದುತ್ತಿರುವ ಅಂಗವಿಕಲರಿಗೆ ರೂ.೯೫/- ದ್ವಿತೀಯ ಪದವಿಯ ನಂತರದ ಅಂಗವಿಕಲ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೧೨೫/- ಸ್ನಾತಕೋತ್ತರ ಪದವಿಯವರಿಗೆ ಅಥವಾ ಡಿಪ್ಲೊಮೋ ವಿದ್ಯಾರ್ಥಿಗಳಿಗೆ ಹಾಗೂ ತಾಂತ್ರಿಕ ಪದವಿ ಅಂಗವಿಕಲ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. ೧೭೫/-ರಂತೆ ವಿದ್ಯಾರ್ಥಿ ವೇತನ ಕೊಡಲು ಅವಕಾಶವಿದೆ. ವಿದ್ಯಾರ್ಥಿ ವೇತನದ ಜೊತೆಗೆ ಅಂಥ ವಿದ್ಯಾರ್ಥಿಗಳಿಗೆ ಮತ್ತು ದೈಹಿಕ ಅಂಗವಿಕಲರಿಗೆ ಸಾರಿಗೆ ಭತ್ಯೆವನ್ನು ನೀಡಲಾಗುವುದು. ಜಿಲ್ಲೆಯಲ್ಲಿ ೨೦೦೩-೦೬ರ ಸಾಲುಗಳಲ್ಲಿ ನೀಡಲಾದ ವಿದ್ಯಾರ್ಥಿವೇತನದ ವಿವರಗಳನ್ನು ಮುಂದಿನ ಕೋಷ್ಟಕ ೧೬.೪೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೮ : ಅಂಗವಿಕಲ ವಿದ್ಯಾರ್ಥಿವೇತನದ ವಿವರ**

| ವರ್ಷ | ಫಲಾನುಭವಿಗಳು | ಖರ್ಚಾದ ಹಣ(ಲಕ್ಷ ರೂ.ಗಳಲ್ಲಿ) |
|---|---|---|
| ೨೦೦೩-೦೪ | ೧೦೫ | ರೂ.೯೮,೦೦೦/- |
| ೨೦೦೪-೦೫ | ೭೭ | ರೂ.೭೬,೦೦೦/- |
| ೨೦೦೫-೦೬ | ೮೭ | ರೂ.೧,೦೦,೦೦೦/- |
| ಒಟ್ಟು | ೨೬೯ | ರೂ.೨,೭೪,೦೦೦/- |

*ಮಾಹಿತಿ : ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

**ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ :** ಶೇಕಡ ೬೦ ಕ್ಕಿಂತ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲರಿಗೆ ಪ್ರೋತ್ಸಾಹ ನೀಡಲು 'ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ,' ಎಂಬ ಈ ವಿಶೇಷ ಯೋಜನೆಯನ್ನು ೨೦೦೧-೦೨ನೇ ಸಾಲಿನಿಂದ ಬಿ.ಎಡ್., ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ೨೦೦೩-೦೪ನೇ ಸಾಲಿನಿಂದ ಈ ಯೋಜನೆಯಡಿ ಪ್ರಯೋಜನ ಪಡೆದ ವಿದ್ಯಾಥಿಗಳ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

## ಆ) ಉದ್ಯೋಗ ಮತ್ತು ತರಬೇತಿ

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ)ನಿಯಮಗಳು, ೧೯೭೭ರ ನಿಯಮ ೯(೧ಎ) ಅನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳ ನೇರ ನೇಮಕಾತಿಯಲ್ಲಿ,

**ಕೋಷ್ಟಕ ೧೬.೪೯ : ಪ್ರೋತ್ಸಾಹ ಬಹುಮಾನ ಯೋಜನೆ ವಿವರ**

| ವರ್ಷ | ಫಲಾನುಭವಿಗಳು | ಖರ್ಚಾದ ಮೊತ್ತ | ಅರ್ಹತೆ |
|---|---|---|---|
| ೨೦೦೩-೦೪ | ೦೭ | ರೂ.೪೧೦೦/- | ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯಲ್ಲಿ ೬೦% ಗಿಂತ ಹೆಚ್ಚಿನ ಅಂಕ ಗಳಿಸಿದವರಿಗೆ |
| ೨೦೦೪-೦೫ | ೦೯ | ರೂ.೪೯೦೦/- | -"- |
| ೨೦೦೫-೦೬ | ೦೯ | ರೂ.೫೦೦೦/- | -"- |

*ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

ಶೇಕಡ ಐದು ಹುದ್ದೆಗಳನ್ನು ಅಂಗ ವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. (ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ, ೧೧೫ ಸನೆನಿ ೨೦೦೫ ದಿ. ೧೯.೧೧.೨೦೦೫)

**ಅಂಗವಿಕಲರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯ (ಆಧಾರ) ಯೋಜನೆ** : ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಯೋಜನೆಯನ್ನು ಇಲಾಖೆಯಿಂದ ಕಾರ್ಯರೂಪಕ್ಕೆ ತರಲಾಗಿದೆ. ಉಚಿತ ಪೆಟ್ಟಿಗೆ/ ಗೂಡಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಲು ಈ ಯೋಜನೆಯಡಿ ಧನಸಹಾಯ ನೀಡಲಾಗುವುದು. ವ್ಯಾಪಾರ ಮಾಡಲು ಬಂಡವಾಳ ರೂಪದಲ್ಲಿ ರೂ.೬೦೦೦ ಗಳ ಬಡ್ಡಿರಹಿತ ಸಾಲವನ್ನು ಹಾಗೂ ಉಚಿತ ಪೆಟ್ಟಿಗೆ ಅಂಗಡಿ ನೀಡಲು ಸಹ ಅವಕಾಶವಿದೆ. ಜಿಲ್ಲೆಯಲ್ಲಿ ೨೦೦೩-೨೦೦೪ರಿಂದ ೨೦೦೫-೦೬ರ ವರೆಗಿನ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ನೀಡಲಾದ ನೆರವು, ಮಾಡಿದ ಖರ್ಚು ಮತ್ತು ಫಲಾನುಭವಿಗಳ ವಿವರವನ್ನು ಕೋಷ್ಟಕ ೧೬.೫೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೦ : ಅಂಗವಿಕಲರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯ ಯೋಜನಾ ವಿವರ**

| ವರ್ಷ | ಫಲಾನುಭವಿಗಳು | ಖರ್ಚಾದ ಹಣ(ಲಕ್ಷರೂ.ಗಳಲ್ಲಿ) | ನೀಡಿದ ಉದ್ದೇಶ |
|---|---|---|---|
| ೨೦೦೩-೦೪ | ೧೨ | ೧.೨೦ | ಸಣ್ಣ ವ್ಯಾಪಾರಕ್ಕಾಗಿ |
| ೨೦೦೪-೦೫ | ೦೩ | ೦.೩೬ | ಸಣ್ಣ ವ್ಯಾಪಾರಕ್ಕಾಗಿ |
| ೨೦೦೫-೦೬ | ೦೭ | ೦.೮೪ | ಸಣ್ಣ ವ್ಯಾಪಾರಕ್ಕಾಗಿ |
| ಒಟ್ಟು | ೨೨ | ೨.೪೦ | |

## ಇ) ಪುನರ್ವಸತಿ ಯೋಜನೆಗಳು:

**ಅಂಗವಿಕಲಗೆ ಸಾಧನ ಸಲಕರಣೆಗಳ ಪೂರೈಕೆ :** ಕುಟುಂಬದ ವಾರ್ಷಿಕ ಆದಾಯವು ರೂ.೧೧,೫೦೦/- ಗಳನ್ನು ಮೀರದ, ಗ್ರಾಮೀಣ ಪ್ರದೇಶದ ಅಂಗವಿಕಲರಿಗೆ ಮತ್ತು ಕುಟುಂಬದ ವಾರ್ಷಿಕ ಆದಾಯವು ರೂ.೨೪,೦೦೦ಗಳನ್ನು ಮೀರದ, ನಗರ ಪ್ರದೇಶದ ಅಂಗವಿಕಲರಿಗೆ ಅವರ ನ್ಯೂನತೆಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ. ತ್ರಿಚಕ್ರ ವಾಹನಗಳು, ಕೃತಕ ಅವಯವಗಳು, ಶ್ರವಣ ಸಾಧನ, ಗಾಲಿ ಕುರ್ಚಿ ಮುಂತಾದ ಸಲಕರಣೆ ಸವಲತ್ತುಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ. ಜಿಲ್ಲೆಯಲ್ಲಿ ೨೦೦೩ರಿಂದ ೨೦೦೪ನೇ ಸಾಲಿನ ವರೆಗೆ ಜಿಲ್ಲೆಯ ಅಂಗವಿಕಲರಿಗೆ ಸಾಧನೆ ಸಲಕರಣೆಗಳನ್ನು ಸರ್ಕಾರದಿಂದ ಹಣ ಮಂಜೂರಾತಿ ಪಡದು ಒದಗಿಸಿಕೊಡಲು ಪ್ರಯತ್ನಿಸಲಾಗಿದ್ದು, ಸರ್ಕಾರದ ಹಣ ದೊರಕದೇ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಿಂದ ಪ್ರಾಯೋಜನ ಪಡೆದು, ಅಗತ್ಯ ಸಲಕರಣೆಗಳನ್ನು ಅಂಗವಿಕಲರಿಗೆ ಒದಗಿಸಲಾಗಿದೆ. ಸರ್ಕಾರದಿಂದ ಈ ಬಾಬ್ತಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗದ ಕಾರಣ ಈ ಹಣವನ್ನು ಈ ಜಿಲ್ಲೆಯ ರೆಡ್ ಕ್ರಾಸ್ ಸಂಸ್ಥೆಯು ಹಣದ ನೆರವು ನೀಡಿ ಪ್ರಾಯೋಜಿಸಿದೆ.

೨೦೦೩–೦೬ರ ಸಾಲುಗಳಲ್ಲಿ ವಿತರಿಸಲಾದ ಸಾಧನೋಪಕರಣಗಳು, ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರಗಳನ್ನು ಇಲ್ಲಿಯ ಕೋಷ್ಟಕ ೧೬.೫೧ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ ೧೬.೫೧ : ಸಾಧನೋಪಕರಣ ಫಲಾನುಭವಿಗಳ ವಿವರ**

(ಲಕ್ಷ ರೂ.ಗಳಲ್ಲಿ)

| ವರ್ಷ | ಫಲಾನುಭವಿಗಳು | ಖರ್ಚಾದ ಹಣ | ವಿತರಿಸಲಾದ ಸಾಧನ | ಪ್ರಾಯೋಜಕರು |
|---|---|---|---|---|
| ೨೦೦೩–೦೪ | ೦೩ | ೦.೧೫ | ೦೩ ತ್ರಿಚಕ್ರ ವಾಹನ | ಭಾರತೀಯ ರೆಡ್ ಕ್ರಾಸ್ ಸೊಸೈಟಿ |
| ೨೦೦೪–೦೫ | ೦೭ | ೦.೧೦ | ೦೪ ಶ್ರವಣ ಸಾಧನ | ಭಾರತೀಯ ರೆಡ್ ಕ್ರಾಸ್ ಸೊಸೈಟಿ |
| ೨೦೦೫–೦೬ | ૩೪ | ೦.೧೮ | ತ್ರಿಚಕ್ರ ವಾಹನ ಗಾಲಿ ಕುರ್ಚಿ ಮತ್ತು ಶ್ರವಣ ಸಾಧನ | ಭಾರತೀಯ ರೆಡ್ ಕ್ರಾಸ್ ಸೊಸೈಟಿ |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

**ಅಂಗವಿಕಲತೆಯ ಚಿಕಿತ್ಸೆಗೆ ಪರಿಹಾರ ನಿಧಿ ಯೋಜನೆ** : ನಿಯಮಾನುಸಾರ ಅರ್ಹ ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಗರಿಷ್ಠ ಮೊತ್ತ ರೂ.೧೫,೦೦೦/–ಗಳ ಆರ್ಥಿಕ ನೆರವನ್ನು ನೀಡಲಾಗುತ್ತದೆ. ಉಡುಪಿ ಜಿಲ್ಲೆಯಲ್ಲಿ ಹಿಂದಿನ ಎರಡು ವರ್ಷಗಳಲ್ಲಿ ಮೂರು ಜನಕ್ಕೆ ಈ ನೆರವನ್ನು ನೀಡಲಾಗಿದೆ. ಈ ಕುರಿತಾದ ವಿವರಗಳನ್ನು ಕೆಳಗಿನ ಕೋಷ್ಟಕ ೧೬.೫೨ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೫೨ : ಅಂಗವಿಕಲತೆಯ ಚಿಕಿತ್ಸೆಗೆ ಪರಿಹಾರ ನಿಧಿ ಯೋಜನಾ ವಿವರ**

| ವರ್ಷ | ಫಲಾನುಭವಿಗಳು | ಖರ್ಚಾದ ಹಣ(ಲಕ್ಷ ರೂ.ಗಳಲ್ಲಿ) | ನೀಡಿದ ಉದ್ದೇಶ |
|---|---|---|---|
| ೨೦೦೪–೦೫ | ೦೧ | ರೂ.೧೦,೦೦೦/– | ಶಸ್ತ್ರ ಚಿಕಿತ್ಸೆಗೆ |
| ೨೦೦೫–೦೬ | ೦೨ | ರೂ.೧೦,೧೭೦/– | ಶಸ್ತ್ರ ಚಿಕಿತ್ಸೆಗೆ |
| ಒಟ್ಟು | ೦೩ | ರೂ.೨೦,೧೭೦/– | |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

### ಈ) **ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು**

ಈ ಯೋಜನೆಯ ಅಡಿಯಲ್ಲಿ ಭಿತ್ತಿ ಚಿತ್ರ, ನಿಯತ ಕಾಲಿಕೆಗಳನ್ನು ಮುದ್ರಿಸಿ ರಾಜ್ಯಾದ್ಯಂತ ಪ್ರಚಾರ, ಇತ್ಯಾದಿ ಕಾರ್ಯಕ್ರಮಗಳ ಮೂಲಕ ವಿವಿಧ ಕಾರ್ಯಕ್ರಮಗಳ ಕುರಿತು ಸಾಮಾನ್ಯರಿಗೆ ತಿಳುವಳಿಕೆ ನೀಡಲಾಗುವುದು.

**ವಿಶ್ವ ಅಂಗವಿಕಲರ ದಿನಾಚರಣೆ** : ಅಂಗವಿಕಲರ ದಿನಾಚರಣೆ: ವಿವಿಧ ಕ್ರೀಡೆಗಳಲ್ಲಿ ಅಂಗವಿಕಲರು ಭಾಗವಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಯೋಜನೆಯಡಿಯಲ್ಲಿ, ರಾಜ್ಯದ ಎಲ್ಲ ಭಾಗಗಳಲ್ಲಿಯೂ, ಡಿಸೆಂಬರ್ ತಿಂಗಳ ಮೂರನೇ ತಾರೀಖಿನಂದು, ಅಂಗವಿಕಲರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ವಿಶ್ವ ಅಂಗವಿಕಲರ ದಿನಾಚರಣೆ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿಭಾ ಪುರಸ್ಕಾರ ಬಹುಮಾನ ವಿತರಣೆಗೆ ಅವಕಾಶವನ್ನೂ ಮಾಡಲಾಗುತ್ತದೆ. ಜಿಲ್ಲೆಯಲ್ಲಿ ವಿವಿಧ ಸ್ಪರ್ಧೆಗಳನ್ನು ಇವರಿಗಾಗಿ ಏರ್ಪಡಿಸಿ ಅಂಗವಿಕಲರ ದಿನಾಚರಣೆಯನ್ನು

ಆಚರಿಸಲಾಗಿದ್ದು ಇದರಲ್ಲಿ ೨೧೦ ಅಂಗವಿಕಲರು ಪ್ರಯೋಜನ ಪಡೆದಿದ್ದಾರೆ. ೨೦೦೩-೦೬ರ ಸಾಲುಗಳಲ್ಲಿ ಈ ದಿನಾಚರಣೆಯ ಆಚರಣೆಯ ಸಂಬಂಧದ ವಿವರಗಳನ್ನು ಇಲ್ಲಿ ಕೋಷ್ಟಕ ೧೬.೫೩ರಲ್ಲಿ ಕೊಡಲಾಗಿದೆ.

**ಕೋಷ್ಟಕ. ೧೬.೫೩ : ಪ್ರತಿಭಾ ಪುರಸ್ಕಾರ ಬಹುಮಾನ ವಿತರಣಾ ವಿವರ**

| ವರ್ಷ | ಫಲಾನುಭವಿಗಳು ಅಂಗವಿಕಲರು | ಖರ್ಚಾದ ಮೊತ್ತ | ಉದ್ದೇಶ |
|---|---|---|---|
| ೨೦೦೩-೦೪ | ೭೦ | ರೂ.೧೪,೦೦೦/- | ವಿವಿಧ ಕ್ರೀಡಾ ಸ್ಪರ್ಧೆ |
| ೨೦೦೪-೦೫ | ೭೦ | ರೂ.೧೩,೦೦೦/- | ಸಾಂಸ್ಕೃತಿಕ ಸ್ಪರ್ಧೆ |
| ೨೦೦೫-೦೬ | ೭೦ | ರೂ.೧೪,೦೦೦/- | ಚಿತ್ರಕಲಾ ಸ್ಪರ್ಧೆ |
| ಒಟ್ಟು | ೨೧೦ | ರೂ.೪೧,೦೦೦/- | |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

### ಉ) ಇತರ ಯೋಜನೆಗಳು

**ಗುರುತಿನ ಚೀಟಿ ವಿತರಣೆ :** ಈ ಯೋಜನೆಯಡಿ, ಜಿಲ್ಲೆಯ ಅಂಗವಿಕಲರಿಗೆ ಗುರುತಿನ ಚೀಟಿಗಳನ್ನು ಐದು ವರ್ಷಗಳಿಂದ ವಿತರಣೆ ಮಾಡಲಾಗಿದೆ. ವಿವಿಧ ಬಗೆಯ ಅಂಗವಿಕಲತೆಯನ್ನು ಗುರುತಿಸುವ ಸಲುವಾಗಿ ವಿವಿಧ ಬಣ್ಣವಿರುವ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ. ೨೦೦೩-೦೬ರ ವರ್ಷಗಳಲ್ಲಿ ಜಿಲ್ಲೆಯಲ್ಲಿ ವಿತರಿಸಲಾದ ಗುರುತಿನ ಚೀಟಿಗಳನ್ನು ಪಡೆದ ಅಂಗವಿಕಲರ ಸಂಖ್ಯೆಯನ್ನು ಮುಂದಿನ ಕೋಷ್ಟಕ ೧೬.೫೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೪ : ಗುರುತಿನ ಚೀಟಿ ವಿತರಣಾ ವಿವರ**

| ವರ್ಷ | ಫಲಾನುಭವಿ ಅಂಗವಿಕಲರು |
|---|---|
| ೨೦೦೩-೦೪ | ೬೦ |
| ೨೦೦೪-೦೫ | ೧೦೨ |
| ೨೦೦೫-೦೬ | ೭೬೭ |

***ಮಾಹಿತಿ:** ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ*

**ಅಂಗವಿಕಲತೆ ವ್ಯಕ್ತಿಗಳಿಗೆ ರಿಯಾಯಿತಿ ಬಸ್ ಪಾಸ್ :** ಸರ್ಕಾರವು, ಈ ಯೋಜನೆಯಡಿ, ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ದರದಲ್ಲಿ, ಬಸ್ ಪಾಸ್ ವಿತರಿಸುತ್ತಿದೆ. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ೫೩ ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ನೀಡಲಾಗಿದೆ. ಇದರ ವಿವರಗಳು ಮುಂದಿನ ಕೋಷ್ಟಕ ೧೬.೫೫ ರಲ್ಲಿದೆ.

**ಕೋಷ್ಟಕ ೧೬.೫೫ : ಅಂಗವಿಕಲರಿಗೆ ರಿಯಾಯಿತಿ ಬಸ್ ಪಾಸ್ ವಿತರಣಾ ವಿವರ**

| ವರ್ಷ | ಫಲಾನುಭವಿ ಅಂಗ ವಿಕಲರು |
|---|---|
| ೨೦೦೩-೦೪ | ೩೪ |
| ೨೦೦೪-೦೫ | ೦೮ |
| ೨೦೦೫-೦೬ | ೧೧ |

*(ಮಾಹಿತಿ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)*

ಮೇಲಿನ ಯೋಜನೆಗಳಲ್ಲದೆ, ಸ್ವಯಂ ಉದ್ಯೋಗ ಕಲ್ಪಿಸಿ ಕೊಡಲು, ಜಿಲ್ಲೆಯ ಅಂಗವಿಕಲರಿಗೆ ಟೆಲಿಫೋನ್ ಬೂತ್‌ಗಳನ್ನು ವಿತರಿಸುವ ಸಲುವಾಗಿ 'ಟೆಲಿಫೋನ್ ಬೂತ್' ಒದಗಿಸುವ ಯೋಜನೆಯನ್ನೂ; ಅಂಗ ವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ 'ಸಮುದಾಯ ಪುನರ್ವಸತಿ ಯೋಜನೆ'ಯನ್ನೂ;

ತರಬೇತಿಗೆ ಮತ್ತು ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಧನ ಸಹಾಯವನ್ನು ನೀಡಲು 'ತರಬೇತಿ ಹಾಗೂ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆ'ಯನ್ನೂ; ಪಿ.ಯು.ಸಿ. ಮತ್ತು ಬಿ.ಎ. ತರಗತಿಗಳಲ್ಲಿ ಓದುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಅವರ ಪಠ್ಯ ಪುಸ್ತಕಗಳನ್ನು ಆಡಿಯೋ ಕ್ಯಾಸೆಟ್‌ಗಳಲ್ಲಿ ಧ್ವನಿ ಮುದ್ರಿಸಿ ಟೇಪ್ ರೆಕಾರ್ಡರ್ ಸಹಿತ ಪ್ರಾಂಶುಪಾಲರ ಮುಖಾಂತರ ನೀಡುವಂಥ 'ಅಂಧ ವಿದ್ಯಾರ್ಥಿಗಳಿಗೆ ಶಬ್ದ ಗ್ರಂಥಾಲಯ' ಎಂಬ ಕಾರ್ಯಕ್ರಮವನ್ನೂ; ಇನ್ನಿತರ ಹಲವಾರು ಕಾರ್ಯಕ್ರಮಗಳೊಂದಿಗೆ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

## ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳು

**ಹಿರಿಯ ನಾಗರಿಕರ ದಿನಾಚರಣೆ :** ಯಾವುದೇ ವ್ಯಕ್ತಿಗೆ ಅರವತ್ತು ವರ್ಷಗಳ ನಂತರದ ಹಂತವು ಆಶ್ರಿತ ಜೀವನದ ಪ್ರಾರಂಭ ಕಾಲವೆಂಬ ಭಾವನೆಯು ಬಾರದಂತೆ ನೋಡಿಕೊಳ್ಳಲು ಹಾಗೂ ಅರವತ್ತರ ವಯಸ್ಸನ್ನು ದಾಟಿದವರೂ ಕ್ರಿಯಾತ್ಮಕವಾಗಿ, ಸೃಜನಾತ್ಮಕವಾಗಿ ಮತ್ತು ತೃಪ್ತಿಕರ ಜೀವನವನ್ನು ನಡೆಸುವಂತಾಗಬೇಕೆಂಬ ಕುರಿತು ಚಿಂತಿಸಿ, ೧೯೯೯–೨೦೦೦ನೇ ಸಾಲನ್ನು, ವಯಸ್ಸಾದ ವ್ಯಕ್ತಿಗಳ ಅಥವಾ ಹಿರಿಯ ನಾಗರಿಕರ ಅಂತರ ರಾಷ್ಟ್ರೀಯ ವರ್ಷವೆಂದು ಒಕ್ಕೂಟ ರಾಷ್ಟ್ರಗಳು ಘೋಷಿಸಿದವು. ಹಿರಿಯ ನಾಗರಿಕರ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸಮಗ್ರ ಕಾರ್ಯ ನೀತಿಯನ್ನು ಸಿದ್ಧ ಪಡಿಸುವ ಪ್ರಯತ್ನದಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ರಾಷ್ಟ್ರ ಹಾಗೂ ರಾಜ್ಯ ನೀತಿಯನ್ನು ರೂಪಿಸಿವೆ. ಈ ನೀತಿಯ ಉದ್ದೇಶದ ಕುರಿತು ಹಾಗೂ ಈ ಹಿರಿಯರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷ ಅಕ್ಟೋಬರ್ ಒಂದರಂದು ವಿಶ್ವ ಹಿರಿಯರ ನಾಗರಿಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ರಾಜ್ಯದಲ್ಲಿಯೂ ಪ್ರಥಮ ಬಾರಿಗೆ ದಿನಾಂಕ ೧.೧೦.೨೦೦೪ರಂದು ವಿಶ್ವ ಹಿರಿಯರ ನಾಗರಿಕರ ದಿನಾಚರಣೆಯನ್ನು ಆಚರಿಸಲಾಯಿತು.

**ಹಿರಿಯ ನಾಗರಿಕರಿಗಾಗಿ ರಾಜ್ಯ ಕಾರ್ಯ ನೀತಿ :** ದಿನಾಂಕ ೨೫.೮.೧೯೯೯ರ ಪತ್ರದಲ್ಲಿ ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಸಂಯೋಜನಾ ಮಂತ್ರಾಲಯವಾಗಿರುವ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಅಧಿಕಾರಯುಕ್ತ ಮಂತ್ರಾಲಯವು ೧೯೯೯ನೇ ಸಾಲಿಗೆ ವೃದ್ಧರಿಗೆ ರಾಷ್ಟ್ರೀಯ ನೀತಿಯನ್ನು ರಚಿಸಿತು. ವಯಸ್ಸಾದವರ ಸಮಸ್ಯೆಗಳ ಕುರಿತು ರಾಷ್ಟ್ರಕ್ಕೆ ಕಳಕಳಿ ಇದೆ ಎಂಬ ಅಂಶವನ್ನೂ, ಅವರು ರಕ್ಷಣೆರಹಿತರಾಗಿರುವುದಿಲ್ಲ ಮತ್ತು ನಿರ್ಲಕ್ಷ್ಯಕ್ಕೆ ಒಳಪಟ್ಟವರಲ್ಲ ಎಂಬ ಭರವಸೆಯನ್ನೂ ನೀಡುತ್ತದೆ. ಸಮಾಜದಲ್ಲಿ ಅವರ ಕಾನೂನು ಬದ್ಧ ಸ್ಥಾನವನ್ನು ಗಟ್ಟಿಗೊಳಿಸಿ, ಅವರಿಗೆ ಸಹಾಯ ನೀಡಿ ಅವರ ಜೀವಿತದ ಕೊನೆಯವರೆಗೂ ಶಾಂತಿ ಮತ್ತು ಗೌರವವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಉದ್ದೇಶದಿಂದ, ವೃದ್ಧರಿಗಾಗಿ ಒಂದು ಕಾರ್ಯನೀತಿಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರವನ್ನು ದಿನಾಂಕ ೧೩.೫.೨೦೦೩ರ ಪತ್ರದಲ್ಲಿ ಕೋರಿದ್ದು, ಅದರಂತೆ, ರಾಜ್ಯ ಸರ್ಕಾರವು ದಿನಾಂಕ ೫.೯.೨೦೦೩ರ ಆದೇಶದಲ್ಲಿ ಹಿರಿಯ ನಾಗರಿಕರಿಗಾಗಿ ಕಾರ್ಯ ನೀತಿಯನ್ನು ರೂಪಿಸಿ, ಈ ಆದೇಶವು ಕೂಡಲೇ ಜಾರಿಗೆ ಬರುವಂತೆ ಆದೇಶಿಸಿರುತ್ತದೆ. ಈ ಎಲ್ಲ ಅನುಕೂಲಗಳನ್ನು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹಾಗೂ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನೂ ಜಾರಿಗೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ವಯಸ್ಸಾದವರ ಸುರಕ್ಷತೆ, ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಕ್ಷೇಮಾಭಿವೃದ್ಧಿ, ತೃಪ್ತಿಕರ ಜೀವನ ನಡೆಸಲು ಅವಕಾಶ, ಆಸ್ತಿ ಮತ್ತು ಜೀವ ರಕ್ಷಣೆ, ವಸತಿ ಮತ್ತು ಆಶ್ರಯ, ವಯಸ್ಸಾದವರೂ ಸಂಪನ್ಮೂಲ ವ್ಯಕ್ತಿಗಳೆಂಬ ಸತ್ಯದ ಗುರುತಿಸುವಿಕೆ, ಇವೇ ಮುಂತಾದ ಅಂಶಗಳನ್ನು ಕರ್ನಾಟಕ ರಾಜ್ಯ ನೀತಿಯು ಒಳಗೊಂಡಿರುತ್ತದೆ. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ನೀಡುವುದು, ಸಾರ್ವಜನಿಕ ವಾಹನಗಳಲ್ಲಿ ಸೀಟುಗಳನ್ನು ಮೀಸಲಿರಿಸುವುದು, ವಂಚನೆ ಮತ್ತು ಮೋಸದ ಪ್ರಕರಣಗಳಿಗೆ ಸಂಬಂಧಿಸಿದಂತೆ

ವಯಸ್ಸಾದ ವ್ಯಕ್ತಿಗಳ ದೂರುಗಳನ್ನು ವಿಳಂಬ ಮಾಡದೇ ವಿಲೇವಾರಿ ಮಾಡುವುದು—ಇವೂ ಈ ನೀತಿಯಲ್ಲಿ ಅಳವಡಿಸಲಾಗಿರುವ ಇನ್ನಿತರ ಮುಖ್ಯ ಅಂಶಗಳಾಗಿವೆ. ಹಿರಿಯ ನಾಗರಿಕರಿಗಾಗಿ ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಹಗಲು ಯೋಗ ಕ್ಷೇಮ ಕೇಂದ್ರಗಳನ್ನೂ; ಮಂಗಳೂರೂ ಸೇರಿದಂತೆ ಏಳು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಉಚಿತ ಸಹಾಯವಾಣಿ ಕೇಂದ್ರಗಳನ್ನೂ ಪ್ರಾರಂಭಿಸಲು ಸರ್ಕಾರವು ೨೦೦೪ನೇ ಸಾಲಿನಲ್ಲಿ ಆದೇಶಗಳನ್ನು ಹೊರಡಿಸಿದೆ. ವೃದ್ಧಾಶ್ರಮಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅನುದಾನಗಳನ್ನೂ ಕೊಡಲಾಗುತ್ತಿದೆ. ಅವರ ವೈದ್ಯೋಪಚಾರಕ್ಕಾಗಿ ಸಂಚಾರಿ ಘಟಕಗಳನ್ನು ಆರಂಭಿಸಿದೆ. ಆದರೆ ಈ ಸೌಲಭ್ಯಗಳನ್ನು ಉಡುಪಿ ಜಿಲ್ಲೆಯಲ್ಲಿ ೨೦೦೪–೦೫ನೇ ಸಾಲಿನವರೆಗೆ ಆರಂಭಗೊಂಡಿರಲಿಲ್ಲ.

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ಜಾತಿ, ಮತ ಪಂಥಗಳ ಮಿತಿ ಹಾಕಿಕೊಳ್ಳದೆ; ಪಾರ್ಟಿ, ಮದುವೆ, ಮುಂಜಿ, ನಾಮಕರಣ, ಮುಂತಾದ ಹಲವು ರೀತಿಯ ಸಂಭ್ರಮ, ಮೋಜುಗಳನ್ನು ಅನುಭವಿಸದೆ; ಕೇವಲ ದೇಶದ ರಕ್ಷಣೆಗಾಗಿಯೇ ತಮ್ಮ ಜೀವ–ಜೀವನವನ್ನೇ ಮುಡಿಪಾಗಿಡುವ ಸೈನಿಕರ ಮತ್ತು ಮಾಜಿ ಸೈನಿಕರ ಕುಟುಂಬಗಳ ರಕ್ಷಣೆ ಮತ್ತು ಪೋಷಣೆಗಳು ಅಗತ್ಯ ಎಂಬುದನ್ನು, ಮೊದಲ ಮಹಾ ಯುದ್ಧದ ಸಮಯದಲ್ಲಿ ಭಾರತೀಯ–ಬ್ರಿಟಿಷ್ ಸರ್ಕಾರ ಕಂಡುಕೊಂಡಿತು ಮತ್ತು ಅವರ ಕುಟುಂಬಗಳ ಸರ್ವ ರೀತಿಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿ, ಬುನಾದಿ ಹಾಕಿ ಕೊಟ್ಟಿತು. ದಕ್ಷಿಣ ಆಫ್ರಿಕಾ, ಇಟಲಿ, ಬರ್ಮಾ, ಇಡೋನೇಷಿಯಾ – ಹೀಗೆ ಹಲವಾರು ದೇಶಗಳಿಗಾಗಿ ತಮ್ಮ ದೇಶದ ನೆಲದಿಂದ ಬಹುದೂರದ ರಣರಂಗಗಳಲ್ಲಿ ಸೇನಾಪಡೆಯಲ್ಲಿದ್ದ ಭಾರತೀಯ ಸೈನಿಕರು, ಯುದ್ಧ ನಿರತರಾಗಿದ್ದರು. ಬಹುತೇಕ ಸೈನಿಕರು ಗ್ರಾಮೀಣ ಹಿನ್ನೆಲೆ ಹೊಂದಿದವರಾಗಿದ್ದು ಅವರ ಮಡದಿಯರು ಅಶಿಕ್ಷಿತರಾಗಿದ್ದರು. ಇದರಿಂದ ಈ ಸೈನಿಕರು ತಮ್ಮ ಕುಟುಂಬಗಳೊಂದಿಗೆ ಸಂಪರ್ಕಿಸಲು ಸಮಸ್ಯೆಯಾಗುತ್ತಿತ್ತು. ತಮ್ಮ ಕುಟುಂಬಗಳಿಂದ ದೀರ್ಘಕಾಲ ದೂರವಿರುತ್ತಿದ್ದ ಸೈನಿಕರ ಮನಸ್ಥಿತಿಯನ್ನು ಮತ್ತು ನೈತಿಕ ಬಲವನ್ನು ಉನ್ನತ ಮಟ್ಟದಲ್ಲಿಟ್ಟರೆ, ರಣರಂಗದಲ್ಲಿ ಅವರು ಉತ್ಸಾಹದಿಂದ ತೊಡಗಿಕೊಳ್ಳುತ್ತಾರೆಂಬುದನ್ನು ಮನಗಂಡ ಆಗಿನ ಬ್ರಿಟಿಷ್ ಸರ್ಕಾರವು, ಈ ಸೈನಿಕರ ಕುಟುಂಬಗಳನ್ನು ಪೋಷಣೆ ಮತ್ತು ಪ್ರಗತಿಯ ಅವಶ್ಯಕತೆಯತ್ತ ಗಮನ ಹರಿಸಿತು. ಈ ಕಾರ್ಯಕ್ಕಾಗಿ ಸೈನಿಕರ ಮಂಡಳಿಯನ್ನು (ದಿ ಇಂಡಿಯನ್ ಸೋಲ್ಡ್ಜರ್ಸ್ ಬೋರ್ಡ್) ಅನ್ನು ರಚನೆ ಮಾಡಲಾಯಿತು.

ಭಾರತೀಯ ನೌಕಾ ಪಡೆ ಮತ್ತು ವಾಯು ಪಡೆಗಳು ವಿಸ್ತೃತಗೊಂಡಾಗ ಭಾರತೀಯ ಸೈನಿಕ ಮಂಡಳಿಗೆ ನೌಕಾದಳ ಮತ್ತು ವಾಯು ದಳಗಳಲ್ಲಿದ್ದ ಸೈನಿಕರ ಕುಟುಂಬಗಳನ್ನೂ ನೋಡಿಕೊಳ್ಳುವ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಇದರ ಹೆಸರನ್ನು 'ಇಂಡಿಯನ್ ಸೋಲ್ಡ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್' ಎಂಬುದಾಗಿ ಮಾರ್ಪಡಿಸಲಾಯಿತು. ನಂತರದಲ್ಲಿ ಸೈನಿಕರ ಸಂಖ್ಯೆ ಹೆಚ್ಚುತ್ತ ಹೋದಂತೆ ಈ ಮಂಡಳಿಯ ಹೊಣೆಗಾರಿಕೆ ಮತ್ತು ಕಾರ್ಯ ಒತ್ತಡಗಳೂ ಹೆಚ್ಚಿ, ಸೈನಿಕರ ಕುಟುಂಬಗಳ ಪೋಷಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಎಲ್ಲ ರಾಜ್ಯಗಳಲ್ಲಿ ನಂತರ ಜಿಲ್ಲೆಗಳಲ್ಲಿ ಮಂಡಳಿಗಳನ್ನು ಸ್ಥಾಪಿಸುವುದು ಅಗತ್ಯವೆಂಬುದನ್ನು ಮನಗಾಣಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರಿನ ಮಹಾರಾಜರು ಮೈಸೂರು ರಾಜ್ಯದ ಸೇನೆಯ ಮತ್ತು ಈ ಸೇನೆಯಲ್ಲಿ ಸೇವೆ ಸಲ್ಲಿಸಿದ ಮಾಜಿ ಸೈನಿಕರ ಕುಟುಂಬ ಕಲ್ಯಾಣಕ್ಕಾಗಿ 'ಸೋಲ್ಡ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್'ನ್ನು ಆರಂಭಿಸಿದ್ದರು. ೧೯೫೬ರಲ್ಲಿ ರಾಜ್ಯ ಏಕೀಕರಣವಾದ ಮೇಲೆ, ರಾಜ್ಯದಲ್ಲಿದ್ದ ಹತ್ತೊಂಬತ್ತು ಜಿಲ್ಲೆಗಳ ಕಾರ್ಯಭಾರವನ್ನು ಆಗ ಅಸ್ತಿತ್ವದಲ್ಲಿದ್ದ ಎಂಟು ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳಿಗೆ ಮರುಹಂಚಿಕೆ ಮಾಡಲಾಯಿತು. ೧೯೬೩ರಲ್ಲಿ ಸೈನಿಕ ಮಂಡಳಿ ವ್ಯವಸ್ಥೆಯನ್ನು ಶಾಶ್ವತಗೊಳಿಸಿ, ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳಿಗಳ ಎಂಟು ಕಛೇರಿಗಳ ನೌಕರರನ್ನು ಸರ್ಕಾರಿ

ನೌಕರರೆಂಬುದಾಗಿ ಪರಿಗಣಿಸಲಾಯಿತು. ೧೯೬೭ರಲ್ಲಿ ಅಧಿಕ ಕಾರ್ಯ ಒತ್ತಡಗಳನ್ನು ಮನಗಂಡು, ಮೈಸೂರು ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯನ್ನು, ಇದಕ್ಕಾಗಿಯೇ ಸಂಪೂರ್ಣ ಮೀಸಲಾದ ಕಾರ್ಯದರ್ಶಿಯೊಂದಿಗೆ ಸ್ಥಾಪಿಸಿ, ಗೃಹ ಇಲಾಖೆಯ ಅಧೀನದಲ್ಲಿಡಲಾಯಿತು. ಈ ಮಂಡಳಿಯ ಕಾರ್ಯದರ್ಶಿ ಹುದ್ದೆಯನ್ನು ಕಿರು ಇಲಾಖೆಯ ಮುಖ್ಯಸ್ಥ ಹುದ್ದೆಯನ್ನಾಗಿ ಮಾಡಲಾಯಿತು. ೧೯೭೬ಲ್ಲಿ ಭಾರತ ಸರ್ಕಾರದ ಕೋರಿಕೆಯಂತೆ ಈ ಮಂಡಳಿಗಳು ಕ್ರಮವಾಗಿ ಕರ್ನಾಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿ ಹಾಗೂ ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳೆಂದು ನಾಮಕರಣಗೊಂಡವು. ೧೯೮೦ರಲ್ಲಿ ಈ ಇಡೀ ವ್ಯವಸ್ಥೆಯು ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯೆಂಬುದಾಗಿ ಹೆಸರು ಹೊಂದಿ ಅದೇ ರೀತಿ ಈ ವರೆಗೆ ಮುಂದುವರಿಯುತ್ತಿದೆ. ಕರ್ನಾಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರಾಗಿಯೂ, ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರಾಗಿಯೂ, ನಾಮಾಂಕಿತಗೊಂಡವರಾಗಿದ್ದಾರೆ.

ರಾಜ್ಯದಲ್ಲಿ ಎಲ್ಲಾ ಇಪ್ಪತ್ತೊಂಬತ್ತು ಜಿಲ್ಲೆಗಳ ಕಾರ್ಯವನ್ನು ಈ ಇಲಾಖೆಯ ಹನ್ನೊಂದು ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಕಾರ್ಯಾಲಯಗಳು ನೋಡಿಕೊಳ್ಳುತ್ತಿವೆ. ಈ ಅಧಿಕಾರಿಗಳಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯಾ ಕಾರ್ಯವ್ಯಾಪ್ತಿ ಜಿಲ್ಲೆಗಳ ಜಿಲ್ಲಾ ಸೈನಿಕ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಗಳು ಕಾಲ ಕಾಲಕ್ಕೆ ಸಭೆ ಸೇರಿ, ಜಿಲ್ಲಾ ಮಟ್ಟದಲ್ಲಿ ಮಾಜಿ ಸೈನಿಕರ ಹಾಗೂ ಅವರ ಅವಲಂಬಿತರ ಕಲ್ಯಾಣ ಮತ್ತು ಪುನರ್ವಸತಿಗಾಗಿ ಸೂಕ್ತ ಸಲಹೆ ನೀಡುತ್ತವೆ.

ಭಾರತ ಸಮಿತಿಯ(ಯೂನಿಯನ್) ಸಕ್ರಮ ಸೇನಾ ದಳ, ನಾವಿಕ ದಳ ಮತ್ತು ವಾಯ ದಳಗಳಲ್ಲಿ; ಯೋಧನಾಗಿ ಅಥವಾ ಯೋಧನಲ್ಲದೆ ಯಾವುದೇ ದರ್ಜೆಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು 'ಮಾಜಿ ಸೈನಿಕ' ಎಂದು ಪರಿಗಣಿಸಲಾಗುತ್ತದೆ. [ಡಿಫೆನ್ಸ್ ಕಾರ್ಪ್ಸ್, ಜನರಲ್ ರಿಸರ್ವ್ ಎಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ್ ಮತ್ತು ಇತರ ವ್ಯತಿರಿಕ್ತ (ಪ್ಯಾರಾ) ಮಿಲಿಟರಿ ಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಇದು ಒಳಗೊಳ್ಳುವುದಿಲ್ಲ]

ದಕ್ಷಿಣ ಜಿಲ್ಲೆಯ ಮಂಗಳೂರಿನಲ್ಲಿರುವ ಕಛೇರಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಾರ್ಯವ್ಯಾಪ್ತಿಗೆ ಉಡುಪಿ ಜಿಲ್ಲೆಯೂ ಸೇರಿರುತ್ತದೆ. ಈ ಉಪ ನಿರ್ದೇಶಕರೇ ಈ ಜಿಲ್ಲೆಯಲ್ಲಿಯೂ, ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳಾಗಿರುತ್ತಾರೆ. ಸೈನಿಕರ ಅವಲಂಬಿತರು, ಮಾಜಿ ಸೈನಿಕರು ಮತ್ತು ಮಾಜಿ ಸೈನಿಕರ ಅವಲಂಬಿತರಿಗೆ ಸಂಬಂಧಿಸಿದಂತಹ ಎಲ್ಲ ರೀತಿಯ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ. ಜಿಲ್ಲಾ ಮಟ್ಟದಲ್ಲಿನ ಈ ಉಪ ನಿರ್ದೇಶಕರೇ, ಜಿಲ್ಲಾ ಸೈನಿಕ ಮಂಡಳಿಯ ಕಾರ್ಯದರ್ಶಿಯೂ ಆಗಿದ್ದು, ಜಿಲ್ಲಾ ಸೈನಿಕ ಮಂಡಳಿಯ ಸಭೆಗಳನ್ನು ಕರೆದು ಸೇರಿಸುವ ಕಾರ್ಯ ನಿರ್ವಹಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಮಾಜಿ ಸೈನಿಕರಿದ್ದು ಅವರ ಅವಲಂಬಿತರು ಸುಮಾರು ಮೂರು ಲಕ್ಷ ಇರುತ್ತಾರೆಂದು ಈ ಇಲಾಖೆಯ ೨೦೦೪-೦೫ನೇ ಸಾಲಿನ ವರದಿ ತಿಳಿಸುತ್ತದೆ. ಅವರ ಕಲ್ಯಾಣ ಮತ್ತು ಪುರ್ನವಸತಿಗಾಗಿ ಕರ್ನಾಟಕ ಸರ್ಕಾರವು ಈ ಮುಂದಿನ ಹಲವಾರು ಸವಲತ್ತುಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಉದ್ಯೋಗದಲ್ಲಿ ಮೀಸಲಾತಿ ಮತ್ತು ಸ್ವ ಉದ್ಯೋಗ, ವೇತನ ನಿಗದಿ, ತಾಂತ್ರಿಕ ಶಿಕ್ಷಣದಲ್ಲಿ ಸೀಟುಗಳ ಕಾಯ್ದಿರಿಸುವಿಕೆ, ಅವಲಂಬಿತರ ಮಕ್ಕಳಿಗೆ ಪುಸ್ತಕ ನೆರವು, ಸ್ಥಳ ನೆರವು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ವಿಧವಾ ವೇತನ; ಜಿಲ್ಲಾ ಯೋಧರಿಗೆ ವಾರ್ಷಿಕ ಪರಿಹಾರ ಧನ ಮಂಜೂರಾತಿ; ಅಪಾಯಕಾರಿ ಸನ್ನಿವೇಶಗಳಲ್ಲಿ ಶೌರ್ಯದಿಂದ ಹೋರಾಡಿ ಗ್ಯಾಲಂಟರಿ/ಗ್ಯಾಲಂಟರಿಯಲ್ಲದ ಪ್ರಶಸ್ತಿಗಳನ್ನು ಪಡೆದ ಯೋಧರಿಗೆ ನಗದು ಹಣ ಮತ್ತು ವರ್ಷಾಸನ ನೀಡಿಕೆ; ವೈದ್ಯಕೀಯ ವೆಚ್ಚ ಮರುಪಾವತಿ, ಮುಂತಾದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದಲ್ಲದೆ,

ಮಾಜಿ ಸೈನಿಕರಿಗೆ, ಯೋಧರ ವಿಧವೆಯರಿಗೆ ಮತ್ತು ಅವರ ಅವಲಂಬಿತರಿಗೆ ನೌಕರಿ ಕೊಡಿಸಿಕೊಡುವುದು; ಮಾಜಿ ಮತ್ತು ಸೇವೆಯಲ್ಲಿರುವ ಸೈನಿಕರಿಗೆ ನಿವೇಶನ/ಮನೆ/ಅಂಗಡಿಗಳನ್ನು ಅಲಾಟ್ ಮಾಡುವುದು; ಆಸ್ತಿ ಮತ್ತು ಜೀವಗಳ ರಕ್ಷಣೆ; ಆಸ್ಪತ್ರೆಗಳಲ್ಲಿ ವೈದ್ಯಕೀಯ ಅನುಕೂಲತೆ; ವಿದ್ಯಾರ್ಥಿ ವೇತನ ಮಂಜೂರಾತಿ: ಯೋಧರ ವಿಧವೆಯರಿಗೆ ಮತ್ತು ಸೇವೆಯಲ್ಲಿ ಮಡಿದವರ ವಿಧವೆಯರಿಗೆ ವಿವಾಹಾನುದಾನ ಮುಂತಾದ ಕಾರ್ಯಗಳನ್ನೂ ನಿರ್ವಹಿಸುವುದು ಈ ಕಛೇರಿಯ ಜವಾಬ್ದಾರಿಯಾಗಿರುತ್ತದೆ. ಬಾವುಟಗಳ ಮಾರಾಟ, ಜಾಹಿರಾತುಗಳು, ಕಲ್ಯಾಣ ನಿಧಿ, ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿ, ಮಾಜಿ ಸೈನಿಕರ ಪಿಂಚಣಿ ಅಹವಾಲುಗಳನ್ನು ಸಂಬಂಧಿತ ಅಧಿಕಾರಿಗಳ ಮುಂದಿಟ್ಟು ಇತ್ಯರ್ಥಗೊಳಿಸುವಿಕೆ – ಇವೇ ಮುಂತಾದುವು ಈ ಇಲಾಖೆಯು ನಿರ್ವಹಿಸುವ ಇನ್ನಿತರ ವಿಭಿನ್ನ ಕಾರ್ಯಕ್ರಮಗಳಾಗಿವೆ.

**ಪ್ರಶಸ್ತಿ ವಿಜೇತರಿಗೆ ವರ್ಷಾಸನ ನೀಡಿಕೆ:** ದೇಶದ ರಕ್ಷಣೆಗಾಗಿ ನಿಷ್ಠೆಯಿಂದ ದುಡಿಯುವ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮತ್ತು ಅಗತ್ಯ ಸಂದರ್ಭಗಳಲ್ಲಿ ಭಯಭೀತಿಗೊಳ್ಳದೆ ಶೌರ್ಯದಿಂದ ಕಾರ್ಯ ಸಾಧಿಸುವ, ವೀರಯೋಧರಿಗೆ ಕೇಂದ್ರ ಸರ್ಕಾರದಿಂದ, ವೀರ ಚಕ್ರ, ಕೀರ್ತಿ ಚಕ್ರ, ಯುದ್ಧ ಸೇವಾ ಪದಕ, ಪರಮ ವಿಶಿಷ್ಟ ಸೇವಾ ಪದಕ, ಮುಂತಾದ ಶೌರ್ಯ ಹಾಗೂ ಶೌರ್ಯೇತರ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಪ್ರಶಸ್ತಿ ವಿಜೇತರಿಗೆ ಅವರಿಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ, ಒಂದು ಬಾರಿ ನಗದು ಹಣ ಮತ್ತು ವರ್ಷಾಸನಗಳನ್ನು ಕೊಡಲಾಗುತ್ತದೆ. ಉಡುಪಿ ಜಿಲ್ಲೆಯವರಾದ ಕಮ್ಯಾಂಡರ್ ಐ.ಐ. ವಾಜ್ ವಿಶಿಷ್ಟ ಸೇವಾ ಪದಕವನ್ನೂ, ಮೇಜರ್ ಗಿರೀಶ್ ಸೇನಾ ಪದಕವನ್ನು ೨೦೦೨–೦೩ನೇ ಸಾಲಿನಲ್ಲಿ, ಈ ಇಲಾಖೆಯ ಮೂಲಕ ಪಡೆದು ಕೊಂಡಿದ್ದು, ಈ ಪ್ರಶಸ್ತಿ ಪಡೆದವರಿಗೆ ಒಂದು ಬಾರಿಗೆ ತಲಾ ಮೂರು ಸಾವಿರ ರುಪಾಯಿಗಳನ್ನೂ, ಭೂಮಿಗೆ ಬದಲಾಗಿ ೨೦,೦೦೦ ರೂ.ಗಳ ನಗದು ಹಣವನ್ನೂ ನೀಡಲಾಗಿದೆ. ಜೊತೆಗೆ ವಾರ್ಷಿಕ ರೂ.೨೫೦/–ರಂತೆ ವರ್ಷಾಸನ ನೀಡಲಾಗುತ್ತಿದೆ. ಇದಕ್ಕಾಗಿ ಕ್ರಮವಾಗಿ ರೂ.೨೩,೫೦೦/– ಮತ್ತು ರೂ. ೨೭,೫೦೦/– ಒಟ್ಟು ೦.೫೧ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

**ವೈದ್ಯಕೀಯ ಚಿಕಿತ್ಸೆ ಮತ್ತು ಮರುಪಾವತಿ** : ರಾಜ್ಯದ ಮಿಲಿಟರಿ ಆಸ್ಪತ್ರೆಗಳಲ್ಲಿ ಸೇನಾ ನಿವೃತ್ತರ ಪಿಂಚಣಿದಾರರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ಸೌಲಭ್ಯವಿದೆ. ಸೇನಾ ನಿವೃತ್ತರಿಗೆ ಮತ್ತು ಅವರ ಕಿರಿಯ ವಯಸ್ಸಿನ ಮಕ್ಕಳಿಗೆ ಹಾಗೂ ಸೇನಾ ಪಡೆಯಲ್ಲಿರುವಾಗಲೇ ಮಡಿದಂತಹವರ ಪತ್ನಿಯರು ಮತ್ತು ಕಿರಿವಯಸ್ಸಿನ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು, ಅನಾರೋಗ್ಯದ ಸಮಯದಲ್ಲಿ ಮಾಡಿದ ವೆಚ್ಚಗಳನ್ನು ಈ ಇಲಾಖೆಯು ನಿಯಮಗಳನ್ವಯ ಭರಿಸಿಕೊಡುತ್ತದೆ. ಹೀಗೆ ಅವರಿಗಾಗಿ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಿದ ವಿವರಗಳನ್ನು ಕೋಷ್ಟಕ ೧೬.೫೬ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೬ : ಮಾಜಿ ಸೈನಿಕರ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಮಾಡಲಾದ ಖರ್ಚು(ಲಕ್ಷ ರೂ.ಗಳಲ್ಲಿ) |
|---|---|---|
| ೨೦೦೨–೦೩ | ೨ | ೦.೩೦ |
| ೨೦೦೩–೦೪ | ೩ | ೦.೪೫ |
| ೨೦೦೪–೦೫ | ೨ | ೧.೧೫ |

*ಮಾಹಿತಿ: ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮಂಗಳೂರು.*

## ಪಿಂಚಣಿ ಇತ್ಯರ್ಥ

ಜಿಲ್ಲೆಯಲ್ಲಿ ೨೦೦೩–೦೬ರ ಅವಧಿಯಲ್ಲಿ ಮಾಜಿ ಸೈನಿಕರಿಂದ ಪಿಂಚಣಿ ಇತ್ಯರ್ಥಕ್ಕಾಗಿ ಸ್ವೀಕರಿಸಿದ ಅರ್ಜಿಗಳು ಮತ್ತು ಈ ಇಲಾಖೆಯ ಮೂಲಕ ಇತ್ಯರ್ಥಗೊಳಿಸಿದ ಅರ್ಜಿಗಳು ಮತ್ತು ಆದ ಖರ್ಚಿನ ವಿವರವನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೭ : ಮಾಜಿ ಸೈನಿಕರ ಪಿಂಚಣಿ ವಿವರ**

| ವರ್ಷ | ಪಿಂಚಣಿಗಾಗಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ಇತ್ಯರ್ಥಗೊಳಿಸಿದ ಅರ್ಜಿಗಳ ಸಂಖ್ಯೆ | ಇತ್ಯರ್ಥಗೊಳ್ಳದೇ ಬಾಕಿ ಅರ್ಜಿಗಳ ಸಂಖ್ಯೆ | ಖರ್ಚಾದ ಮೊತ್ತ ಉಳಿದ |
|---|---|---|---|---|
| ೨೦೦೨-೦೩ | ೩ | ೩ | - | - |
| ೨೦೦೩-೦೪ | ೧ | ೧ | - | - |
| ೨೦೦೪-೦೫ | ೩ | ೧ | ೨ | - |

*ಮಾಹಿತಿ : ಉಪನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮಂಗಳೂರು.*

**ಸಶಸ್ತ್ರ ಪಡೆಗಳ ಧ್ವಜ ನಿಧಿ :** ಸ್ವಾತಂತ್ರ್ಯ ಪೂರ್ವದಲ್ಲಿ ಮಾಜಿ ಸೈನಿಕರ ಕಲ್ಯಾಣಕ್ಕಾಗಿ ನಿಧಿಯನ್ನು ಸಂಗ್ರಹಿಸಲು ಪ್ರತಿ ವರ್ಷ ಹನ್ನೊಂದನೇ ನವೆಂಬರ್‌ನಂದು 'ಸ್ಮರಣೆಯ ದಿನ' ಎಂದು ಆಚರಿಸಲಾಗುತ್ತಿತ್ತು. ೧೯೪೯ರ ಆಗಸ್ಟ್ ಇಪತ್ತೆಂಟರಂದು ರಕ್ಷಾ ಮಂತ್ರಿಗಳ ಕಮಿಟಿಯು ೧೯೪೯ರ ನಂತರ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು, ದೇಶಾದ್ಯಂತ ಏಳನೇ ಡಿಸೆಂಬರ್‌ನಂದು ಆಚರಿಸಬೇಕೆಂದು ನಿರ್ಧರಿಸಿತು. ಅದರಂತೆ, ಈ ಇಲಾಖೆಯಿಂದ ಪ್ರತಿ ವರ್ಷ ಡಿಸೆಂಬರ್ ಏಳರಂದು ಈ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆ ದಿನ ಸಶಸ್ತ್ರ ಪಡೆಗಳ ಸಾಂಕೇತಿಕ ಮತ್ತು ವಾಹನ ಧ್ವಜಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಮತ್ತು ಸಶಸ್ತ್ರ ಪಡೆಗಳು ಮಾಡಿರುವ ಸೇವೆ ಹಾಗೂ ತ್ಯಾಗಗಳ ಕುರಿತು ವಿವಿಧ ಮಾಧ್ಯಮಗಳ ಮೂಲಕ ಜನರ ಅರಿವಿಗೆ ತರಲಾಗುವುದು. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ಸೇನೆಯ ಯೂನಿಟ್‌ಗಳಲ್ಲಿ; ನಾಟಕ, ವಿವಿಧ ವಿನೋದ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುವುದು. ಅಂದು ಎಲ್ಲಾ ವರ್ಗದ ಜನರು, 'ಸಶಸ್ತ್ರ ಪಡೆಗಳ ಧ್ವಜ ನಿಧಿ'ಗೆ ತಮ್ಮ ದೇಣಿಗೆಯನ್ನು ನೀಡಿ, ದೇಶಕ್ಕಾಗಿ ಜೀವ ತೆತ್ತ ಹುತಾತ್ಮ ಯೋಧರಿಗೆ ತಮ್ಮ ಗೌರವಗಳನ್ನು ಮತ್ತು ದೇಶದ ಬಗೆಗಿನ ಕಾಳಜಿ ಹಾಗೂ ಭಕ್ತಿಯನ್ನು ಸೂಚಿಸಲು ಸರ್ಕಾರವು ಒದಗಿಸಿರುವ ಒಂದು ಸದವಕಾಶವಿದು. ಈ ಒಂದು ದಿನವಲ್ಲದೆ, ನಾಗರಿಕರು ವರ್ಷ ಪೂರ್ತಿ ಈ ನಿಧಿಗೆ ದೇಣಿಗೆಯನ್ನು ನೀಡಬಹುದು. ಈ ದೇಣಿಗೆ ನೀಡುವವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗುತ್ತದೆ. ಸರ್ಕಾರಿ ಕಛೇರಿಗಳು, ಶಾಲಾ, ಕಾಲೇಜುಗಳಿಗೆ ಮತ್ತಿತರರಿಗೆ ಬಾವುಟಗಳನ್ನು ಮಾರಿ ಹಣ ಸಂಗ್ರಹಿಸಲಾಗುತ್ತದೆ. ಈ ಮೂಲಕ ಸಂಗ್ರಹಿಸಿದ ನಿಧಿಯ ಹಣವನ್ನು ಮಾಜಿ ಸೈನಿಕರಿಗೆ, ಅವರ ಅವಲಂಬಿತರಿಗೆ, ಗಾಯಗೊಂಡವರಿಗೆ, ಅವರುಗಳ ವೈದ್ಯಕೀಯ ಮರುಪಾವತಿಗೆ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾಗುತ್ತದೆ.

**ಕೋಷ್ಟಕ ೧೬.೫೮ : ಬಾವುಟಗಳ ಮಾರಾಟ, ಜಾಹಿರಾತು ಮೂಲಕ ನಿಧಿ ಸಂಗ್ರಹಣೆಯಾದ ವಿವರ**

| ವರ್ಷ | ಕಾರ್ಯಕ್ರಮಗಳ ಹೆಸರು | ಸಂಗ್ರಹಿಸಲಾದ ಹಣ |
|---|---|---|
| ೨೦೦೨-೦೩ | ನೇರವಾಗಿ ಸರ್ಕಾರಿ ಕಛೇರಿ ಮತ್ತು | ೩,೮೯,೯೮೫ |
| ೨೦೦೩-೦೪ | ಶಾಲಾ ಕಾಲೇಜುಗಳಿಂದ | ೩,೩೭,೫೯೦ |
| ೨೦೦೪-೦೫ | | ೩,೦೫,೬೨೫ |

*ಮಾಹಿತಿ: ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ, ಮಂಗಳೂರು*

**ವಿದ್ಯಾರ್ಥಿವೇತನ :** ಸೇನೆಯಲ್ಲಿ ದುಡಿಯುವವರು ಮತ್ತು ಸೇನಾ ನಿವೃತ್ತರ ಮಕ್ಕಳಿಗೆ ಹಾಗೂ ಅವರ ಅವಲಂಬಿಗಳಿಗೆ ಪೂರ್ಣ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲಾಗುತ್ತದೆ. ಈ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು, ಅವರಿಗೆ ನಿಗದಿತ ನಿಯಮಗಳನ್ನನುಸರಿಸಿ, ವಿದ್ಯಾರ್ಥಿವೇತನವನ್ನೂ ಮತ್ತು ಪುಸ್ತಕ ನೆರವನ್ನೂ ನೀಡಲಾಗುತ್ತದೆ. ಮಾಜಿ ಸೈನಿಕರ ಮಕ್ಕಳಿಗಾಗಿ ಜಿಲ್ಲೆಯಲ್ಲಿ ಯಾವುದೇ ಮಿಲಿಟರಿ ಶಾಲೆಗಳಿರುವುದಿಲ್ಲ. ಮಾಜಿ ಸೈನಿಕರು ಇತರೇ ಜಿಲ್ಲೆಗಳಿಗೆ ಯಾವುದೇ ಕೆಲಸಗಳಿಗೆ ಹೋದಾಗ, ಅವರಿಗೆ ಒಳ್ಳೆಯ ಹಾಗೂ

ಎಲ್ಲ ಸೌಕರ್ಯಗಳಿರುವ ತಾತ್ಕಾಲಿಕ ವಸತಿಗೃಹಗಳಾಗಿ ಈ ಇಲಾಖೆಯಿಂದ ಕೆಲವು ಆರಾಮಗೃಹಗಳನ್ನು ನಡೆಸಲಾಗುತ್ತದೆ. ಆದರೆ ಉಡುಪಿ ಜಿಲ್ಲೆಯಲ್ಲಿ ಯಾವುದೇ ಆರಾಮಗೃಹವು ಇರುವುದಿಲ್ಲ.

**ಕೋಷ್ಟಕ ೧೬.೫೯ : ಮಾಜಿ ಸೈನಿಕರ ಮಕ್ಕಳಿಗೆ ಮಂಜೂರಾದ ವಿದ್ಯಾರ್ಥಿವೇತನ ವಿವರ**

| ವರ್ಷ | ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ತರಗತಿ | ವಿದ್ಯಾರ್ಥಿ ವೇತನದ ಒಟ್ಟು ಮೊತ್ತ |
|---|---|---|---|
| ೨೦೦೨–೦೩ | ೨೫೨ ವಿದ್ಯಾರ್ಥಿಗಳು | ಏಳನೇ ತರಗತಿ | ೧೬.೪೫೪/– |
| | | ಹತ್ತನೇ ತರಗತಿ | ೧೬.೧೫೪/– |
| | | ಹನ್ನೊಂದನೇ ತರಗತಿ | ೧೨.೪೦೦/– |
| | | ಹನ್ನೆರಡನೇ ತರಗತಿ | ೧೦,೩೭೦/– |
| | | ಬಿ.ಎ/ಬಿ.ಕಾಂ/ಬಿಎಸ್ಸಿ | ೨೦,೪೧೫/– |
| | | ವೃತ್ತಿಪರ ಕೋರ್ಸ್ | ೯,೪೨೨/– |
| | | ಒಟ್ಟು | **೧,೩೫,೨೧೫/ –** |
| ೨೦೦೩–೦೪ | ೨೩೫ ವಿದ್ಯಾರ್ಥಿಗಳು | ಏಳನೇ ತರಗತಿ | ೧೫,೮೬೫/– |
| | | ಹತ್ತನೇ ತರಗತಿ | ೧೪,೭೮೧/– |
| | | ಹನ್ನೊಂದನೇ ತರಗತಿ | ೧೪,೭೫೦/– |
| | | ಹನ್ನೆರಡನೇ ತರಗತಿ | ೮,೭೨೦/– |
| | | ಬಿ.ಎ/ಬಿ.ಕಾಂ/ಬಿಎಸ್ಸಿ | ೧೮,೧೦೦/– |
| | | ವೃತ್ತಿಪರ ಕೋರ್ಸ್ | ೩೮,೫೩೧/– |
| | | ಒಟ್ಟು | **೧,೧೦,೭೪೭/ –** |
| ೨೦೦೪–೦೫ | ೨೨೭ ವಿದ್ಯಾರ್ಥಿಗಳು | ಏಳನೇ ತರಗತಿ | ೧೫,೪೪೭/– |
| | | ಹತ್ತನೇ ತರಗತಿ | ೧೩,೫೭೭/– |
| | | ಹನ್ನೊಂದನೇ ತರಗತಿ | ೧೧,೨೪೦/– |
| | | ಹನ್ನೆರಡನೇ ತರಗತಿ | ೧೧,೩೯೦/– |
| | | ವೃತ್ತಿಪರ ಕೋರ್ಸ್ | ೧೮,೨೪೫/– |
| | | ಬಿ.ಎ/ಬಿ.ಕಾಂ/ಬಿಎಸ್ಸಿ | ೪೯,೯೭೬/– |
| | | ಒಟ್ಟು | **೧,೧೯,೮೭೫/–** |

**ಭೂಮಿ, ಮನೆ ಮತ್ತು ನಿವೇಶನಗಳು :** ಯುದ್ಧ ಕ್ಷೇತ್ರದಲ್ಲಿ ಅಥವಾ ಯುದ್ಧಕ್ಕೆ ಸಮನಾದ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ವಿಧವೆಯರಿಗೆ, ಅಥವಾ ಅವರ ತಂದೆ–ತಾಯಿಯರಿಗೆ, ಎಕ್ಸ್‌ಗ್ರೇಷಿಯಾ ಮೊತ್ತವಾಗಿ ಎರಡು ಲಕ್ಷ ರೂಪಾಯಿಗಳನ್ನು ಮತ್ತು ಪರಿಹಾರವಾಗಿ, ಕಟ್ಟಿದ ಮನೆಯನ್ನು ಅಥವಾ ಅದಕ್ಕೆ ಬದಲಾಗಿ ಮಡಿದವರ ಹುದ್ದೆಗನುಗುಣವಾಗಿ ನಿಗದಿತ ಮೊತ್ತವನ್ನು ನೀಡುವ ಒಂದು ಯೋಜನೆಯೂ ಈ ಇಲಾಖೆಯಲ್ಲಿ ಚಾಲ್ತಿಯಲ್ಲಿದೆ.

**ಯುದ್ಧ ಪ್ರಶಸ್ತಿಗಳು :** ಸೇನೆಯಲ್ಲಿ ಸೇವೆ ಸಲ್ಲಿಸಲು ಸೇರಿಸುವ ತಂದೆ ತಾಯಿಯರಿಗೆ, ಅವರ ಒಪ್ಪಿಗೆ, ಧೈರ್ಯ ಮತ್ತು ತ್ಯಾಗಗಳನ್ನು ಗುರುತಿಸಿ, ಯುದ್ಧ ಪ್ರಶಸ್ತಿ ಎಂಬ ಹೆಸರಿನಲ್ಲಿ ನಿಗದಿತ ಮೊತ್ತವನ್ನು ವರ್ಷಾಸನವಾಗಿ ನೀಡುವಂತಹ ಒಂದು ಯೋಜನೆ ಇದು. ಕುಟುಂಬದಲ್ಲಿ ಮೂರು ಮಕ್ಕಳು ರಕ್ಷಣಾ ಪಡೆಯಲ್ಲಿದ್ದರೆ ರೂ. ೮೫೦/–ಗಳನ್ನು; ಇಬ್ಬರು ಮಕ್ಕಳಿದ್ದರೆ ರೂ.೬೫೦/– ಗಳನ್ನು ಮತ್ತು ಒಬ್ಬ ಮಗ ಮಾತ್ರ ಇದ್ದರೆ ರೂ. ೪೫೦/–ಗಳನ್ನು ಈ ಸೈನಿಕರ ಕುಟುಂಬ ಪಾಲಕರಿಗೆ ವಾರ್ಷಿಕವಾಗಿ ನೀಡಲಾಗುತ್ತದೆ. ಆದರೆ ಉಡುಪಿ ಜಿಲ್ಲೆಯಲ್ಲಿ ಈ ಯುದ್ಧ ಪ್ರಶಸ್ತಿಯನ್ನು ಪಡೆಯುತ್ತಿರುವವರು ಯಾರೂ ಇರುವುದಿಲ್ಲ.

**ಮಾಜಿ ಸೈನಿಕರ ಮರು ನೇಮಕಾತಿಗೆ ನೆರವು** : ಅ) ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಎಲ್ಲ ಹುದ್ದೆಗಳನ್ನೂ, ಮಾಜಿ ಸೈನಿಕರು ಮತ್ತು ಸೇವಾ ನಿವೃತ್ತರು, ಇವರುಗಳಿಂದಲೇ ತುಂಬಲಾಗುತ್ತದೆ. ಆದರೆ ಈ ಒಂದು ಇಲಾಖೆಯಲ್ಲಿಯೇ ಎಲ್ಲರನ್ನೂ ನೇಮಿಸಿಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ, ಖಾಸಗಿ ಮತ್ತು ಸರ್ಕಾರದ ಇತರ ಸಂಸ್ಥೆ ಹಾಗೂ ಇಲಾಖೆಗಳಲ್ಲೂ ಇವರನ್ನು ನೇಮಿಸಿಕೊಳ್ಳಲು ಹಲವು ರೀತಿಯಲ್ಲಿ ಈ ಇಲಾಖೆಯು ಸಾಧ್ಯವಾದ ಸಹಾಯವನ್ನು ಮಾಡುತ್ತದೆ. ನೌಕರಿಗೆ ಸೇರ ಬಯಸುವ ಮಾಜಿ ಸೈನಿಕರು, ಬೆಂಗಳೂರಿನಲ್ಲಿರುವ ನಿರ್ದೇಶಕರನ್ನು ಅಥವಾ ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರನ್ನು ಸಂಪರ್ಕಿಸಿ, ನೊಂದಣಿ ಮಾಡಿಸಬೇಕು. ಆ) ಸರ್ಕಾರದ ಎ, ಬಿ, ಸಿ ಮತ್ತು ಡಿ ದರ್ಜೆಯ ನೇಮಕಾತಿಗಳಲ್ಲಿ ಪ್ರತಿ ಹತ್ತನೇ ಹುದ್ದೆಗೆ ಒಬ್ಬರಂತೆ, ಶೇಕಡ ಹತ್ತು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಮೀಸಲಿರಿಸಲು ಕರ್ನಾಟಕ ಸರ್ಕಾರವು ಆದೇಶ ಮಾಡಿದ್ದು ಜಾರಿಯಲ್ಲಿದೆ. ಅದರಂತೆ ಸರ್ಕಾರದ ಯಾವುದೇ ಇಲಾಖೆಯಲ್ಲಿ ಮತ್ತು ರಾಜ್ಯಾಧೀನ ಸಾರ್ವಜನಿಕ ಉದ್ದಿಮೆ ಸಂಸ್ಥೆಗಳಲ್ಲಿ ಮಾಜಿ ಸೈನಿಕರಿಗೆ ಶೇಕಡ ಹತ್ತರಷ್ಟು ಹುದ್ದೆಗಳನ್ನು ಮೀಸಲಿಟ್ಟು ಭರ್ತಿ ಮಾಡುವುದು ಕಡ್ಡಾಯವಾಗಿ ಜಾರಿಗೊಳ್ಳುತ್ತಿರುವ ಒಂದು ನಿಯಮ.

## ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ಮುಖ್ಯ ಪರಿವೀಕ್ಷಕರು, ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ಮುಖ್ಯಸ್ಥರಾಗಿದ್ದು, ಆಡಳಿತ ಹಾಗೂ ತಾಂತ್ರಿಕ ವಿಭಾಗಗಳೆರಡೂ ಅವರ ನಿಯಂತ್ರಣದಲ್ಲಿರುತ್ತವೆ. ಜಿಲ್ಲಾ ಮಟ್ಟದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ವಹಣೆ ಪ್ರತ್ಯೇಕವಾಗಿದ್ದು, ಆ ವಿಭಾಗಗಳಿಗೆ ಪ್ರತ್ಯೇಕ ಅಧಿಕಾರಿಗಳಿರುತ್ತಾರೆ. ಬಾಯ್ಲರುಗಳ ವಿಭಾಗವನ್ನು ಹಿರಿಯ ಸಹಾಯಕ ನಿರ್ದೇಶಕರೂ; ಕಾರ್ಖಾನೆಗಳ ವಿಭಾಗವನ್ನು ಉಪ ಮುಖ್ಯ ಪರಿವೀಕ್ಷಕರೂ ನಿರ್ವಹಿಸುತ್ತಿದ್ದಾರೆ.

**ಬಾಯ್ಲರುಗಳ ಇಲಾಖೆ :** ಕಾರ್ಖಾನೆ ಹಾಗೂ ಬಾಯ್ಲರುಗಳ ಇಲಾಖೆಯ ಮಂಗಳೂರು ವಿಭಾಗವು ಕರ್ನಾಟಕ ಸರ್ಕಾರದ ಆದೇಶ ದಿ.೧೮.೦೨.೧೯೯೫ರ ಪ್ರಕಾರ ದಿ.೨೦.೦೨.೧೯೯೫ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿದ್ದು, ದಕ್ಷಿಣ ಕನ್ನಡ, ಉಡುಪಿ, ಹಾಸನ ಹಾಗೂ ಕೊಡಗು ಕಂದಾಯ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುತ್ತದೆ. ಬಾಯ್ಲರುಗಳ ಪರಿವೀಕ್ಷಣೆಗೆ ಸಂಬಂಧಿಸಿದಂತೆ ಶಿವಮೊಗ್ಗದಲ್ಲಿ ವಿಭಾಗೀಯ ಕಛೇರಿ ಇದ್ದು, ಅವಿಭಜಿತ ದಕ್ಷಿಣ ಕನ್ನಡದಲ್ಲಿ, ಬೃಹತ್ ಕೈಗಾರಿಕೆಗಳಾದ, ಮೆ॥ ಮಂಗಳೂರು ರೀಫೈನರಿ ಅಂಡ್ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್, ಮೆ॥ ಕಿಸ್ಕೊ ಲಿಮಿಟೆಡ್, ಮೆ॥ ಬಿ.ಎ.ಎಸ್.ಎಫ್(ಇಂ)ಲಿ. ಮುಂತಾದ ಕಾರ್ಖಾನೆಗಳು ಸ್ಥಾಪನಾ ಹಂತದಲ್ಲಿ ಇದ್ದುದರಿಂದ, ಇವುಗಳಲ್ಲಿರುವ ಬೃಹತ್ ಬಾಯ್ಲರುಗಳ ನಿರ್ಮಾಣ ಹಾಗೂ ಪರಿವೀಕ್ಷಣಾ ಕಾರ್ಯವು ಸುಗಮವಾಗಿ ಆಗಲೆಂಬ ದೃಷ್ಟಿಯಿಂದ ೧೯೯೫ರ ನಂತರದಲ್ಲಿ ಮಂಗಳೂರಿನ ವಿಭಾಗೀಯ ಕಛೇರಿಯನ್ನು ಸ್ಥಾಪಿಸಿ, ಉಡುಪಿ ಜಿಲ್ಲೆಯನ್ನು ಸದರಿ ಕಛೇರಿಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಬಾಯ್ಲರಿನ ತಯಾರಿಕೆಯ ಸಮಯದಲ್ಲಿ ವಿವಿಧ ಹಂತದ ಪರಿವೀಕ್ಷಣೆ, ವೆಲ್ಡರ್‌ಗಳ ಅರ್ಹತಾ ಪರೀಕ್ಷೆ, ಬಾಯ್ಲರುಗಳ ಡಿಸೈನ್, ಮೆಟೀರಿಯಲ್, ತಯಾರಿಕಾ ಗುಣಮಟ್ಟ, ಮುಂತಾದವುಗಳ ಬಗ್ಗೆ, ಭಾರತೀಯ ಬಾಯ್ಲರ್ ರೆಗ್ಯುಲೇಷನ್ ೧೯೫೦ರ ನಿಯಮಗಳಲ್ಲಿ ಮಾರ್ಗದರ್ಶನವಿದೆ. ಬಾಯ್ಲರುಗಳಿಂದ ಆಗಬಹುದಾದ ಅಪಘಾತಗಳನ್ನು ತಡೆದು, ಸುರಕ್ಷತೆಗೆ ಉತ್ತೇಜನ ನೀಡಿ, ಸಾರ್ವಜನಿಕರ ಜೀವ ಮತ್ತು ಆಸ್ತಿ–ಪಾಸ್ತಿಗಳನ್ನು ಸಂರಕ್ಷಿಸುವುದು ಬಾಯ್ಲರುಗಳ ವಿಭಾಗದ ಕರ್ತವ್ಯವಾಗಿರುತ್ತದೆ. ಬಾಯ್ಲರುಗಳ ಪರಿವೀಕ್ಷಕರ ವ್ಯಾಪ್ತಿಯಲ್ಲಿ ಕೆಳಕಂಡ ನಿಯಮಗಳನ್ನು ಜಾರಿಗೊಳಿಸಲಾಗುತ್ತದೆ. ೧) ದಿ ಇಂಡಿಯನ್ ಬಾಯ್ಲರ್ ಆಕ್ಟ್ ೧೯೨೩ ೨) ದಿ ಇಂಡಿಯನ್ ಬಾಯ್ಲರ್ ರೆಗ್ಯುಲೇಷನ್ ೧೯೫೦, ೩) ದಿ ಕರ್ನಾಟಕ ರೂಲ್ಸ್, ೧೯೮೨ ೪) ದಿ ಕರ್ನಾಟಕ ಎಕನಾಮೈಸರ್ ರೂಲ್ಸ್ ೧೯೫೭, ೫) ದಿ ಕರ್ನಾಟಕ ಬಾಯ್ಲರ್ ಆಪರೇಷನ್ ಎಂಜಿನಿಯರ್ಸ್ ರೂಲ್ಸ್ ೧೯೫೯, ಮತ್ತು ೬) ದಿ ಕರ್ನಾಟಕ ಬಾಯ್ಲರ್ ಅಟೆಂಡೆಂಟ್ಸ್ ರೂಲ್ಸ್ ೧೯೬೨ರ ಪ್ರಕಾರ ೨೦೦೨–೦೫ರಲ್ಲಿ ನೊಂದಾಯಿಸಲ್ಪಟ್ಟ ಬಾಯ್ಲರುಗಳು, ಎಕಾನಮೈಸರ್‌ಗಳು ಮತ್ತು ಹಬೆಕೊಳವೆಗಳ ವಿವರಗಳನ್ನು ಕೋಷ್ಟಕ ೧೬.೬೦ ಹಾಗೂ ೧೬.೬೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೦ : ನೊಂದಾಯಿಸಲ್ಪಟ್ಟ ಬಾಯ್ಲರು, ಎಕಾನಮೈಸರ್ ಮತ್ತು ಹಬೆಕೊಳವೆಗಳ ವಿವರ**

| ವರ್ಷ | ವರ್ಷದ ಪ್ರಾರಂಭಿಕ ಬಾಯ್ಲರುಗಳ ಸಂಖ್ಯೆ | ಪ್ರಸ್ತುತ ಸಂಖ್ಯೆ | ವರ್ಷಾಂತ್ಯಕ್ಕೆ ಒಟ್ಟು ಸಂಖ್ಯೆ | ವರ್ಷದ ಪ್ರಾರಂಭಿಕ ಎಕಾನ್ ಮೈಸರ್‌ಗಳ ಸಂಖ್ಯೆ | ಪ್ರಸ್ತುತ ಸಂಖ್ಯೆ | ವರ್ಷಾಂತ್ಯಕ್ಕೆ ಒಟ್ಟು ಸಂಖ್ಯೆ | ವರ್ಷದ ಪ್ರಾರಂಭಿಕ ಹಬೆ ಕೊಳವೆಗಳ ಸಂಖ್ಯೆ | ಪ್ರಸ್ತುತ ಸಂಖ್ಯೆ | ವರ್ಷಾಂತ್ಯಕ್ಕೆ ಒಟ್ಟು ಸಂಖ್ಯೆ |
|---|---|---|---|---|---|---|---|---|---|
| ೨೦೦೨–೦೩ | ೪೪ | ೦೯ | ೫೩ | ೦೧ | – | ೦೧ | ೩೯ | ೧೧ | ೫೦ |
| ೨೦೦೩–೦೪ | ೫೩ | ೦೬ | ೫೯ | ೦೧ | – | ೦೧ | ೫೦ | ೦೫ | ೫೫ |
| ೨೦೦೪–೦೫ | ೫೯ | ೦೮ | ೬೭ | ೦೧ | – | ೦೧ | ೫೫ | ೦೮ | ೬೩ |

*(ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು ಮಂಗಳೂರು ವಿಭಾಗ, ಮಂಗಳೂರು)*

**ಕೋಷ್ಟಕ ೧೬.೬೧ : ಬಾಯ್ಲರು, ಎಕಾನ್‌ಮೈಸರ್ ಮತ್ತು ಹಬೆಕೊಳವೆಗಳ ಪರಿವೀಕ್ಷಣಾ ಶುಲ್ಕ ವಿವರ**

| ವರ್ಷ | ಬಾಯ್ಲರುಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಎಕಾನ್‌ಮೈಸರ್‌ಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಹಬೆಕೊಳವೆಗಳ ಪರಿ ವೀಕ್ಷಣೆಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಬಾಯ್ಲರುಗಳ ಬಿಡಿ ಭಾಗಗಳ ತಯಾರಿಕೆ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) |
|---|---|---|---|---|
| ೨೦೦೨–೦೩ | ೫೧,೮೫೦/– | -- | ೧೬,೬೫೦/– | -- |
| ೨೦೦೩–೦೪ | ೫೦,೫೫೦/– | -- | ೧೮,೦೫೦/– | -- |
| ೨೦೦೩–೦೪ | ೪೫,೮೫೦/– | -- | ೧೩,೫೦೦/– | -- |

*(ಹಿರಿಯ ಸಹಾಯಕ ನಿರ್ದೇಶಕರು ಬಾಯ್ಲರುಗಳ ವಿಭಾಗ, ಮಂಗಳೂರು)*

**ಕಾರ್ಖಾನೆಗಳ ಇಲಾಖೆ :** ಉಡುಪಿ ಜಿಲ್ಲೆಯ ಕಾರ್ಖಾನೆಗಳ ಪರಿವೀಕ್ಷಣೆಗೆ ಸಂಬಂಧಿಸಿದಂತೆ, ದಿ. ೨.೮.೧೯೯೯ರ ಪೂರ್ವದಲ್ಲಿ ವಿಭಾಗೀಯ ಕಛೇರಿಯು ಮಂಗಳೂರಿನಲ್ಲಿ ಮಂಗಳೂರು ವಿಭಾಗ–೨ ಎಂದು ಮೊದಲು ಕಾರ್ಯ ನಿರ್ವಹಿಸುತ್ತಿದ್ದು, ೧೯೯೮ರ ನಂತರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಟ್ಟ ಉಡುಪಿಯಲ್ಲಿ ಕಛೇರಿಯನ್ನು ಸ್ಥಾಪಿಸಲಾಯಿತು. ಸರ್ಕಾರದ ಆದೇಶ ದಿನಾಂಕ: ೮–೭–೧೯೯೯ ರನ್ವಯ, ಉಡುಪಿ ಜಿಲ್ಲೆಯಲ್ಲಿರುವ ಕಾರ್ಖಾನೆಗಳ ಪರಿವೀಕ್ಷಣಾ ಕಾರ್ಯವು ಸುಗಮವಾಗಿ ಆಗಬೇಕೆಂಬ ಉದ್ದೇಶದಿಂದ, ವಿಭಾಗೀಯ ಕಛೇರಿಯೊಂದರ ಅವಶ್ಯಕತೆಯನ್ನು ಮನಗಂಡು, ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ಉಡುಪಿ ವಿಭಾಗವು, ದಿ.೨.೮.೧೯೯೯ರಿಂದ ಉಡುಪಿಯಲ್ಲಿ ಸ್ಥಾಪನೆಗೊಂಡಿದೆ. ಇದು ಉಡುಪಿ ಕಂದಾಯ ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿತ್ತು. ದಿ.೧೭.೯.೨೦೦೪ರ ಪ್ರಕಾರ ಇಲಾಖೆಯಲ್ಲಿನ ಕಛೇರಿಗಳನ್ನು ಸಮಗ್ರವಾಗಿ ಪುನರ್ ಸಂಘಟನೆ ಮಾಡಿದ ಪರಿಣಾಮವಾಗಿ ಉಡುಪಿ ವಿಭಾಗವು ಮಂಗಳೂರಿಗೆ ಸ್ಥಳಾಂತರಗೊಂಡು ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಮಂಗಳೂರು ವಿಭಾಗ–೨ ಎನ್ನುವ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತದೆ. ಉಡುಪಿ ಜಿಲ್ಲೆ ಮತ್ತು ಮಂಗಳೂರು ಜಿಲ್ಲೆಯ ಒಂದು ಭಾಗದ ಪ್ರದೇಶವು ಈ ಕಛೇರಿಯ ವ್ಯಾಪ್ತಿಗೆ ಒಳ ಪಟ್ಟಿದ್ದು, ಈ ಪ್ರದೇಶದಲ್ಲಿ ೩೭೨ ಕಾರ್ಖಾನೆಗಳು, ಒಂಬತ್ತು ಅಪಾಯಕಾರಿ ಕಾರ್ಖಾನೆಗಳು, ಒಟ್ಟು ೩೮೧ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಕಾರ್ಖಾನೆಗಳಲ್ಲಿ, ಕೆಳಕಂಡ ಕಾಯಿದೆಗಳನ್ನು ಅನುಷ್ಠಾನಗೊಳಿಸುವುದರ ಕುರಿತು ಈ ಕಛೇರಿಯಿಂದ ಕ್ರಮ ವಹಿಸಲಾಗುತ್ತದೆ. ೧. ಕಾರ್ಖಾನೆಗಳ ಕಾಯ್ದೆ ೧೯೪೮ ೨. ಪ್ರಸೂತಿ ಸೌಲಭ್ಯ ಕಾಯ್ದೆ ೧೯೬೧ ೩. ವೇತನ ಸಂದಾಯ ಕಾಯ್ದೆ ೧೦೩೬ ೪. ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬ ೫. ಪರಿಸರ (ಸಂರಕ್ಷಣೆ) ಕಾಯ್ದೆ, ೧೯೮೬ (ಭಾಗಶಃ ಮತ್ತು ಇದರಡಿ ರೂಪಿತವಾದ ನಿಯಮಗಳು)

ಕಾರ್ಖಾನೆಗಳಲ್ಲಿನ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಪ್ರಗತಿಯ ಹಿತದೃಷ್ಟಿಯು ಈ ಕಛೇರಿಯ ಕಾರ್ಯ ನಿರ್ವಹಣೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಯಾವುದೇ ಕಾರ್ಖಾನೆಯ ನಿವೇಶನ, ಕಟ್ಟಡ ಮತ್ತು ಯಂತ್ರ ವಿನ್ಯಾಸದ ನಕ್ಷೆಗಳನ್ನು, ಬೆಳಕು ಓಡಾಡುವ ಸ್ಥಳ, ಸುತ್ತಮುತ್ತಲಿನ ಚಟುವಟಿಕೆಗಳು ಮತ್ತು ಜನವಸತಿಯನ್ನು ಪರಿಗಣನೆಗೆ ತೆಗೆದುಕೊಂಡು ಕಾರ್ಖಾನೆಯ ನೊಂದಣಿ ಮತ್ತು ನಕ್ಷೆಯ ಅನುಮೋದನೆಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ನೊಂದಾವಣೆಯಾಗಿಲ್ಲದ ಕಾರ್ಖಾನೆಗಳನ್ನು ಪತ್ತೆ ಹಚ್ಚಿ ನೊಂದಾಯಿಸಿಕೊಳ್ಳಲಾಗುತ್ತದೆ.

ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ, ಪರಿವೀಕ್ಷಿಸುವುದು, ಕಾರ್ಖಾನೆಗಳಲ್ಲಿ ಸಂಭವಿಸಿರುವ ಮಾರಣಾಂತಿಕ ಅಪಘಾತಗಳ ಬಗ್ಗೆ ತನಿಖೆ ಮಾಡುವುದು, ಅಂತಹ ಅಪಘಾತಗಳು ಪುನರ್ಘಟಿಸದ ಹಾಗೆ ಸೂಕ್ತ ಸುರಕ್ಷತೆಗಳನ್ನು ಮಾಡುವುದು, ರಾಸಾಯನಿಕ ಕಾರ್ಖಾನೆಗಳಲ್ಲಿ ಯಾವುದೇ ದುರಂತ ಸಂಭವಿಸದಂತೆ ನಿಗಾ ವಹಿಸುವುದು, ಅತೀ ಅಪಾಯಕಾರಿ ಕಾರ್ಖಾನೆಗಳಲ್ಲಿ ನಿಯತಕಾಲಿಕವಾಗಿ ಆನ್‌ಸೈಟ್ ತುರ್ತು ಪ್ರದರ್ಶನ ಏರ್ಪಡಿಸಿ, ಸಾಮರ್ಥ್ಯ ಮತ್ತು ಗುಣಮಟ್ಟಗಳ ಕುರಿತು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡುವುದು, ಹೆಚ್ಚು ಸುರಕ್ಷತಾ ದೃಷ್ಟಿಯಿಂದ ಕಾರ್ಯ ನಿರ್ವಹಿಸಲು ಕಾರ್ಖಾನೆಗಳ ಕಾರ್ಮಿಕರಿಗೆ ತರಬೇತಿ ನೀಡುವುದು, ಇವೇ ಮುಂತಾದ ಕೆಲಸಗಳನ್ನು ಈ ಇಲಾಖೆಯಿಂದ ಪರಿಣಾಮಕಾರಿಯಾಗಿ ಮಾಡಲಾಗುತ್ತದೆ. ಈ ಕಛೇರಿಯ ವ್ಯಾಪ್ತಿಯಲ್ಲಿ ೨೦೦೩-೦೬ರ ಅವಧಿಯಲ್ಲಿ ಇದ್ದ ಕಾರ್ಖಾನೆಗಳು ಮತ್ತು ಕಾರ್ಮಿಕರ ಸಂಖ್ಯೆಯನ್ನು ಕೋಷ್ಟಕ ೧೬.೬೨ ರಲ್ಲಿ ಕೊಡಲಾಗಿದೆ. ಈ ವಿಭಾಗದಿಂದ ೨೦೦೩-೦೬ರ ಅವಧಿಯಲ್ಲಿ ಮಾಡಲಾದ ಪರಿವೀಕ್ಷಣೆಯ ವಿವರಗಳನ್ನು ಮುಂದಿನ ಕೋಷ್ಟಕ ೧೬.೬೩ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೨ : ಕಾರ್ಖಾನೆಗಳು ಮತ್ತು ಕಾರ್ಮಿಕರ ವಿವರ**

| ಕ್ರ. ಸಂ. | ವರ್ಷ | ನೊಂದಾಯಿತ ಕಾರ್ಖಾನೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೧ | ೨೦೦೩ರಲ್ಲಿ | ೧೭ | ೧೧೩೫ |
| ೨ | ೨೦೦೪ರಲ್ಲಿ | ೧೭ | ೯೦೫ |
| ೩ | ೨೦೦೫ರಲ್ಲಿ | ೦೮ | ೪೧೭ |
| ೪ | ೨೦೦೬(೩೧.೩.೦೬ರವರೆಗೆ) | ೦೫ | ೧೪೬ |

*(ಮೂಲ: ಕಾರ್ಖಾನೆಗಳ ಹಿರಿಯ ಸಹಾಯಕ ಉಪ ನಿರ್ದೇಶಕರು, ಮಂಗಳೂರು ವಿಭಾಗ-೨)*

**ಕೋಷ್ಟಕ ೧೬.೬೩ : ಪರಿವೀಕ್ಷಣೆಯ ವಿವರ**

| ವರ್ಷ | ಜಂಟಿ ಪರಿವೀಕ್ಷಣೆ | ಉಪ ನಿರ್ದೇಶಕ ಪರಿವೀಕ್ಷಣೆ | ಸುರಕ್ಷತಾ ತರಬೇತಿ |
|---|---|---|---|
| ೨೦೦೩ | ೧೨ | ೧೨೪ | – |
| ೨೦೦೪ | ೦೮ | ೮೭ | – |
| ೨೦೦೫ | ೧೭ | ೧೭೩ | – |
| ೨೦೦೬ (೩೧.೩.೦೬ರ ವರೆಗೆ) | – | ೪೧ | ೦೧ |

*(ಮೂಲ: ಕಾರ್ಖಾನೆಗಳ ಹಿರಿಯ ಸಹಾಯಕ ಉಪ ನಿರ್ದೇಶಕರು, ಮಂಗಳೂರು ವಿಭಾಗ-೨)*

ಈ ವಿಭಾಗದಲ್ಲಿ ಅತೀ ಅಪಾಯಕಾರಿ ಕಾರ್ಯ ಚಟುವಟಿಕೆಯನ್ನು ಹೊಂದಿದ ಯಾವುದೇ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ, ಮೇಲಿನ ಅವಧಿಯಲ್ಲಿ ಅತೀ ಅಪಾಯಕಾರಿ ಕಾರ್ಖಾನೆಗಳ ಪರಿವೀಕ್ಷಣೆಗಳಿರುವುದಿಲ್ಲ.

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಭಾರತೀಯ ಸಂಸ್ಕೃತಿಯಲ್ಲಿ ಬಹಳ ಪೂರ್ವ ಕಾಲದಿಂದಲೂ ಬೆಳೆದು ಬಂದಂತಹ ಒಂದು ಪದ್ಧತಿ ಎಂದರೆ, ಧಾರ್ಮಿಕ ಕಾರ್ಯಗಳು ಮತ್ತು ಸಾರ್ವಜನಿಕ ಸೇವಾ ಉದ್ದೇಶಗಳಿಗೆ ಹಣ ಅಥವಾ ಜಮೀನುಗಳನ್ನು ದತ್ತಿಯಾಗಿ ನೀಡುವುದು. 'ಮುಜರಾಯಿ' ಎಂಬ ಪದವು ಪರ್ಶಿಯನ್ ಭಾಷೆಯ 'ಮುಜರ್' ಪದದಿಂದ ಬಂದಿದ್ದು ಇದರ ಅರ್ಥ ಸಾಮಾನ್ಯವಾಗಿ ಧಾರ್ಮಿಕ ಮತ್ತು ಮತ ಸಂಬಂಧವಾದ ಉದ್ದೇಶಗಳಿಗೆ ಅನ್ವಯಿಸುವಂತೆ ಭತ್ಯೆಯನ್ನು ಕೊಡುವುದಾಗಿದೆ. ಕ್ರಿ.ಶ. ೧೭೮೮ರ ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲೇ ಮುಜರಾಯಿ ಇಲಾಖೆಯ ಉಗಮವಾಗಿರುವುದನ್ನು ಕಾಣಬಹುದು. ಕರ್ನಾಟಕ ರಾಜ್ಯವು, ೧೯೫೬ರಲ್ಲಿ ಏಕೀಕರಣಗೊಳ್ಳುವವರೆಗೆ ಉಡುಪಿಯೂ ಸೇರಿದಂತೆ, ದಕ್ಷಿಣ ಕನ್ನಡ ಜಿಲ್ಲೆಯು, ಮದ್ರಾಸ್ ರಾಜ್ಯದ ಆಧಿಪತ್ಯಕ್ಕೆ ಒಳಪಟ್ಟಿತ್ತು. ಮದ್ರಾಸ್ ಕರ್ನಾಟಕ ಪ್ರಾಂತದ ಮತೀಯ ಮತ್ತು ಧಾರ್ಮಿಕ ಉಂಬಳಿಗಳ ಆಡಳಿತವನ್ನು ೧೯೫೧ರ ಮದ್ರಾಸಿನ ಮತೀಯ ಮತ್ತು ಧಾರ್ಮಿಕ ಉಂಬಳಿಗಳ ಅಧಿನಿಯಮದ ಪ್ರಕಾರ ಪರಿಪಾಲಿಸಲಾಗುತ್ತಿತ್ತು. ಅಧಿನಿಯಮಗಳ ನಿಬಂಧನೆಯನ್ವಯ ೧೯೫೬ರ ಅಕ್ಟೋಬರ್ ತಿಂಗಳ ಕೊನೆಯವರೆಗೆ ಈ ಜಿಲ್ಲೆಯು ಕೊಯಮತ್ತೂರಿನ ಹಿಂದೂ ಮತೀಯ ಮತ್ತು ಧಾರ್ಮಿಕ ಉಂಬಳಿಗಳ ಉಪ ಆಯುಕ್ತರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿತ್ತು. ಅಧಿನಿಯಮವು ಅನ್ವಯವಾಗುತ್ತಿದ್ದ ಸಂಸ್ಥೆಗಳಲ್ಲಿ ೨೦,೦೦೦ ರುಪಾಯಿಗಳ ಅಥವಾ ಅದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯವಿದ್ದ ಸಂಸ್ಥೆಗಳು ಡೆಪ್ಯೂಟಿ ಕಮಿಷನರ್‌ರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿತ್ತು. ಉಳಿದ ಸಂಸ್ಥೆಗಳು ಸಹಾಯಕ ಕಮೀಷನರ್‌ರವರ ಅಧೀನಕ್ಕೆ ಬರುತ್ತಿದ್ದವು. ೨೦,೦೦೦ ರೂಪಾಯಿಗಳ ಅಥವಾ ಅದಕ್ಕಿಂತ ಕಡಿಮೆ ವಾರ್ಷಿಕ ಆದಾಯವಿದ್ದ ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಉಸ್ತುವಾರಿಯನ್ನು ಜಿಲ್ಲೆಗಳಲ್ಲಿದ್ದ ಪ್ರಾದೇಶಿಕ ಸಮಿತಿ ನೋಡಿಕೊಳ್ಳುತ್ತಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಥೆಗಳನ್ನು ೧೯೮೧ರ ಸುಮಾರಿನಲ್ಲಿ, ಪಟ್ಟಿ ಮಾಡಿದ ಮತ್ತು ಪಟ್ಟಿ ಮಾಡದ ಸಂಸ್ಥೆಗಳೆಂದು ವರ್ಗೀಕರಿಸಲಾಗಿತ್ತು. ೨೦,೦೦೦ ರುಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯವಿದ್ದ ಸಂಸ್ಥೆಗಳು ಪಟ್ಟಿಯಲ್ಲಿ ಸೇರಿದವಾಗಿಯೂ ಉಳಿದವು ಪಟ್ಟಿ ಮಾಡದ ಸಂಸ್ಥೆಗಳಾಗಿಯೂ ಇದ್ದವು. ಪಟ್ಟಿಯಲ್ಲಿ ಸೇರಿದ ಸಂಸ್ಥೆಗಳು ಡೆಪ್ಯೂಟಿ ಕಮಿಷನರ್‌ರವರ ಅಧೀನದಲ್ಲಿದ್ದವು. ಪಟ್ಟಿ ಮಾಡದ ಸಂಸ್ಥೆಗಳು ಸರ್ಕಾರ ರಚಿಸಿದ್ದ ಪ್ರಾದೇಶಿಕ ಸಮಿತಿಗಳ ವ್ಯಾಪ್ತಿಯಲ್ಲಿದ್ದು ಇದಕ್ಕೆ ಧಾರ್ಮಿಕ ಧರ್ಮಾರ್ಥಕ ದತ್ತಿಗಳ ಅಸಿಸ್ಟೆಂಟ್ ಕಮೀಷನ್‌ರವರೇ ಅಧ್ಯಕ್ಷರಾಗಿದ್ದರು. ೧೯೮೧ರ ಅಂತ್ಯದ ವೇಳೆಗೆ ಉಡುಪಿ ಜಿಲ್ಲೆಯನ್ನೊಳಗೊಂಡ ಆಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೮೬ ಸಂಸ್ಥೆಗಳು ಗಣನೆಗೆ ಯೋಗ್ಯವಾಗಿದ್ದವು. ಜಿಲ್ಲೆಯಲ್ಲಿ ಜಾರಿಯಲ್ಲಿದ್ದ, ೧೯೫೧ರ ಮದ್ರಾಸು ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮವು ನಿರಸನಗೊಂಡು, ಈಗ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಅಧಿನಿಯಮ ೧೯೯೭ ಎಂಬ ಏಕ ರೂಪ ಕಾಯಿದೆ ಮತ್ತು ೨೦೦೨ರ ನಿಯಮಗಳು ಪಾಲನೆಯಲ್ಲಿವೆ.

ಈಗಿರುವ ವ್ಯವಸ್ಥೆಯ ಪ್ರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ, ಇಲಾಖೆಯ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಇವರು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಇಲಾಖೆಗೆ ಸೇರಿದ ಅಧಿಸೂಚಿತ ಸಂಸ್ಥೆಗಳು, ಧರ್ಮಾದಾಯ ದತ್ತಿಗಳು, ಛತ್ರಗಳು ಇವುಗಳ ಆಡಳಿತ ವ್ಯವಸ್ಥೆಯ ನಿಯಂತ್ರಣ, ಉಸ್ತುವಾರಿ ಮತ್ತು ಇವುಗಳ ಬಗ್ಗೆ ಸರ್ಕಾರದ ನೀತಿ, ನಿಯಮ ಹಾಗೂ ಆದೇಶಗಳನ್ನು ಸರ್ಕಾರದ ಪರವಾಗಿ ಕಾರ್ಯಗತಗೊಳಿಸಲು ಹೊಣೆಗಾರರಾಗಿರುತ್ತಾರೆ. ಇಲಾಖೆಯ ಇತರ ವಿವಿಧ ಪ್ರಾಧಿಕಾರಿಗಳು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ ೧೯೯೭ ಮತ್ತು ಅದರಡಿ ರೂಪಿತವಾಗಿರುವ ನಿಯಮ ೨೦೦೨ರಲ್ಲಿ ನೀಡಲಾದ ಅಧಿಕಾರದನ್ವಯ ರಾಜ್ಯಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಪ್ರತ್ಯೇಕ ಸಹಾಯಕ ಆಯುಕ್ತರ ಕಛೇರಿಯು ದಿನಾಂಕ ೧೭.೦೫.೧೯೯೮ರಿಂದ ಪ್ರಾರಂಭವಾಗಿರುತ್ತದೆ.

ಹಳೆಯ ಮೈಸೂರು ಪ್ರದೇಶದ ಮುಜರಾಯಿ ಸಂಸ್ಥೆಗಳನ್ನು ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಮೂರು ಗುಂಪುಗಳಾಗಿ ವಿಭಾಗಿಸಲಾಗಿತ್ತು. ಅವುಗಳನ್ನು ಹಿರಿಯ, ಕಿರಿಯ ಮತ್ತು ಗ್ರಾಮೀಣ ಸಂಸ್ಥೆಗಳೆಂದು ಕರೆಯಲಾಗಿತ್ತು. ಇವುಗಳಲ್ಲಿ ವಾರ್ಷಿಕ ಆದಾಯ ಒಂದು ಸಾವಿರ ರೂ.ಗಳಿಗಿಂತ ಹೆಚ್ಚಿರುವ ಸಂಸ್ಥೆಗಳನ್ನು ಹಿರಿಯ ಸಂಸ್ಥೆಗಳೆಂದೂ, ಒಂದುನೂರು ರೂಪಾಯಿಗಳಿಗಿಂತ ಹೆಚ್ಚಿರುವ ಸಂಸ್ಥೆಗಳನ್ನು ಕಿರಿಯ ಸಂಸ್ಥೆಗಳೆಂದೂ, ಒಂದು ನೂರಕ್ಕಿಂತ ಕಡಿಮೆ ಆದಾಯ ಇರುವ ಸಂಸ್ಥೆಗಳನ್ನು ಗ್ರಾಮೀಣ ಸಂಸ್ಥೆಗಳೆಂದೂ ಮತ್ತು ಹತ್ತು ಲಕ್ಷಕ್ಕಿಂತ ಹೆಚ್ಚು ಆದಾಯವಿರುವ ಸಂಸ್ಥೆಗಳನ್ನು ನಿಗದಿತ ಸಂಸ್ಥೆಗಳೆಂದೂ ವಿಂಗಡಿಸಲಾಗಿತ್ತು.

೧೯೯೭ರ ಕಾಯಿದೆಯ ವಿಧಿ ೨೩ರ ಅಡಿಯಲ್ಲಿ ಪ್ರಸ್ತುತ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮುಜರಾಯಿ ಸಂಸ್ಥೆಗಳನ್ನು ಅಧಿಸೂಚಿತ ಸಂಸ್ಥೆಗಳನ್ನಾಗಿ ಘೋಷಿಸಿ, ಸರ್ಕಾರವು ಪ್ರಕಟಣೆ ನೀಡಿರುತ್ತದೆ. ಅದರ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೮೧೧ ಅಧಿಸೂಚಿತ ಸಂಸ್ಥೆಗಳಿರುತ್ತವೆ. ನೂತನ ಕಾಯಿದೆಯನ್ವಯ ದಿ. ೧.೫.೨೦೦೩ರಿಂದ ವಾರ್ಷಿಕ ಆದಾಯದ ಆಧಾರದ ಮೇಲೆ, ಪ್ರವರ್ಗ ಎ, ಬಿ, ಮತ್ತು ಸಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅದರಂತೆ ವಾರ್ಷಿಕ ಹತ್ತು ಲಕ್ಷಕ್ಕಿಂತ ಹೆಚ್ಚಿನ ಆದಾಯವಿರುವ ಸಂಸ್ಥೆಗಳು ಪ್ರವರ್ಗ–ಎ ವಾರ್ಷಿಕ ಒಂದು ಲಕ್ಷ ರುಪಾಯಿಗಿಂತ ಹೆಚ್ಚು ಆದರೆ ಹತ್ತು ಲಕ್ಷ ರುಪಾಯಿಗಳಿಗಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ–ಬಿ ಹಾಗೂ ವಾರ್ಷಿಕ ಒಂದು ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ–ಸಿ ಅಡಿಯಲ್ಲಿ ಬರುತ್ತವೆ.

ಉಡುಪಿ ಜಿಲ್ಲೆಯಲ್ಲಿ ಒಟ್ಟು ೮೧೧ ದೇವಾಲಯಗಳಿದ್ದು, ಅವುಗಳಲ್ಲಿ ಎ ಗುಂಪಿನಲ್ಲಿ ಹನ್ನೊಂದು ಅಧಿಸೂಚಿತ ಸಂಸ್ಥೆಗಳೂ; ಬಿ ಗುಂಪಿನಲ್ಲಿ ನಲವತ್ತಾರು ಅಧಿಸೂಚಿತ ಸಂಸ್ಥೆಗಳೂ; ಸಿ ಗುಂಪಿನಲ್ಲಿ ೭೫೪ ಅಧಿಸೂಚಿತ ಸಂಸ್ಥೆಗಳೂ ಇರುತ್ತವೆ. ಎ, ಬಿ ಮತ್ತು ಸಿ ಪ್ರವರ್ಗದ ಸಂಸ್ಥೆಗಳಿಗೆ ಅನುಕ್ರಮವಾಗಿ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರನ್ನು ನಿಯಮಿತ ಪ್ರಾಧಿಕಾರಗಳೆಂದು ನಿರ್ದಿಷ್ಟಪಡಿಸಲಾಗಿದೆ.

ನೂತನ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ, ಈ ಜಿಲ್ಲೆಯ ಮೂರೂ ತಾಲೂಕುಗಳ ಕೆಲವು ಸಂಸ್ಥೆಗಳ ಆಡಳಿತದಾರರು ಹಾಗೂ ಅರ್ಚಕರು ವಿವಿಧ ನ್ಯಾಯಾಲಯಗಳಲ್ಲಿ ದಾವೆ ಹೂಡಿ, ಕಾಯಿದೆಯ ಕೆಲವು ವಿಧಿ ನಿಯಮಗಳಿಗೆ ತಡೆಯಾಜ್ಞೆ ತಂದಿರುವುದರಿಂದ ಮತ್ತು ಈ ದಾವೆಗಳು ಸಂಪೂರ್ಣ ಇತ್ಯರ್ಥವಾಗದಿರುವುದರಿಂದ, ನೂತನ ಕಾಯಿದೆಯನ್ನು ಪರಿಪೂರ್ಣವಾಗಿ ಜಾರಿಗೊಳಿಸಲು ಸಾಧ್ಯವಾಗಿಲ್ಲ. ತಡೆಯಾಜ್ಞೆ ಪಡೆದ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವ ಮೂಲಕ ಹಾಗೂ ಪಡೆಯದ ಸಂಸ್ಥೆಗಳಿಗೆ ಕಾರ್ಯ ನಿರ್ವಹಣಾ ಅಧಿಕಾರಿಗಳನ್ನು ನೇಮಿಸುವ ಮೂಲಕ, ದೇವಸ್ಥಾನಗಳ ಆಡಳಿತವನ್ನು ನೋಡಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

**ಕೋಷ್ಟಕ ೧೬.೬೪ : ಎ, ಬಿ, ಸಿ ಪ್ರವರ್ಗದ ಅಧಿಸೂಚಿತ ಸಂಸ್ಥೆಗಳ ವಿವರ (೨೦೦೪–೦೫)**

| ಕ್ರ. ಸಂ. | ತಾಲೂಕು | ಪ್ರವರ್ಗ 'ಎ" | ಪ್ರವರ್ಗ 'ಬಿ' | ಪ್ರವರ್ಗ 'ಸಿ' | ಒಟ್ಟು |
|---|---|---|---|---|---|
| ೧ | ಉಡುಪಿ | ೮ | ೧೯ | ೪೪೯ | ೪೭೬ |
| ೨ | ಕುಂದಾಪುರ | ೩ | ೧೫ | ೨೩೩ | ೨೫೧ |
| ೩ | ಕಾರ್ಕಳ | – | ೧೨ | ೭೨ | ೮೪ |
| | ಒಟ್ಟು | ೧೧ | ೪೬ | ೭೫೪ | ೮೧೧ |

*ಮಾಹಿತಿ : ಸಹಾಯಕ ಆಯುಕ್ತರು. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ*

ನೂತನ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ, ಈ ಜಿಲ್ಲೆಯ ಕೆಲವು ಸಂಸ್ಥೆಗಳ ಆಡಳಿತದಾರರು ತಡೆಯಾಜ್ಞೆ ತಂದಿರುವುದರಿಂದ, ದಿ.೧.೫.೨೦೦೩ರ ಪೂರ್ವದಲ್ಲಿ ಜಾರಿಯಲ್ಲಿದ್ದ ಕಾನೂನಿನ ಪ್ರಕಾರ

ಧಾರ್ಮಿಕ ಸಂಸ್ಥೆಗಳ ಆದಾಯಕ್ಕೆ ನಿಯಮಾನುಸಾರ ಕರ ನಿಗದಿಸಿ ವಂತಿಗೆ ಮತ್ತು ಆಡಿಟ್ ಶುಲ್ಕವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮೆ ಮಾಡಲಾಗುತ್ತಿತ್ತು. ಅದರಂತೆ ೨೦೦೧–೦೨, ೨೦೦೨–೦೩ ಮತ್ತು ೨೦೦೩–೦೪ರ ಸಾಲಿನಲ್ಲಿ ಸರ್ಕಾರಕ್ಕೆ ಜಮೆಯಾದ ಇಲಾಖಾ ವಂತಿಗೆ ಮತ್ತು ಆಡಿಟ್ ಶುಲ್ಕದ ವಿವರಗಳನ್ನು ಕೋಷ್ಟಕ ೧೬.೬೫ ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೬೫ : ಸರ್ಕಾರಕ್ಕೆ ಜಮೆಯಾದ ಇಲಾಖಾ ವಂತಿಗೆ ಮತ್ತು ಆಡಿಟ್ ಶುಲ್ಕದ ವಿವರ**

| ವರ್ಷ | ಇಲಾಖಾ ವಂತಿಗೆ ರೂ. ಗಳಲ್ಲಿ | ಆಡಿಟ್ ಶುಲ್ಕ ರೂ. ಗಳಲ್ಲಿ | ಒಟ್ಟು ರೂ. ಗಳಲ್ಲಿ |
|---|---|---|---|
| ೨೦೦೧–೦೨ | ೨೬,೩೫,೫೪೧=೦೦ | ೫,೮೦,೬೯೫=೦೦ | ೩೨,೧೬,೨೩೬=೦೦ |
| ೨೦೦೨–೦೩ | ೧೩,೯೫,೩೭೯=೦೦ | ೨,೩೫,೦೭೬=೦೦ | ೧೬,೩೦.೪೫೫=೦೦ |
| ೨೦೦೩–೦೪ | ೧೮,೧೨,೭೪೨=೦೦ | ೨,೦೦,೩೮೦=೦೦ | ೨೦,೧೩,೧೨೨=೦೦ |

***ಮಾಹಿತಿ :** ಸಹಾಯಕ ಆಯುಕ್ತರು. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ*

ಪ್ರಸ್ತುತ ಜಾರಿಗೆ ಬಂದಿರುವ ನೂತನ ಕಾಯಿದೆಯು ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಇಲ್ಲವೇ ಹಿಂದೂ ಧಾರ್ಮಿಕ ಪಂಗಡವೊಂದು ಸ್ಥಾಪಿಸಿರುವ, ವ್ಯವಸ್ಥೆಗೊಳಿಸಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ಧಾರ್ಮಿಕ ಸಂಸ್ಥೆಗಳು ಅಥವಾ ಧರ್ಮಾದಾಯ ದತ್ತಿಗೆ ಅನ್ವಯಿಸುವುದಿಲ್ಲ. ಬಸದಿಗಳು ಮತ್ತು ಮಹಮ್ಮದೀಯ ಸಂಸ್ಥೆಗಳು ಹಿಂದಿನಿಂದಲೂ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಪ್ರತ್ಯೇಕ ಧರ್ಮ ಛತ್ರಗಳೂ ಜಿಲ್ಲೆಯಲ್ಲಿ ಇಲಾಖಾ ವ್ಯಾಪ್ತಿಗೆ ಒಳ ಪಟ್ಟಂತೆ ಇದ್ದಿರಲ್ಲಿಲ್ಲ. ಈ ಹಿಂದೆ, ಜಿಲ್ಲೆಯ ಉಡುಪಿ ತಾಲೂಕಿನಲ್ಲಿ ಹನ್ನೊಂದು ಮಠಗಳೂ : ಕುಂದಾಪುರ ತಾಲೂಕಿನಲ್ಲಿ ಎರಡು ಮಠಗಳೂ; ಕಾರ್ಕಳ ತಾಲೂಕಿನಲ್ಲಿ ಒಂದು ಮಠವೂ; ಒಟ್ಟು ಜಿಲ್ಲೆಯಲ್ಲಿ ಹದಿನಾಲ್ಕು ಮಠಗಳಿದ್ದು ಇವು ಒಂದೇ ವರ್ಗದ ಜನರಿಗೆ ಸಂಬಂಧಿಸಿರುವುದರಿಂದ, ೧೯೯೭ರ ಕಾಯಿದೆಯನ್ವಯ ಇಲಾಖೆಯ ಆಡಳಿತ ವ್ಯಾಪ್ತಿಯಿಂದ ಹೊರತು ಪಡಿಸಲಾಗಿದೆ. ಇದೇ ರೀತಿ ಉಡುಪಿ ತಾಲೂಕಿನಲ್ಲಿದ್ದ ೨೩ದೇವಳಗಳು; ಕುಂದಾಪುರ ತಾಲೂಕಿನಲ್ಲಿದ್ದ ಐದು; ಕಾರ್ಕಳ ತಾಲೂಕಿನಲ್ಲಿದ್ದ ಹನ್ನೊಂದು; ಒಟ್ಟು ಜಿಲ್ಲೆಯ ಮುವತ್ತೊಂಬತ್ತು ದೇವಳಗಳು ಒಂದೇ ವರ್ಗದ ಜನರಿಗೆ ಸಂಬಂಧಿಸಿದವೆಂಬ ಕಾರಣಕ್ಕೆ, ಸಂಬಂಧಿಸಿದ ಜನಾಂಗದವರಿಗೆ ವಹಿಸಿಕೊಟ್ಟು ಇಲಾಖೆಯ ಆಡಳಿತದಿಂದ ಹೊರತಾಗಿಸಲಾಗಿದೆ.

೧೯೯೭ರ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯಿದೆಯಲ್ಲಿ ಸಮಾಜದಲ್ಲಿ ಸಮಾನತೆ ತರುವ ಕೆಲವಾರು ಅಂಶಗಳ ಕುರಿತೂ ನಿರ್ದೇಶನಗಳಿವೆ. ಸಾಮಾನ್ಯ ಶೇಖರಣ ನಿಧಿಯಿಂದ ಖರ್ಚು ಭರಿಸಿ, ಅರ್ಚಕರಿಗೆ ತರಬೇತಿ ನೀಡುವುದಕ್ಕಾಗಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿದ್ದು ಅದರಲ್ಲಿ ಆಸಕ್ತ ಮಹಿಳೆಯರೂ ತರಬೇತಿ ಪಡೆಯಬಹುದಾಗಿದೆ.

## ವಕ್ಫ್ ಸಂಸ್ಥೆಗಳು

೧೯೫೪ ರ ಕೇಂದ್ರ ವಕ್ಫ್ ಕಾನೂನು ೧೯೫೫ರ ಹದಿನೈದನೇ ಜನವರಿಯಿಂದ ಹಳೇ ಮೈಸೂರಿನಲ್ಲಿ ಜಾರಿಗೆ ಬಂದಿತು (ಗೆಜೆಟ್ ಆಫ್ ಇಂಡಿಯಾ – ಭಾಗ –೨) ಮತ್ತು ೧೯೫೬ರಿಂದ ಕರ್ನಾಟಕ ರಾಜ್ಯಾದ್ಯಂತ ಬಳಸಲಾಯಿತು. ೧೯೫೯, ೧೯೬೪ ಮತ್ತು ೧೯೬೮ ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ೧೯೫೪ರ ಕೇಂದ್ರ ವಕ್ಫ್ ಕಾನೂನಿಗಿಂತ ಮೊದಲು ಮೈಸೂರು ಪ್ರದೇಶದ ಮುಸಲ್ಮಾನರ ಮುಜರಾಯಿ ಸಂಸ್ಥೆಗಳ ಆಡಳಿತವು ದತ್ತಿ ಇಲಾಖೆಯ ಕೈಕೆಳಗಿತ್ತು. ಹಾಗೂ ೧೯೨೭ರ ಮೈಸೂರು ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಅಧಿನಿಯಮಗಳಿಗೆ ಒಳಪಟ್ಟಿತ್ತು ೧೯೬೧ರಲ್ಲಿ ೧೧ ಜನ ಸದಸ್ಯರಿರುವ ವಕ್ಫ್ ಮಂಡಲಿಯನ್ನು ರಚಿಸಲಾಯಿತು. ನಂತರದ ವರ್ಷಗಳಲ್ಲಿ ಹೈದರಾಬಾದ್ ಪ್ರದೇಶದಲ್ಲಿದ್ದ ಎಲ್ಲಾ ಪ್ರಾದೇಶಿಕ ಸಮಿತಿಗಳನ್ನು ರದ್ದು ಮಾಡಲಾಯಿತು. ಮುಂಬೈ ಸಾರ್ವಜನಿಕ ಟ್ರಸ್ಟ್ ಅಧಿನಿಯಮದ ಪ್ರಕಾರ

ನೋಂದಣಿಯಾಗಿದ್ದ ಎಲ್ಲಾ ಆಸ್ತಿಗಳೂ ತಾವಾಗಿಯೇ ವಕ್ಫ್ ಮಂಡಲಿಗೆ ವರ್ಗಾಯಿಸಲ್ಪಟ್ಟವು. ಮೈಸೂರು ಪ್ರದೇಶದ ದತ್ತಿ ಇಲಾಖೆಯ ವಶದಲ್ಲಿದ್ದ ೪೫೨ ಮುಸ್ಲಿಂ ಮುಜರಾಯಿ ಸಂಸ್ಥೆಗಳನ್ನೂ ವಕ್ಫ್ ಮಂಡಲಿಗೆ ವರ್ಗಾಯಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸಲ್ಮಾನರ ಮುಜರಾಯಿ ಸಂಸ್ಥೆಗಳು ಅಸ್ತಿತ್ವದಲ್ಲಿ ಇಲ್ಲದ ಕಾರಣ ಧಾರ್ಮಿಕ ಮತ್ತು ಧರ್ಮಾರ್ಥಕ ದತ್ತಿ ಇಲಾಖೆಯಿಂದ ವಕ್ಫ್ ಮಂಡಳಿಗೆ ವರ್ಗಾಯಿಸುವ ಪ್ರಶ್ನೆ ಬರಲಿಲ್ಲ. ೧೯೫೪ರ ವಕ್ಫ್ ಅಧಿನಿಯಮಕ್ಕೆ ಅನುಸಾರವಾಗಿ ಕರ್ನಾಟಕ ಸರ್ಕಾರವು ೧೯೬೪ ರಲ್ಲಿ ನಿಯಮಗಳನ್ನು ರೂಪಿಸಿತು. ಈ ಮಂಡಲಿಯನ್ನು ೧೯೬೬, ೧೯೭೭ ಮತ್ತು ೧೯೮೨ರಲ್ಲಿ ಪುನಾ ರಚಿಸಲಾಯಿತು.

ಈ ಜಿಲ್ಲೆಯ ವಕ್ಫ್ ಮಂಡಳಿಯನ್ನು ೧೯೫೪ನೇ ಮತ್ತು ೧೯೯೫ ವಕ್ಫ್ ಕಾಯಿದೆಯನ್ವಯ ರಚಿಸಲಾಗಿದೆ. ಈ ವಕ್ಫ್ ಮಂಡಳಿಗೆ ೧೯೯೫ನೇ ವಕ್ಫ್ ಕಾಯಿದೆ ಮತ್ತು ೧೯೬೪ನೇ ವಕ್ಫ್ ಕಾಯಿದೆಗಳು ಅನ್ವಯಿಸುತ್ತವೆ. ೧೯೫೪ರ ಕಾಯಿದೆ ಜಾರಿಗೆ ಬಂದಾಗಲಿಂದ ೧೯೯೫ರ ವರೆಗೆ ವಕ್ಫ್ ಸಲಹಾ ಸಮಿತಿಯ ಅವಧಿ ಎರಡು ವರ್ಷಗಳಾಗಿದ್ದು, ೧೯೯೫ರ ನಂತರದಲ್ಲಿ ಸಮಿತಿಯ ಅವಧಿ ಕೇವಲ ಒಂದು ವರ್ಷ ಮಾತ್ರವಾಗಿರುತ್ತದೆ. ಈ ಸಮಿತಿಯ ಸದಸ್ಯರ ಸಂಖ್ಯೆಗೆ ನಿಗದಿತ ಮಿತಿ ಇರುವುದಿಲ್ಲ. ಮಂಗಳೂರು ಮತ್ತು ಉಡುಪಿ ಜಿಲ್ಲೆಗೆ ಒಂದೇ ಇದ್ದ ವಕ್ಫ್ ಸಮಿತಿಯು ದಿನಾಂಕ ೨೪.೨.೨೦೦೧ರಿಂದ ಪ್ರತ್ಯೇಕಗೊಂಡು ಕಾರ್ಯಾರಂಭ ಮಾಡಿದೆ. ಪ್ರಸ್ತುತ ಇರುವ ಸಮಿತಿಯಲ್ಲಿ ಅಧ್ಯಕ್ಷರನ್ನು ಹೊರತು ಪಡಿಸಿ, ಇಪ್ಪತ್ತೆರಡು ಸದಸ್ಯರಿದ್ದಾರೆ. ಈಗ ಮಂಗಳೂರಿನ ವಕ್ಫ್ ಪರಿವೀಕ್ಷಕರೇ ಉಡುಪಿ ಜಿಲ್ಲೆಯ ವಕ್ಫ್ ಅಧಿಕಾರಿ ಪ್ರಭಾರದಲ್ಲಿದ್ದು ಕಾರ್ಯ ನಿರ್ವಹಿಸುತ್ತಿದ್ದಾರೆ. ನೊಂದಣಿ ಮಾಡಿಸಿ ಎಲ್ಲ ವಕ್ಫ್ ಸಂಸ್ಥೆಗಳು ನೊಂದಣಿಯಾದಂದಿನಿಂದ, ರಾಜ್ಯ ವಕ್ಫ್ ಮಂಡಳಿಯ ಆಸ್ತಿಯಾಗುತ್ತವೆ.

**ವಕ್ಫ್ ಅಭಿವೃದ್ಧಿ ನಿಗಮ** : ರಾಜ್ಯದ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿ ಪಡಿಸುವುದು, ವಕ್ಫ್ ಆಸ್ತಿಗಳನ್ನು ಗುತ್ತಿಗೆಗೆ ಪಡೆಯುವುದು, ಸಣ್ಣ ಕೈಗಾರಿಕೆಗಳನ್ನು ನಡೆಸಲು ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು, ಹೌಸಿಂಗ್ ಕೋ–ಆಪರೇಟಿವ್, ಬಳಕೆದಾರರ ಸಂಘ, ಕೈಗಾರಿಕಾ ಸಹಕಾರ ಸಂಘ ಮತ್ತು ರೈತರ ಸಹಕಾರ ಸಂಘಗಳ ಸ್ಥಾಪನೆಗೆ ನೆರವು ನೀಡುವುದು, ಯಾತ್ರಾರ್ಥಿಗಳಿಗೆ ಅನುಕೂಲವನ್ನು ಒದಗಿಸಲು ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡುವುದು ಮತ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು– ಇವೇ ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು, ವಕ್ಫ್ ಅಭಿವೃದ್ಧಿ ನಿಗಮವು ರಾಜ್ಯ ಮಟ್ಟದಲ್ಲಿ ಸ್ಥಾಪನೆಗೊಂಡಿದೆ. ಆದರೆ ಜಿಲ್ಲಾ ಮಟ್ಟದಲ್ಲಿ, ಈ ಜಿಲ್ಲೆಯಲ್ಲಿ ನಿಗಮದ ಯಾವುದೇ ಕಛೇರಿಯು ಅಸ್ತಿತ್ವದಲ್ಲಿರುವುದಿಲ್ಲ. ಉಡುಪಿ ಜಿಲ್ಲೆಯಲ್ಲಿನ ೧೦ ವಕ್ಫ್ ಸಂಸ್ಥೆಗಳಿಗಾಗಿ, ೨೦೦೧–೦೨ರಲ್ಲಿ ರೂ.೨.೧೦ ಲಕ್ಷ ಅನುದಾನವನ್ನು ಸರ್ಕಾರದಿಂದ ನೀಡಲಾಗಿದೆ. ಆದಾಯದ ಆಧಾರದ ಮೇಲೆ ವಕ್ಫ್ ಸಂಸ್ಥೆಗಳಿಂದ ತೆರಿಗೆಯನ್ನು ವಸೂಲಿ ಮಾಡುತ್ತಿದ್ದು, ಹೀಗೆ ಪಡೆದ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ವಕ್ಫ್ ಅಭಿವೃದ್ಧಿ ಕಾರ್ಪೋರೇಷನ್ :** ಮಂಡಲಿಯು ಕರ್ನಾಟಕ ಸರ್ಕಾರದ ಅನುಮತಿಯನ್ನು ಪಡೆದು ೧೯೭೮ ರಲ್ಲಿ ವಕ್ಫ್ ಅಭಿವೃದ್ಧಿ ಕಾರ್ಪೊರೇಷನ್ (ಲಿಮಿಟೆಡ್) ಅನ್ನು ರೂಪಿಸಿತು. ಇದರ ಅಧಿಕೃತ ಪಾಲು ಬಂಡವಾಳವು ಒಂದು ಕೋಟಿ ರೂ. ಮತ್ತು ೫೦ ಲಕ್ಷ ರೂ.ಗಳ ಸಂದಾಯದ ಬಂಡವಾಳದಿಂದ ಆರಂಭವಾಯಿತು. ಈ ಕಾರ್ಪೊರೇಷನ್‌ನಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಒಂಬತ್ತು ಜನ ನಿರ್ದೇಶಕರು ಇರುತ್ತಾರೆ. ರಾಜ್ಯದ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿ ಪಡಿಸುವುದೇ ಈ ಕಾರ್ಪೋರೇಷನ್‌ನ ಮುಖ್ಯ ಉದ್ದೇಶ. ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ಮಾಡುವುದು, ವಕ್ಫ್ ಆಸ್ತಿಗಳನ್ನು ಗುತ್ತಿಗೆಗೆ ಪಡೆಯುವುದು, ಸಣ್ಣ ಕೈಗಾರಿಕೆಗಳನ್ನು ನಡೆಸಲು ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು, ಹೌಸಿಂಗ್ ಕೋ–ಆಪರೇಟಿವ್, ಬಳಕೆದಾರರ ಸಂಘ, ಕೈಗಾರಿಕಾ ಸಹಕಾರ ಸಂಘ ಮತ್ತು ರೈತರ ಸಹಕಾರ ಸಂಘಗಳ ಸ್ಥಾಪನೆಗೆ ನೆರವು ನೀಡುವುದು, ಯಾತ್ರಾರ್ಥಿಗಳಿಗೆ ಅನುಕೂಲವನ್ನು ಒದಗಿಸಲು ವಿಶ್ರಾಂತಿ ಗೃಹಗಳನ್ನು

ನಿರ್ಮಾಣ ಮಾಡುವುದು ಮತ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು, ವ್ಯವಸಾಯ ಚಟುವಟಿಕೆಗಳನ್ನು ಕೈಗೊಳ್ಳು ಸಹಾಯ ಮಾಡುವುದು, ಇವೇ ಮೊದಲಾದವು ಇದರ ಉದ್ದೇಶಗಳಾಗಿವೆ.

## ವೃದ್ಧಾಪ್ಯ ವೇತನ, ಅಂಗ ವಿಕಲ ವೇತನ ಮತ್ತು ವಿಧವಾ ವೇತನಗಳು

ಕರ್ನಾಟಕದಲ್ಲಿ ಮೂರಕ್ಕೂ ಹೆಚ್ಚು ವರ್ಷಗಳಿಂದ ನಿರಂತರವಾಗಿ ವಾಸಿಸುತ್ತಿರುವ, ಎಪ್ಪತ್ತಕ್ಕೂ ಮೇಲ್ಪಟ್ಟು ವಯಸ್ಸಾದ ಅಥವಾ ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ, ಜೀವನಕ್ಕೆ ಯಾವುದೇ ಆಧಾರವಿಲ್ಲದ, ಇಪ್ಪತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿರುವಂತಹ ವೃದ್ಧರಿಗೆ, ವೃದ್ಧಾಪ್ಯ ವೇತನವನ್ನು ನೀಡುವ ಒಂದು ಯೋಜನೆಯನ್ನು ಸರ್ಕಾರವು ಕಂದಾಯ ಇಲಾಖೆಯ ಮೂಲಕ ಜಾರಿಗೊಳಿಸುತ್ತಿದೆ. ಅಂಗವಿಕಲರಾದರೆ, ಈ ವೇತನ ಪಡೆಯಲು ಕನಿಷ್ಠ ಅರವತ್ತೈದು ವರ್ಷವಾಗಿರಬೇಕೆಂಬ ನಿಯಮವಿತ್ತು. ಈ ವೃದ್ಧಾಪ್ಯ ವೇತನ ಯೋಜನೆಯನ್ನು ಕರ್ನಾಟಕ ಸರ್ಕಾರವು ೧೯೬೫ರಲ್ಲಿ ಪ್ರಾರಂಭಿಸಿತು. ಅದೇ ವರ್ಷದಲ್ಲಿ ೨೭೫ ವೃದ್ಧರು ಇದರ ಸೌಲಭ್ಯವನ್ನು ಪಡೆದರು. ಇದಕ್ಕಾಗಿ ರೂ.೪೧೨೫ ಗಳನ್ನು ವೆಚ್ಚ ಮಾಡಲಾಯಿತು. ಈ ವಯೋಮಿತಿಯನ್ನು ಅಂಗವಿಕಲರಿಗೆ ೧೯೭೪ರಲ್ಲಿ ೪೫ ವರ್ಷಕ್ಕೂ, ೧೯೭೭ರಲ್ಲಿ ಹದಿನೇಳು ವರ್ಷಕ್ಕೂ ಇಳಿಸಲಾಯಿತು. ೧೯೭೯ರಲ್ಲಿ ಅಂಗವಿಕಲರಿಗೆ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು. ೨೦೦೩-೦೫ರ ಅವಧಿಯಲ್ಲಿ ಈ ಪಿಂಚಣಿಗಳನ್ನು ಪಡೆದವರ ವಿವರವನ್ನು ಮುಂದೆ ಕೋಷ್ಟಕ ೧೬.೬೬ ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೬೬ : ವೃದ್ಧಾಪ್ಯ, ಅಂಗವಿಕಲ ಮತ್ತು ವಿಧವಾ ವೇತನಗಳ ವಿವರ**

| ತಾಲೂಕು | ವೃದ್ಧಾಪ್ಯ ಪಿಂಚಣಿ ಪಡೆಯುತ್ತಿರುವವರು | | ಅಂಗವಿಕಲ ಪಿಂಚಣಿ ಪಡೆಯುತ್ತಿರುವವರು | | ವಿಧವಾ ಪಿಂಚಣಿ ಪಡೆಯುತ್ತಿರುವವರು | |
|---|---|---|---|---|---|---|
| | ೨೦೦೩-೦೪ | ೨೦೦೪-೦೫ | ೨೦೦೩-೦೪ | ೨೦೦೪ -೦೫ | ೨೦೦೩-೦೪ | ೨೦೦೩-೦೫ |
| ಕುಂದಾಪುರ | ೮೨೬ | ೭೧೪ | ೨೧೫೩ | ೨೧೧೨ | ೫೩೨೯ | ೫೩೧೮ |
| ಕಾರ್ಕಳ | ೮೭೦ | ೭೫೨ | ೧೭೦೫ | ೧೯೯೧ | ೩೨೨೩ | ೩೨೩೨ |
| ಉಡುಪಿ | ೧೩೮೦ | ೯೪೪ | ೨೨೮೩ | ೨೩೩೦ | ೬೫೩೩ | ೬೫೭೪ |
| ಒಟ್ಟು | ೩೦೭೬ | ೨೪೧೦ | ೬೧೪೧ | ೬೧೩೩ | ೧೫೧೮೫ | ೧೫೧೨೪ |

*(ಆಧಾರ: ೨೦೦೩-೦೪ ಮತ್ತು ೨೦೦೪-೦೫ರ ಉಡುಪಿ ಅಟ್ ಎ ಗ್ಲಾನ್ಸ್ ಹಾಗೂ ಕರ್ನಾಟಕ ಅಟ್ ಎ ಗ್ಲಾನ್ಸ್)*

## ಪಾನ ನಿರೋಧ

ಹಲವು ಜನರು, ತಮ್ಮ ಹಲವಾರು ಸಮಸ್ಯೆಗಳನ್ನು ಮರೆಯಲು ಅಥವಾ ತಮಗಾದ ಸಂತೋಷವನ್ನು ಆಚರಿಸಲು, ಅಮಲಿನ ಲೋಕದಲ್ಲಿ ವಿಹರಿಸುವಂಥ ಕ್ಷಣಿಕ ಸುಖ ಪಡೆಯುವುದಕ್ಕಾಗಿ, ಮತ್ತು ಬರಿಸುವ ವಸ್ತುಗಳನ್ನು ಅಥವಾ ಪಾನೀಯಗಳನ್ನು ಸೇವಿಸುವ ಚಟಕ್ಕೆ ಬಲಿಯಾಗುವುದು, ಇದು ಎಲ್ಲೆಡೆ ಕಂಡು ಬರುವ ಒಂದು ಸಾಮಾಜಿಕ ಪಿಡುಗು. ಬಡವರು, ದುರ್ಬಲರು, ಆಲಸಿಗಳು, ಈ ಕೆಟ್ಟ ಚಟಕ್ಕೆ ಹೆಚ್ಚಾಗಿ ಬಲಿಯಾಗುವವರಾಗಿದ್ದಾರೆ. ೧೯೩೭ರ ಮದರಾಸು ಪಾನ ನಿರೋಧ ಅಧಿನಿಯಮದಂತೆ ಉಡುಪಿ ಜಿಲ್ಲಾ ಪ್ರದೇಶವನ್ನು ಒಳಗೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಾನ ನಿರೋಧವನ್ನು ಜಾರಿಗೆ ತರಲಾಗಿತ್ತು. ಸಂಪೂರ್ಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ೧೯೪೬ರ ಅಕ್ಟೋಬರ್ ಒಂದರಿಂದ ಪಾನ ನಿರೋಧವನ್ನು ಜಾರಿಗೆ ತರಲಾಯಿತು. ಅದಕ್ಕೆ ಮೊದಲು ಮತ್ತು ಬರಿಸುವ ವಿವಿಧ ವಸ್ತುಗಳನ್ನು ಅನುಮತಿ ಪಡೆದ ಅಂಗಡಿಗಳಲ್ಲಿ ಮಾತ್ರ ಮಾರಲು ಅವಕಾಶವಿದ್ದು, ಈ ಮೂಲಕ ಸರ್ಕಾರದ ಖಜಾನೆಗೆ ದೊಡ್ಡ ಮೊತ್ತದ ಅಬಕಾರಿ ಕಂದಾಯ ವಸೂಲಾಗುತ್ತಿತ್ತು. ಆದರೆ, ಪಾನ ನಿರೋಧ ಅಧಿನಿಯಮವನ್ನು

ಜಾರಿಗೆ ತಂದ ಮೇಲೆ, ವೈದ್ಯಕೀಯ, ವೈಜ್ಞಾನಿಕ, ಕೈಗಾರಿಕಾ ಹಾಗೂ ಇಂತಹ ಇತರ ಉದ್ದೇಶಗಳನ್ನು ಬಿಟ್ಟು, ಇಂಥ ಎಲ್ಲ ವಹಿವಾಟುಗಳನ್ನು ಮತ್ತು ಅಮಲು ಬರಿಸುವ ಪಾನೀಯಗಳನ್ನು, ನಿಷೇಧಿಸಲಾಯಿತು. ಕೇವಲ ಕೆಲವೇ ವಿಶೇಷ ಪ್ರಕರಣಗಳಲ್ಲಿ ಮಾತ್ರ ಮದ್ಯವನ್ನು ಹೊಂದಲು ಹಾಗೂ ಬಳಸಲು ಪರಿಮಿತಿಯನ್ನು ಕೊಡಲಾಗುತ್ತಿತ್ತು. ಅಸ್ವಾಭಾವಿಕ ಮತ್ತು ಕ್ರಮಬದ್ಧವಾದ ಶುದ್ಧ ಸಾರಾಯಿಯನ್ನು ಹೊಂದಲು ಮತ್ತು ಮಾರಲು; ರಾಸಾಯನಿಕ ತಜ್ಞರು ಸೂಚಿಸಿದ ಬ್ರಾಂದಿ ಮತ್ತು ಔಷಧೀಯ ವೈನ್‌ಗಳನ್ನು ಹೊಂದಲು ಹಾಗೂ ಮಾರಲು; ಆಸ್ಪತ್ರೆಗಳಲ್ಲಿ ವೈದ್ಯಕೀಯ ಉದ್ದೇಶಕ್ಕಾಗಿ ಬ್ರಾಂದಿಯನ್ನು ಇಟ್ಟುಕೊಳ್ಳಲು ಮತ್ತು ಇಂಥ ಇನ್ನಿತರ ಉದ್ದೇಶಗಳಿಗಾಗಿ ಲೈಸೆನ್ಸ್‌ಗಳನ್ನು ನಿಗದಿಸಲಾಯಿತು.

ಆರಂಭದಲ್ಲಿ ಪಾನ ಪ್ರತಿಬಂಧಕ ಇಲಾಖೆಯ ಅಧಿಕಾರಿಗಳಿಗೆ ಇದರ ಪೂರ್ಣ ಅಧಿಕಾರವನ್ನು ಕೊಡಲಾಗಿತ್ತು. ಜಿಲ್ಲಾ ನಿಷೇಧಾಧಿಕಾರಿ, ಮೂರು ಉಪ ನಿಷೇಧಾಧಿಕಾರಿಗಳು, ಆರು ಸಹಾಯಕ ನಿಷೇಧಾಧಿಕಾರಿಗಳು, ಮುವತ್ತಾರು ಸಬ್ ಇನ್ಸ್‌ಪೆಕ್ಟರ್ಸ್, ೩೯ ಕಿರಿಯ (ಪೆಟ್ಟಿ) ಆಫೀಸರ್ಸ್, ಮತ್ತು ನಾಲ್ಕು ನೂರು ಗಾರ್ಡ್‌ಗಳನ್ನು ಈ ಇಲಾಖೆಯು ಹೊಂದಿತ್ತು. ಈ ನಿಷೇಧದ ಕಾನೂನುಗಳನ್ನು ಅನುಷ್ಠಾನಗೊಳಿಸುವಲ್ಲಿ ಇಲಾಖೆಯ ಕಾರ್ಯವು ಪೂರ್ಣ ತೃಪ್ತಿಕರವಾಗಿಲ್ಲ ಎಂಬುದು ಕಂಡು ಬಂದುದರಿಂದ ಮತ್ತು ಈ ಕಾರ್ಯವನ್ನು ಪೋಲೀಸರಿಗೆ ವಹಿಸಬೇಕೆಂದು ಸಾರ್ವಜನಿಕರು ಆಗ್ರಹಿಸತೊಡಗಿದ್ದುದರಿಂದ, ನಂತರದಲ್ಲಿ, ೧೯೫೫ರ ನವೆಂಬರ್ ಒಂದರಿಂದ ಈ ಕಾರ್ಯವನ್ನು ಸಂಪೂರ್ಣವಾಗಿ ಪೋಲೀಸ್ ಇಲಾಖೆಗೆ ವರ್ಗಾಯಿಸಲಾಯಿತು. ಈ ವರ್ಗಾವಣೆಯೊಂದಿಗೆ, ಪ್ರತಿಬಂಧಕ ಇಲಾಖೆಯ ಎಲ್ಲ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಪೋಲೀಸ್ ಇಲಾಖೆಯಲ್ಲಿ ವಿಲೀನ ಗೊಳಿಸಲಾಯಿತು. ಆದರೆ ಆ ನಂತರವೂ, ಈ ಜಿಲ್ಲೆಯಲ್ಲಿನ ದೀರ್ಘ ಸಮುದ್ರ ತೀರ, ಅಗಣಿತ ನದಿಗಳು ಹಾಗೂ ತೊರೆಗಳು ಮತ್ತು ಬೆಟ್ಟಗುಡ್ಡಗಳ ಭೌಗೋಳಿಕ ಪ್ರಕೃತಿಯಿಂದಾಗಿ, ನಿಷೇಧ ಕುರಿತಾದ ಅಪರಾಧಗಳ ತನಿಖೆ, ಅದರಲ್ಲೂ ಕಾನೂನು ಬಾಹಿರ ಭಟ್ಟಿ ಇಳಿಸುವಿಕೆಯನ್ನು ಕಂಡು ಹಿಡಿಯುವುದು, ಈ ಜಿಲ್ಲೆಯಲ್ಲಿ ಒಂದು ದೊಡ್ಡ ಕಷ್ಟದ ಸಮಸ್ಯೆಯೇ ಆಗಿತ್ತು. ಗೋವಾದಿಂದ ದೊಡ್ಡ ಪ್ರಮಾಣದಲ್ಲಿ ಮದ್ಯಪಾನೀಯಗಳು ಕಳ್ಳತನದಲ್ಲಿ ಸಾಗಾಣಿಕೆಯಾಗಿ ಬರುತ್ತಿದ್ದವು. ಅಪರಾಧಿಗಳ ಜಾಡು ಹಿಡಿಯಲು ಸಾಕಷ್ಟು ಶ್ರಮ ಹಾಕಿದರೂ, ಕಾನೂನು ಬಾಹಿರ ಭಟ್ಟಿ ಇಳಿಸುವ ಧಂಧೆ ಅನಿಗ್ರಹಿತವಾಗಿ ಸಾಗುತ್ತಿತ್ತು. ಈ ಜಿಲ್ಲೆಯಲ್ಲಿ, ೧೯೫೬ ಮತ್ತು ೧೯೫೭ರ ಸಮಯದಲ್ಲಿ, ವರದಿಯಾದ ನಿಷೇಧಿತ ಅಪರಾಧಗಳ, ನಿಜವಾಗಿ ಹಿಡಿಯಲ್ಪಟ್ಟ ಪ್ರಕರಣಗಳ ಮತ್ತು ಮಾಡಿದ ಅಪರಾಧ ನಿರ್ಣಯಗಳ ಬಗ್ಗೆ ಈ ಕೆಳಕಂಡ ಪಟ್ಟಿಯು ವಿವರಿಸುತ್ತದೆ.

| ಪ್ರಮುಖ ಅಪರಾಧಗಳು | ೧೯೫೬ | | ೧೯೫೭ | |
|---|---|---|---|---|
| | ವರದಿಯಾದ ಪ್ರಕರಣಗಳು | ಅಪರಾಧ ನಿರ್ಣಯ | ವರದಿಯಾದ ಪ್ರಕರಣಗಳು | ಅಪರಾಧ ನಿರ್ಣಯ |
| ಕಾನೂನು ಬಾಹಿರ ಭಟ್ಟಿ ಇಳಿಸುವಿಕೆಗಳು | ೪೭೧ | ೨೪೧ | ೮೧೪ | ೨೮೩ |
| ಕಳ್ಳ ಸರಕು ಸಾಗಾಣಿಕೆ | ೧೯೭ | ೧೬೧ | ೨,೨೪೨ | ೧,೩೧೯ |
| ಕುಡಿತ(ಅಮಲುಖೋರ) | ೩,೮೨೪ | ೩,೩೩೩ | ೩,೯೨೦ | ೨,೯೨೭ |
| ಒಟ್ಟು | ೪,೪೯೨ | ೩,೭೩೫ | ೬,೯೭೬ | ೪,೫೨೯ |

*(ಮಾಹಿತಿ: ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಜ್, ಉಡುಪಿ ಜಿಲ್ಲೆ, ಉಡುಪಿ)*

ಈ ನಡುವೆ, ಹೊಸ ಮೈಸೂರು ರಾಜ್ಯಕ್ಕೆ ಸೇರಿದ ಎಲ್ಲಾ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ವಿವಿಧ ಪ್ರತಿಬಂಧಕ ಕಾನೂನುಗಳನ್ನು, ರಾಜ್ಯದ ಎಲ್ಲಾ ಕಡೆ ಒಂದೇ ವಿಧಾನದಲ್ಲಿ ಜಾರಿಗೆ ತರುವ ವಿಷಯವು, ಗಣನೀಯವಾದಂಥ ಅಡಳಿತಾತ್ಮಕ ಹಾಗೂ ಕಾರ್ಯರೂಪದ ತೊಂದರೆಗಳಿಗೆ ಕಾರಣವಾಯಿತು. ಆದ್ದರಿಂದ

ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಮೈಸೂರ್ ಪ್ರೊಹಿಬಿಷನ್ ಆಕ್ಟ್ ೧೯೬೧, ಎಂಬ ಹೆಸರಿನ ಪರಿಷ್ಕೃತ ಸಮಕಾಯಿದೆಯೊಂದನ್ನು ೧೯೬೨ರಲ್ಲಿ ರಾಜ್ಯಾದ್ಯಂತ ಜಾರಿಗೆ ತರಲಾಯಿತು. ಪ್ರತಿಬಂಧಕ ಸಿಬ್ಬಂದಿಯ ಪ್ರಯತ್ನಗಳಿಂದಾಗಿ ತನಿಖೆಗಳು, ಅಪರಾಧ ನಿರ್ಣಯಗಳು, ಶಿಕ್ಷಾ ಕ್ರಮಗಳು, ಗಣನೀಯ ಪ್ರಮಾಣದಲ್ಲಿ ಪತ್ತೆ ಮಾಡಲಾಯಿತಾದರೂ, ಮದ್ಯ ಪ್ರತಿಬಂಧಕ ಕಾನೂನುಗಳ ಉಲ್ಲಂಘನೆ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ ಎಂಬುದೇ ಎಲ್ಲರ ಸಾಮಾನ್ಯ ಭಾವನೆಯಾಗಿತ್ತು. ಅದರಿಂದ ಪ್ರತಿಬಂಧಕ ಕ್ರಮಗಳು ಯಶಸ್ಸು ಗಳಿಸಿರಲಿಲ್ಲ. ಇದಲ್ಲದೇ, ಸರ್ಕಾರದ ಬೊಕ್ಕಸಕ್ಕೂ ಬರಬೇಕಾದ ಕಂದಾಯದಲ್ಲಿ ಆಗುತ್ತಿದ್ದ ನಷ್ಟ ಗಣನೀಯವಾಗಿತ್ತು. ರಾಜ್ಯ ಆದಾಯದಲ್ಲಿನ ನಷ್ಟ, ಹೆಚ್ಚುತ್ತಿದ್ದ ಕಳ್ಳಭಟ್ಟಿ ಸಾರಾಯಿಯ ಉಪಯೋಗ, ಮುಂತಾದ ಕಾರಣಗಳಿಗಾಗಿ, ಸರ್ಕಾರವು, ೧೯೬೧ರ ನಿಯಮಗಳನ್ನು ತಿದ್ದುಪಡಿ ಮಾಡಲು ನಿರ್ಧರಿಸಿ, (ಕರ್ನಾಟಕ ಪಾನ ನಿರೋಧ ತಿದ್ದುಪಡಿ) ಪರಿಷ್ಕೃತ ಅಧಿನಿಯಮವನ್ನು ೧೯೬೭ರಲ್ಲಿ ಹೊರ ತಂದಿತು. ಇದರನ್ವಯ, ೧೯೬೧ರ ಅಧಿನಿಯಮದಲ್ಲಿ ಸೂಚಿಸಿದ್ದ ಯಾವುದೇ ಸ್ಥಳಗಳಲ್ಲಿ ಪಾನನಿರೋಧವನ್ನು ಸಡಲಿಸಬಹುದಾದ ಅನುಕೂಲವನ್ನು ಪಡೆಯಲಾಯಿತು. ಆ ನಂತರದಲ್ಲಿ, ಕೆಲವೇ ಸ್ಥಳಗಳನ್ನು ಹೊರತು ಪಡಿಸಿ, ರಾಜ್ಯದ ಇನ್ನೆಲ್ಲ ಜಿಲ್ಲೆಗಳಲ್ಲಿ ಪಾನ ನಿರೋಧ ನಿಯಮಗಳನ್ನು ಹದಿನೈದನೇ ಅಕ್ಟೋಬರ್‌ನಿಂದ ತೆಗೆದು ಹಾಕಲಾಯಿತು. ಆದರೆ, ಈಗಲೂ ಅಶುದ್ಧ ಕಳ್ಳಬಟ್ಟಿ ಸಾರಾಯಿಯ ತಯಾರಿಕೆ ಹಾಗೂ ಅದರ ವಿತರಣೆ ಮುಂದುವರೆಯುತ್ತಲೇ ಇದೆ ಎನ್ನಬಹುದಾಗಿದೆ. ವಿವರವನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೭ : ಅಬಕಾರಿ ಇಲಾಖೆ ಅಪರಾಧ ತಡೆಯಲು ಕೈಗೊಂಡ ಕ್ರಮಗಳ ವಿವರ**

| ವರ್ಷ | ವಶಪಡಿಸಿ ಕೊಂಡ ವಾಹನಗಳು | ವಶಪಡಿಸಿ ಕೊಂಡ ಬಾ.ತ.ಮ. (ಲೀಟರ್ ಗಳಲ್ಲಿ) | ವಶಪಡಿಸಿ ಕೊಂಡ ಬಿಯರು (ಲೀಟರ್ ಗಳಲ್ಲಿ) | ವಶಪಡಿಸಿ ಕೊಂಡ ರೆಕ್ಟಿಫೈಡ್‌ಸ್ಪಿರಿಟ್ (ಲೀಟರ್ ಗಳಲ್ಲಿ) | ವಶಪಡಿಸಿ ಕೊಂಡ ಸಾರಾಯಿ (ಲೀಟರ್ ಗಳಲ್ಲಿ) | ನಾಶ ಪಡಿಸಿದ ಕಳ್ಳಭಟ್ಟಿ (ಲೀಟರ್ ಗಳಲ್ಲಿ) | ನಾಶಪಡಿಸಿದ ಕೊಳೆ,ಹುಳಿ ರಸ (ಲೀಟರ್ ಗಳಲ್ಲಿ) | ನಾಶ ಪಡಿಸಿದ ಪದಾರ್ಥ ಗಳ ಒಟ್ಟು ಮೊತ್ತ |
|---|---|---|---|---|---|---|---|---|
| ೨೦೦೩ | ೧೩ | ೨೫೦೮ | ೧೮೩೧ | ೧೧೫೬೮ | ೫೩೧ | ೫೬೧ | ೨೬೫೯೦ | ೨೭೧೫೧ |
| ೨೦೦೪ | ೧೮೧ದೋಣಿ | ೪೫೬೫ | ೨೯೭೩ | ೬೫೬೧ | ೩೨೬ | ೧೪೧೬ | ೨೯೭೭೯ | ೩೦೯೫ |
| ೨೦೦೫ | ೪೨ದೋಣಿ | ೧೦೩೬ | ೧೦೩೧ | ೨೫೦ | ೬೩೮ | ೯೭೬ | ೨೧೧೩೧ | ೨೨೧೦೭ |

## ಇತರೆ ಸಮಾಜಸೇವಾ ನಿರತ ವ್ಯಕ್ತಿಗಳು ಮತ್ತು ಸಂಸ್ಥೆಗಳು

ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ದೇಶಕ್ಕಾಗಿ ಚಳವಳಿಗಳು ನಡೆದುವಲ್ಲದೆ, ಈ ಚಳವಳಿಗಳಿಂದಾಗಿ, ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲೂ ಮಹತ್ತರ ಬದಲಾವಣೆಗಳಾದುವು. ಜನರಿಗೆ ಸ್ವಾತಂತ್ರ್ಯದ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡುವುದರ ಜೊತೆ ಜೊತೆಗೇ ಸಮಾಜದಲ್ಲಿ ಅಮಾನುಷ ರೀತಿಯಲ್ಲಿ ರೂಢಿಯಲ್ಲಿದ್ದ, ಅಸ್ಪೃಶ್ಯತೆ, ಕೆಳವರ್ಗದವರ ಕುಡಿತದ ಗೀಳು, ಅಸಮಾನತೆ ಇತ್ಯಾದಿಗಳನ್ನು ನಿವಾರಿಸುವ ಬಗ್ಗೆಯೂ ಆಲೋಚಿಸಿ ಮುಂದುವರಿದ ಸಮಾಜವಾದಿಗಳು ಈ ಬಗ್ಗೆ ಸೂಕ್ತ ಚಟುವಟಿಕೆಗಳನ್ನು ಕೈಗೊಂಡರು. ಮಹಾತ್ಮಾ ಗಾಂಧಿಯವರು ಬೋಧಿಸಿದ ಅಹಿಂಸಾ ಮಾರ್ಗವನ್ನನುಸರಿಸಿ, ದೇಶದ ಲಕ್ಷಾಂತರ ಜನರು ಸ್ವರಾಜ್ಯವನ್ನು ಗಳಿಸುವ ದಿಕ್ಕಿನಲ್ಲಿ ಹೋರಾಟಕ್ಕೆ ತೊಡಗಿಕೊಳ್ಳುವುದರೊಂದಿಗೆ, ಸಾಮಾಜಿಕ ಸುಧಾರಣೆಯ ಕಾರ್ಯಗಳಲ್ಲೂ ನಿರತರಾದರು. ಸಾಮಾಜಿಕ ಸುಧಾರಣೆಯ ಉದ್ದೇಶದ ಚಳವಳಿಗಳಲ್ಲಿ ಹರಿಜನೋದ್ಧಾರ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ದೇವಸ್ಥಾನ ಮತ್ತು ಹೋಟೆಲ್‌ಗಳಿಗೆ ಹರಿಜನರ ಪ್ರವೇಶ, ಸ್ತ್ರೀಪರ ಕಾಳಜಿ, ಗ್ರಾಮೋದ್ಯೋಗಗಳ ಉತ್ಥಾನ, ಖಾದೀ ಪ್ರಚಾರ, ಹಾಗೂ ಪ್ರಾಣಿಬಲಿ ನಿಷೇಧ –ಇವು ಅತ್ಯಂತ ಪ್ರಮುಖವಾದುವು. ಮಂಗಳೂರು ಮತ್ತು ಉಡುಪಿ– ಇವು ಆಗ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಈ ಎರಡು ಸ್ಥಳಗಳಲ್ಲಿ ರಾಷ್ಟ್ರೀಯ ವಿದ್ಯಾಲಯಗಳಲ್ಲದೆ ಹರಿಜನೋದ್ಧಾರ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಮುಂತಾಗಿ ಮೇಲೆ ತಿಳಿಸಿದ ಸಾಮಾಜಿಕ ಸುಧಾರಣೆಯ ಚಟುವಟಿಕೆಗಳಿಗಾಗಿಯೂ ಹಲವು ಕೇಂದ್ರಗಳು ಸ್ಥಾಪನೆಗೊಂಡವು.

ಜಿಲ್ಲೆಯ ಹಲವಾರು ವ್ಯಕ್ತಿಗಳು ಸಮಾಜದ ಏಳಿಗೆಗಾಗಿ, ಕೆಳವರ್ಗದವರ ಸುಧಾರಣೆಗಾಗಿ ತಮ್ಮಿಂದ ಸಾಧ್ಯವಾದ ನೆರವು ನೀಡಿ, ಜೀವ–ಜೀವನವನ್ನೇ ಮುಡಿಪಾಗಿಟ್ಟರು. ದೇಶಭಕ್ತ ಕಾರ್ನಾಡು ಸದಾಶಿವರಾಯರು, ಜಿಲ್ಲೆಯಾದ್ಯಂತ ಸಂಚರಿಸಿ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಗ್ರಾಮಾಂತರ ಪ್ರದೇಶಗಳ ಹಲವಾರು ಮುಂದಾಳುಗಳನ್ನು ಭೇಟಿ ಮಾಡಿ ಸಮಾಜ ಮತ್ತು ದೇಶದ ಬಗ್ಗೆ ಅವರಲ್ಲಿ ಸ್ವಾಭಿಮಾನ ಮೂಡುವಂತೆ ಮಾಡಿ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದರು.

ಕೋಟ ರಾಮಕೃಷ್ಣ ಕಾರಂತರು, ನಾರಾಯಣ ಕಿಲ್ಲೆ ಮುಂತಾದವರು ರಾಜಕೀಯದೊಂದಿಗೆ, ಸಾಮಾಜಿಕ ಉನ್ನತಿಗೆ ಅಗತ್ಯವಾದ ಹರಿಜನ ಪ್ರಗತಿ, ಅವರಿಗೆ ಇರುವ ದೇವರ ದರ್ಶನದ ಹಕ್ಕು, ಮದ್ಯಪಾನ ನಿಷೇಧ ಮತ್ತು ಶಿಕ್ಷಣದ ಅಗತ್ಯ ಮುಂತಾದ ವಿಷಯಗಳ ಬಗ್ಗೆಯೂ ಮತ್ತು ಮಹಾತ್ಮಾ ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಬಗ್ಗೆಯೂ ಜನರ ಮನ ಮುಟ್ಟುವಂತೆ ಭಾಷಣ ಮಾಡಿ ಜಿಲ್ಲೆಯ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಕುಂದಾಪುರ, ಕಾರ್ಕಳ, ಉಡುಪಿ ತಾಲೂಕುಗಳಲ್ಲದೆ, ಕಾಸರಗೋಡು ತಾಲೂಕಿನಿಂದಲೂ ಹಲವು ಜನಪ್ರತಿನಿಧಿಗಳು ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳಲ್ಲಿ ತನುಮನದಿಂದ ಭಾಗಿಗಳಾದರು. ಅಂಥ ಕೆಲವು ಮಹನೀಯರು ಮತ್ತು ಮಹಿಳೆಯರ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ. ಸಾಂತ್ಯಾರು ಅನಂತ ಪದ್ಮನಾಭ ಭಟ್ಟರು, ಪೆರ್ಡೂರು ಎಂ. ಲಕ್ಷ್ಮೀನಾರಾಯಣ ಬಲ್ಲಾಳ, ಪೆರಡಾಲದ ಡಾ.ಪಿ ಸುಬ್ರಹ್ಮಣ್ಯ ಶಾಸ್ತ್ರಿ, ಬ್ರಹ್ಮಾವರದ ಡಿ.ಬಿ ಅಂತಯ್ಯ ಶೆಟ್ಟಿ, ಮುಂತಾದವರು ಈ ನೆಲೆಯಲ್ಲಿ ಸೇವೆ ಸಲ್ಲಿಸಿದಂತಹ ಮಹನೀಯರು. ಎಣ್ಮಕಜೆ ಗ್ರಾಮದ ಅಧ್ಯಾಪಕರಾಗಿದ್ದ ಎಸ್. ರಾಮಭಟ್ಟ, ಪಾದೂರಿನ ಎಂ.ಶೇಷಪ್ಪ ಶೆಟ್ಟಿ, ಶಿರ್ವ ಶಂಭು ಶೆಟ್ಟಿ, ಬಸರೂರಿನ ಬಿ.ಗೋಪಾಲ ಕೃಷ್ಣ ಶೆಣೈ, ಸುಬ್ರಾಯ ನಾರಾಯಣ ಮಲ್ಯ, ಎಚ್. ಮಿಯಾರು ಗ್ರಾಮದ ಸೋಮನಾಥ ಗೋಖಲೆ, ಮುಂತಾದವರು ಸೇವಾ ಚಟುವಟಿಕೆಗಳಿಗೆ ಹೆಸರಿಸಬಹುದಾದ ಇನ್ನು ಕೆಲವು ವ್ಯಕ್ತಿಗಳು.

ರಾಷ್ಟ್ರದ ಸಾಮಾಜಿಕ ಸುಧಾರಣಾ ಚಳವಳಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ನೀಡಿದ ಅತ್ಯಂತ ಮಹತ್ವದ ಕೊಡುಗೆ ಎಂದರೆ 'ಹರಿಜನೋದ್ಧಾರ ಚಳವಳಿ'. ಪೆರ್ಡೂರು ಎಂ. ಲಕ್ಷ್ಮೀನಾರಾಯಣ ಬಲ್ಲಾಳರು, ದೊಂಡೇರಂಗಡಿಯಲ್ಲಿ ಮದ್ಯದ ಪಿಕೆಟಿಂಗ್‌ನಲ್ಲಿ ಭಾಗವಹಿಸುವ ಮೂಲಕ ತಮ್ಮ ಮದ್ಯ ವಿರೋಧಿ ಚಳವಳಿಯನ್ನು ಆರಂಭಿಸಿ, ಪೆರ್ಡೂರು ಸೇಂದಿ ಸಾರಾಯಿ ಗುತ್ತಿಗೆಗಳ ಪಿಕೆಟಿಂಗ್‌ನಲ್ಲಿ ಮುಖ್ಯ ಪಾತ್ರ ವಹಿಸಿ, ಪೊಲೀಸರಿಂದ ಹೊಡೆತ ತಿಂದರೂ ಬಿಡದೇ ಏಲಂ ವಿರುದ್ಧ ಹೊಡೆದಾಡಿದಂತಹವರು. ದೋಂಡೇರಂಗಡಿ ಶಾಲೆಯಲ್ಲಿ ಹರಿಜನರಿಗೆ ವಿದ್ಯಾಭ್ಯಾಸ ನೀಡುವ ಕಾರ್ಯ ನಡೆಸಿದರು. ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನಕ್ಕೆ ಬ್ರಹ್ಮಾವರ ಅಂತಯ್ಯಶೆಟ್ಟರ ನೇತೃತ್ವದಲ್ಲಿ ಹರಿಜನ ಪ್ರವೇಶ ಮಾಡಿಸುವಾಗ ಬಲ್ಲಾಳರೂ ಅದರಲ್ಲಿ ಪಾಲ್ಗೊಂಡಿದ್ದರು.

ಪೆರಡಾಲದ ಡಾ.ಪಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಕಾರ್ನಾಡು ಸದಾಶಿವರಾಯರೊಂದಿಗೆ ಕಾಂಗ್ರೆಸ್ ಸ್ವಯಂ ಸೇವಕನಾಗಿ ದುಡಿಯುವ ಸಮಯದಲ್ಲಿ, ಮಹಾತ್ಮ ಗಾಂಧಿಯವರು ಹಳ್ಳಿಗಳ ಉದ್ಧಾರವೇ ದೇಶೋದ್ಧಾರ ಎಂಬುದಾಗಿ ಕರೆ ಕೊಟ್ಟಾಗ, ಆ ಕರೆಯಲ್ಲಿ ನಂಬಿಕೆ ಇಟ್ಟು, ಬದಿಯಡ್ಕ ಎಂಬ ಸಣ್ಣ ಹಳ್ಳಿಯನ್ನು ತಮ್ಮ ವೃತ್ತಿ ಜೀವನಕ್ಕೆ ಆಯ್ಕೆ ಮಾಡಿಕೊಂಡು, ಹಲವಾರು ಸಂಕಷ್ಟಗಳನ್ನು ಎದುರಿಸಿಯೂ, ಅಧಿರರಾಗದೇ ದೀನ ದಲಿತರಿಗೆ ವೈದ್ಯಕೀಯ ಸಹಾಯವನ್ನೊದಗಿಸಿದರು. ಕೇಂದ್ರ ಮತ್ತು ರಾಜ್ಯಗಳಲ್ಲಿ ಭಾರತೀಯ ಸರ್ಕಾರಗಳು ಆಡಳಿತವನ್ನು ನಿರ್ವಹಿಸುವವರೆಗೆ ಹರಿಜನರಿಗೆ ಉಚಿತವಾಗಿ ಔಷಧೋಪಚಾರಗಳನ್ನು ನೀಡಿದ್ದರು. ಸಾತಂತ್ರ್ಯಪೂರ್ವದ ಕಾಂಗ್ರೆಸ್ ಕಾರ್ಯಕರ್ತರು ಯಾರೂ, ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರದ ಸ್ಥಾನಗಳಿಗಾಗಿ ಹಾತೊರೆಯಬಾರದೆಂಬ ಗಾಂಧೀಜಿಯವರ ಬಯಕೆಯಂತೆ, ಸುಬ್ರಹ್ಮಣ್ಯ ಶಾಸ್ತ್ರಿಗಳು ಅಧಿಕಾರಕ್ಕಾಗಿ ಹಾತೊರೆಯದೇ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬಾಪೂಜಿಯವರಿಗೆ ಬಹುಪ್ರಿಯವಾದ ಕುಷ್ಠರೋಗ ನಿವಾರಣೆಯ ಕಾರ್ಯವನ್ನು ಆಯ್ಕೆ ಮಾಡಿಕೊಂಡು, ೧೯೪೭ರ ನಂತರ ತಮ್ಮದೇ ಆಸ್ಪತ್ರೆಯಲ್ಲಿ ಕುಷ್ಠರೋಗ ನಿವಾರಣಾ ವಿಭಾಗವೊಂದನ್ನು ಪ್ರಾರಂಭಿಸಿ,

ಇದರ ಕುರಿತಾಗಿ ಜನರಿಗಿದ್ದ ಅಜ್ಞಾನ, ಅಂಧಶ್ರದ್ಧೆಗಳನ್ನು ಬಹು ಮಟ್ಟಿಗೆ ತೊಡೆದು ಹಾಕಲು ಶ್ರಮಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಕುಷ್ಠರೋಗ ನಿವಾರಣಾ ಸಂಘ, ಹರಿಜನ ಸೇವಕ ಸಂಘಗಳ ಸದಸ್ಯನಾಗಿಯೂ ಸೇವೆ ಸಲ್ಲಿಸಿದರು.

ಶರಾಬು ಅಂಗಡಿಯವರು ಕಣ್ಣಿಗೆ ಅರೆದ ಮೆಣಸನ್ನು ಹಾಕಿ ಬೆದರಿಸಿದರೂ, ಪೋಲಿಸರು ಲಾಠೀ ಪ್ರಹಾರ ಮಾಡಿದರೂ ಹಿಂದೆಗೆಯದೇ ಶೇಂದಿ ಮತ್ತು ಶರಾಬು ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿ ಮದ್ಯಪಾನದ ತಡೆಗೆ ಪ್ರಯತ್ನಿಸಿದವರಲ್ಲಿ ಉಡುಪಿ(ಬ್ರಹ್ಮಗಿರಿ)ಯ ಎಂ. ಅಬ್ದುಲ್ ಖಾದರ್ ಅವರೂ ಒಬ್ಬರು. ಕಾರ್ಕಳದಲ್ಲಿ ಪದ್ಮನಾಭ ಕಾಮತರು, ಕುಂದಾಪುರದಲ್ಲಿ ಮಹಾಬಲ ಹೊಳ್ಳರು ವಕೀಲಿ ವೃತ್ತಿ ಬಿಟ್ಟು ಮೇಲಿನ ಚಟುಚಟಿಕೆಗಳಲ್ಲಿ ತೊಡಗಿದ್ದರು. ಕಾರ್ಕಳ ತಾಲೂಕಿನ ಮಿಯಾರು, ಎಚ್. ಸೋಮನಾಥ ಗೋಖಲೆ, ಮಹಾಬಲ ಹೆಗಡೆಯವರ ನೇತೃತ್ವದಲ್ಲಿ ಮದ್ಯ ಪಾನ ನಿಷೇಧ ಚಳವಳಿಗಳು ನಡೆದಿವೆ.

ನಾಡಿನ ಉತ್ಥಾನಕ್ಕಾಗಿ ಉತ್ಸಾಹದಿಂದ ದುಡಿದವರಲ್ಲಿ ಕೆ. ವೆಂಕಟೇಶ ಪ್ರಭುಗಳು ಒಬ್ಬರು. ಕಾರ್ಕಳದಲ್ಲಿ ವೆಂಕಟರಮಣ ಮತ್ತು ಅನಂತ ಪದ್ಮನಾಭ ದೇವಸ್ಥಾನಗಳಲ್ಲಿ ಪ್ರವೇಶವನ್ನು ಪ್ರಭುಗಳ ಪ್ರಯತ್ನದಿಂದಲೇ ಮಾಡಿಸಲಾಗಿತ್ತು. ಹರಿಜನರನ್ನು ಮೇಲೆತ್ತುವ ವಿಚಾರದ ಬಗ್ಗೆ, ಸ್ವಾತಂತ್ರ್ಯ, ಸತ್ಯಾಗ್ರಹದ ಬಗ್ಗೆ ನಾಯಕತ್ವ ವಹಿಸಿ ಜನರನ್ನು ಹುರಿದುಂಬಿಸುತ್ತಿದ್ದರು.

ಬ್ರಹ್ಮಾವರದ ಡಿ.ಬಿ. ಅಂತಯ್ಯಶೆಟ್ಟಿಯವರು, ಶಾಲೆ ಬಿಟ್ಟು ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಿ, ಖಾದಿ ಪ್ರಚಾರದ ಜೊತೆಗೆ, ಹರಿಜನ ಸೇವೆಯಲ್ಲಿ ತೊಡಗಿಕೊಂಡ ಸಮಾಜ ಸುಧಾರಕ ಮತ್ತು ದೇಶಭಕ್ತರಲ್ಲಿ ಒಬ್ಬರು. ಉಡುಪಿ ತಾಲೂಕಿನ ಹರಿಜನ ಸೇವಾ ಸಂಘದ ಕಾರ್ಯದರ್ಶಿಯಾಗಿ, ಸರ್ಕಾರದ ಅನುದಾನ ಸಿಗುವ ಮೂರು ವರ್ಷಗಳ ಮುಂಚೆಯೇ, ಉಡುಪಿಯಲ್ಲಿ ಹರಿಜನ ವಿದ್ಯಾರ್ಥಿ ಭವನವನ್ನು ತೆರೆದು ಅನೇಕ ಹರಿಜನ ಮಕ್ಕಳಿಗೆ ಭೋಜನ ಸೌಕರ್ಯವನ್ನು ಒದಗಿಸಿಕೊಟ್ಟು ವಿದ್ಯಾರ್ಥಿಗಳ ಓದಿಗೆ ಸಹಾಯಿಸಿದ್ದರು. ಕಾಂಗ್ರೆಸ್‌ನ ಪ್ರಚಾರದೊಂದಿಗೆ ಕಾಪು, ಕಟ್ಪಾಡಿ, ಮಲ್ಪೆ, ಕಲ್ಯಾಣ ಪುರ, ಬಾರಕೂರು, ಪಡುಬಿದ್ರಿ ಸಾಯ್ಬರಕಟ್ಟೆ, ಕೊಕ್ಕರಣೆ ಮುಂತಾದ ಊರುಗಳಲ್ಲಿ ಹರಿಜನರ ಉದ್ಧಾರದ ಬಗ್ಗೆಯೂ ಪ್ರಚಾರ ಮಾಡಿದ್ದರು. ಮತ್ತು ಆ ಸಮಯದಲ್ಲಿ, ಉಡುಪಿಯ ಶ್ರೀ ಕೃಷ್ಣ ದೇವಾಲಯ, ವಡಭಾಂಡೇಶ್ವರ ಬಲರಾಮ ದೇವಸ್ಥಾನ, ಕಾರ್ಕಳದ ವೆಂಕಟರಮಣ ದೇವಸ್ಥಾನ, ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನ, ಕೋಟೇಶ್ವರದ ಕೋಟಿ ಲಿಂಗೇಶ್ವರ, ಉಪ್ಪೂರಿನ ದುರ್ಗಾ ಪರಮೇಶ್ವರಿ, ಬಾರಕೂರಿನ ಪಂಚಲಿಂಗೇಶ್ವರ, ಮೂಡುಬಿದ್ರಿಯ ಜ್ಯೋತಿರ್ಲಿಂಗ ದೇವಾಲಯ ಮುಂತಾದ ದೇವಾಸ್ಥಾನಗಳಿಗೆ, ಅರ್ಚಕರ ಮತ್ತು ಮೊಕ್ತೇಸರರ ಮನ ಒಲಿಸಿ, ಹರಿಜನರ ಪ್ರವೇಶ ಮಾಡಿಸಿದ್ದು ಮಹತ್ವದ ವಿಷಯ. ಅಷ್ಟಲ್ಲದೆ, ಅಸ್ಪೃಷ್ಯತೆಯನ್ನು ವಿರೋಧಿಸಿ ೧೯೩೯ರಲ್ಲಿ 'ಸ್ಥಾನ ತಿಮಿರ ಮಾರ್ತಾಂಡ' ಎಂಬ ಒಂದು ಪುಸ್ತಕವನ್ನೂ ರಚಿಸಿ, ಪ್ರಕಟಿಸಿದರು ಈ ಅಂತಯ್ಯ ಶೆಟ್ಟಿಯವರು. ಅಕ್ಕದಾಸ ಗಣಪತಿ ಭಟ್ಟರು ವಿಧವಾ ವಿವಾಹದ ಪ್ರಚಾರ ಮಾಡಿ ವಿಧವೆಯರಿಗೆ ಪುನರ್ಜೀವನ ಕಲ್ಪಿಸಲು ಶ್ರಮಿಸುತ್ತಿರುವ ಸಂದರ್ಭದಲ್ಲಿ ಪೋಲೀಸರು, ಭಾರತ ರಕ್ಷಣಾ ಕಾಯಿದೆಯನ್ವಯ ಶೆಟ್ಟಿಯವರನ್ನು ಬಂಧಿಸಲು ಪ್ರಯತ್ನಿಸಿದ್ದು, ಶೆಟ್ಟಿಯವರು ತಲೆ ತಪ್ಪಿಸಿಕೊಂಡು ವಿಧವಾ ವಿವಾಹದ ಬಗ್ಗೆಯೂ ಪ್ರಚಾರ ಮಾಡುವ ಹುಮ್ಮಸ್ಸನ್ನು ಹೊಂದಿದ್ದರು. ಆ ನಂತರ ೧೯೪೭ರಿಂದ ೧೯೫೬ರ ವರೆಗೆ, ಒಂದು ಪತ್ರಿಕೆ ನಡೆಸಿ, ಅತ್ಯಂತ ಹಿಂದುಳಿದ ಜನಾಂಗವಾದ ಪಶ್ಚಿಮ ಘಟ್ಟದ, ಮಲೆ ಕುಡಿಯರ ಜಾಗೃತಿಗೆ ಮತ್ತು ಉನ್ನತಿಗಾಗಿ ದುಡಿದರು. ಮದ್ರಾಸ್ ಸರ್ಕಾರವು ಇವರನ್ನು ಅಸ್ಪೃಶ್ಯತಾ ನಿವಾರಣಾ ಕಾರ್ಯಕರ್ತನೆಂದು ೧೯೫೬ರಲ್ಲಿ ನೇಮಕ ಮಾಡಿತು. ಅದರಂತೆ ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಹಾಗೂ ಜಿಲ್ಲೆಯ ಹೊರ ಪ್ರದೇಶದಲ್ಲೂ ಹರಿಜನರ ಏಳ್ಗೆಗಾಗಿ ಶೆಟ್ಟಿಯವರು ಸೇವೆ ಮಾಡಿದ್ದರು.

ಉದಾರ ಸ್ವಭಾವದ ವಕೀಲರಾಗಿದ್ದ, ತೋನ್ಸೆ ಮುಕುಂದ ಪೈಗಳು ತಮ್ಮ ಮನೆ 'ಮುಕುಂದ ನಿವಾಸ'ವನ್ನು, ಕಾಂಗ್ರೆಸ್ ಕಾರ್ಯಕ್ರಮಗಳಿಗೇ ಅಲ್ಲದೇ, ಹರಿಕಥೆಗಳು, ಕಾಂಗ್ರೆಸ್ ಮಹಾಸಭೆಗಳು, ರಾಷ್ಟ್ರೀಯ ಶಾಲೆ, ಚರಕ ಮತ್ತು ನೂಲುವ ಪಂದ್ಯಾಟಗಳನ್ನು ನಡೆಸಲು ಉಚಿತವಾಗಿ ಬಿಟ್ಟು ಕೊಡುತ್ತಿದ್ದರು. ಉಡುಪಿಯ

ಮದ್ಯದ ಅಂಗಡಿಯ ಮುಂದೆ, ಪಿ ವಾಸುದೇವ ಪ್ರಭು, ಜನಾರ್ದನ ಶೆಣೈ, ಬಿ.ಜಿ. ಪ್ರಭು, ಯು. ನಾಗೇಶ ಶೆಣೈ, ಮುಂತಾದವರು ಪಿಕೆಟಿಂಗ್ ನಡೆಸುವ ಸಮಯದಲ್ಲಿ, ಅಂಬಾಬಾಯಿ ಪೈ, ಭಾಗೀರಥೀ ಬಾಯಿ, ಗಿರಿಜಾ ಬಾಯಿ ಮತ್ತು ಪಾಂಗಾಳದ ಮನೋರಮಾ ನಾಯಕ್, ಮುಂತಾದ ಸ್ತ್ರೀ ಸ್ವಯಂ ಸೇವಕಿಯರೂ ಸೇರಿ ಮದ್ಯದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದ್ದರು. ದೆಯ್ಯಂತೋಡಿಯ ಬೀರುಶೆಟ್ಟಿಯವರು, ಮದ್ಯಪಾನ ನಿಷೇಧ, ಪರದೇಶೀ ವಸ್ತುಗಳ ಬಹಿಷ್ಕಾರ, ಯುದ್ಧ ವಿರೋಧಿ ಚಳವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಬಂಧಿಖಾನೆಯಲ್ಲಿದ್ದರು.

ಕಾರ್ಕಳ ತಾಲೂಕಿನ ವರಂಗ ಗ್ರಾಮದ ಎಂ. ಡಿ. ಅಧಿಕಾರಿಯವರು, ಮುದ್ರಾಡಿಯಲ್ಲಿ ಅವರ ತಾತನವರಾದ ಮುದ್ರಾಡಿಬೀಡು ನಾಗರಾಜ ಅಧಿಕಾರಿಗಳ ಸಹಕಾರದಿಂದ ಕಸ್ತೂರ್‌ಬಾ ಸ್ಮಾರಕ ರಾಷ್ಟ್ರೀಯ ಶಾಲೆಯನ್ನು ತೆರೆದು, ಸರ್ಕಾರದ ಸಹಾಯವಿಲ್ಲದೆ, ಹದಿನಾಲ್ಕು ವರ್ಷಗಳ ಕಾಲ ಉತ್ತಮವಾಗಿ ನಡೆಸಿ, ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಿಗಾಗಿ ಆಗಿನ ಜಿಲ್ಲಾ ಬೋರ್ಡಿಗೆ ತಾವೇ ನಿರ್ಮಿಸಿದ ಶಾಲೆಯನ್ನೂ ಶಾಲಾ ಸ್ಥಳವನ್ನೂ ಬಿಟ್ಟು ಕೊಟ್ಟಿದ್ದರು. ಅಲ್ಲದೆ ಗ್ರಾಮೋದ್ಯೋಗ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಹಿಂದೀ ಪ್ರಚಾರ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನೂ ಕೈಗೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ನಾಡನ್ನು, ಸಮಾಜವನ್ನು ಪ್ರಗತಿಯ ಪಥಕ್ಕೆ ಕೊಂಡೊಯ್ಯಲು ಪ್ರಯತ್ನಿಸಿದ್ದರು.

೧೯೨೩ರಲ್ಲಿ ಜುಲೈ ೧೨ ಮತ್ತು ೧೩ರಂದು ಜಿಲ್ಲೆಯಲ್ಲಿ ಎಂದೂ ನಡೆಯದಂಥ ಭಾರೀ ಪ್ರವಾಹಗಳು ಬಂದು, ಶಾಲೆಗಳು, ಅಂಗಡಿಗಳು, ಮನೆಗಳು, ಹೊಲ–ಗದ್ದೆಗಳೆಲ್ಲವೂ ನೆಲಸಮಗೊಂಡು ಅನೇಕರು ನಿರ್ಗತಿಕರಾದರು. ನೆರೆಹಾವಳಿಯ ಸಂದರ್ಭದಲ್ಲಿ ಸಂತ್ರಸ್ತ ಹರಿಜನರ ಪುನರ್ವಸತಿಗೆ ಕಾರ್ನಾಡು ಸದಾಶಿವರಾಯರಲ್ಲದೆ, ಎಂ. ಅಬ್ದುಲ್ ಖಾದರ್ ಮತ್ತು ಅವರ ಅಣ್ಣ ಎಂ. ಈ. ಹೈದರ್, ಮೋಹನಪ್ಪ ತಿಂಗಳಾಯ, ಹೊಯ್ಗೆ ಬಜಾರ್ ಕೃಷ್ಣಪ್ಪ ತಿಂಗಳಾಯ, ಮುಂತಾಗಿ ಜಿಲ್ಲೆಯ ಹಲವರು ಶ್ರಮಿಸಿದರು. ಕುಳೂರು ಉಳಿಯದಿಂದ, ಗುರುಪುರದವರೆಗೆ ಹೊಳೆಬದಿಗಳಲ್ಲಿ ವಾಸಿಸುತ್ತಿದ್ದ ನೆರೆಪೀಡಿತರ ಸಂಕಷ್ಟಗಳನ್ನು ತಿಳಿದುಕೊಂಡು, ವರದಿ ಮಾಡಿ, ಸದಾಶಿವರಾಯರ ನೇತೃತ್ವದ ಫ್ಲಡ್ ರಿಲೀಫ್ ಕಮಿಟಿಯ ಮೂಲಕ, ಹಳ್ಳಿಗರಿಗೆ ಸಹಾಯ ಸಿಗುವಂತೆ ಮಾಡಿದವರು ಬ್ರಹ್ಮಗಿರಿಯ (ಉಡುಪಿ)ಎಂ. ಅಬ್ದುಲ್ ಖಾದರ್ ಮತ್ತು ಎಚ್.ಟಿ. ಶ್ರೀನಿವಾಸರಾಯರು. ಸರ್ವಸ್ವವನ್ನು ಕಳೆದುಕೊಂಡ ಏಳುನೂರು ಜನ ಕೂಳೂರು ಇಗರ್ಜಿಯಲ್ಲೂ, ನೂರಿಪ್ಪತ್ತೈದು ಜನ ಪೇಜಾವರ ಮಠದಲ್ಲೂ ಉಳಿದಿದ್ದು, ಇವರಿಗೆಲ್ಲ ಎರಡು ತಿಂಗಳ ಕಾಲ ಅಕ್ಕಿಯನ್ನೂ; ಗಂಡಸರಿಗೆ ಲುಂಗಿ, ಹೆಂಗಸರಿಗೆ ಸೀರೆಯನ್ನೂ ಕೊಡಿಸಲು ಇವರು ಶ್ರಮಿಸಿದರು. ಕೂಳೂರು ಉಳಿಯ, ಕೂಳೂರು, ಅಹರೇಲು, ತೋಕೂರು, ಜೋಕಟ್ಟೆ, ಪೇಜಾವರ, ಕೆಂಜಾರು, ಮರವೂರಬೈಲು ಮುಂತಾದ ಸ್ಥಳಗಳ ಜನರಿಗೂ ಅಗತ್ಯ ನೆರವನ್ನು ಇವರು ಒದಗಿಸಿದರು.

ಮಕ್ಕಳ ಸಾಹಿತ್ಯಕ್ಕೆ ಹೆಸರಾಗಿದ್ದ ಪಂಜೆ ಮಂಗೇಶರಾಯರು, ಶಾಲಾ ಪರೀಕ್ಷಕರಾಗಿ ಊರಿಂದೂರಿಗೆ ಸುತ್ತಿ ಹಳ್ಳಿ ಶಾಲೆಗಳ ಸ್ಥಿತಿಗತಿ ಅರಿತು ಅವುಗಳ ಸುಧಾರಣೆಗೆ ಪ್ರಯತ್ನಿಸಿದರು. ೧೯೧೮ರಿಂದ ೧೯೨೧ರ ವರೆಗೆ ಶಿಕ್ಷಣ ರಂಗದಲ್ಲಿ ಹಲವಾರು ನೂತನ ಪ್ರಯೋಗಗಳನ್ನು ಮಾಡಿದ್ದು ಅವುಗಳಲ್ಲಿ, ಹರಿಜನ ಬಾಲಕರಿಗೂ ಶಾಲಾ ಪ್ರವೇಶವನ್ನು ದೊರಕಿಸಿ ಕೊಟ್ಟಿದ್ದು, ಅವರೊಂದಿಗೆ ಸಹಪಂಕ್ತಿ ಭೋಜನ ಮಾಡಿದ್ದು ಉಲ್ಲೇಖನೀಯ.

## ಧಾರ್ಮಿಕ ಸೇವಾ ಸುಧಾರಣಾ ಸಂಸ್ಥೆಗಳು

ಉಡುಪಿ ಜಿಲ್ಲಾ ಪ್ರದೇಶವನ್ನೂ ಒಳಗೊಂಡಿದ್ದ ಅವಿಭಜಿತ ದಕಿಣ ಕನ್ನಡ ಜಿಲ್ಲೆಯಲ್ಲಿ ಜೈನ, ಕ್ರೈಸ್ತ, ಮತಾನುಯಾಯಿಗಳು ತಮ್ಮ ಧರ್ಮ ಸ್ಥಾಪನೆ ಮತ್ತು ಪ್ರಚಾರಗಳ ಮೂಲಕ ಮಾಡಿರುವ ಸಮಾಜ ಸೇವೆ ಮತ್ತು ಸುಧಾರಣೆಗಳು ಗಮನೀಯವಾದುವು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕ್ರೈಸ್ತ ಮತಾನುಯಾಯಿಗಳು/ ಮಿಶನರಿಗಳು ಮತ ಪ್ರಚಾರವಲ್ಲದೆ, ದೀನ ದಲಿತರ ಬಗ್ಗೆ ವಿಶೇಷ ಕಾಳಜಿಯನ್ನು ತೋರಿಸಿದರು. ಅವರಿಗಾಗಿ ಆಶ್ರಮಗಳೆಂಬ ವಸತಿಗೃಹಗಳನ್ನು ಅಲ್ಲಲ್ಲಿ ಸ್ಥಾಪಿಸಿದರು. ಶಿಕ್ಷಣ ಮತ್ತು

ವೈದ್ಯಕೀಯ ರಂಗಗಳಲ್ಲಿ ಇವರು ಮಾಡಿದ ಸೇವೆ ಅಮೋಘವಾದುದು. ಧೂಪದ ಕಟ್ಟೆಯಲ್ಲಿ (ಹೆರೂರು ಅಂಚೆ) ದೀರ್ಘ ಕಾಲದಿಂದ ನಡೆಸಲಾಗುತ್ತಿರುವ 'ಕರುಣಾಲಯ', ಒಂದು ಕ್ಯಾಥೋಲಿಕ್ ಸಂಸ್ಥೆಯಾಗಿದ್ದು, ವೃದ್ಧರಿಗೆ ನೆಮ್ಮದಿಯ ಆಸರೆ ನೀಡುವ ಒಂದು ಉತ್ತಮ ಸಂಸ್ಥೆ ಎಂಬ ಹೆಸರು ಗಳಿಸಿದೆ. ಪಕ್ಷಿಕೆರೆಯ ರುಡ್‌ಸೆಟ್ ಉತ್ತಮವಾಗಿ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿರುವ ಇನ್ನೊಂದು ಕ್ಯಾಥೋಲಿಕ್ ಸಂಸ್ಥೆಯಾಗಿದೆ.

ಮಂದಿರದ ಆವರಣದಲ್ಲಿರುವ ಅಷ್ಟ ಮಠಗಳಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಜನರಿಗೆ ಅರಿವು ಮೂಡಿಸಿ, ಅವರ ಆಲೋಚನಾ ಮಟ್ಟವನ್ನು ಉನ್ನತೀಕರಿಸುವ ಹಾಗೂ ಭಕ್ತಿಯ ಮೂಲಕ ಜನರಿಗೆ ನೆಮ್ಮದಿಯ ದಾರಿಯನ್ನು ತೋರಿಸುವುದು ಮಾತ್ರವಲ್ಲದೆ, ಈ ಕ್ಷೇತ್ರದಲ್ಲಿರುವ "ಶ್ರೀ ಕೃಷ್ಣ ಉಚಿತ ಚಿಕಿತ್ಸಾಲಯ"ದಲ್ಲಿ ಅನಾಥ ರೋಗಿಗಳಿಗೆ ಮತ್ತು ಭಕ್ತರಿಗೆ ಉಚಿತ ಚಿಕಿತ್ಸೆ ಮತ್ತು ಔಷಧೋಪಚಾರದ ಏರ್ಪಾಡು ಇದೆ. ಬಡ ವಿದ್ಯಾರ್ಥಿಗಳಿಗೆ ಹಣ ನೆರವು, ಗಂಭೀರ ಖಾಯಿಲೆಗೆ ತುತ್ತಾದ ಬಡವರಿಗೆ ಅವಶ್ಯಕ ಖರ್ಚಿಗೆ ಐವತ್ತು ಸಾವಿರದ ವರೆಗೆ ಹಣದ ನೆರವೂ ಮಠದಿಂದ ನೀಡಲಾಗಿದೆ. ಅಷ್ಟ ಮಠಗಳಲ್ಲಿ ಶೀರೂರು ಮಠವೊಂದನ್ನು ಬಿಟ್ಟು ಉಳಿದವುಗಳಲ್ಲಿ ಗುರುಕುಲಗಳಿವೆ. ಉಡುಪಿ ಮಠದಲ್ಲಿ ಪ್ರತಿ ದಿನ ಸುಮಾರು ಐದು ಸಾವಿರ ಜನರಿಗೆ ಅನ್ನದಾನ ನಡೆಯುತ್ತದೆ. ಸಾವಿರಾರು ಶಾಲಾ ಮಕ್ಕಳಿಗೂ ಅನ್ನದಾನ ನಡೆಯುತ್ತಿದ್ದು ಇದರಲ್ಲಿ ಸರ್ಕಾರದ ನೆರವೂ ಸೇರುತ್ತದೆ. ರಾಘವೇಂದ್ರ ಸ್ವಾಮಿಗಳ ಜನ್ಮ ಸ್ಥಳವಾದ ಪಾಜಕ ಕ್ಷೇತ್ರದಲ್ಲೂ ಪ್ರತಿ ದಿನ ಶಾಲಾ ಮಕ್ಕಳಿಗೆ ಉಚಿತ ಅನ್ನದಾನ ಮತ್ತು ವಸತಿ ವ್ಯವಸ್ಥೆಯೂ ಇರುತ್ತದೆ. ಉಡುಪಿಗೆ 'ಅನ್ನ ಬ್ರಹ್ಮ ಕ್ಷೇತ್ರ'ವೆಂದು ಕರೆಯುತ್ತಾರೆ.

**ಸ್ವಯಂ ಸೇವಾ ಸಂಸ್ಥೆಗಳು**

ಪ್ರಸ್ತುತ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ವಿವಿಧ ಸಾಮಾಜಿಕ ಪ್ರಗತಿಯ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿವೆ. ಅವುಗಳಲ್ಲಿ, ಉಡುಪಿ ತಾಲೂಕು ಕುಂಜಿಬೆಟ್ಟಿನ ಪ್ರಜ್ಞಾ ರೆಸಿಡೆನ್‌ಷಿಯಲ್ ಇನ್‌ಸ್ಟಿಟ್ಯೂಟ್ ಫಾರ್ ಮೆಂಟಲಿ ರೆಟಾರ್ಡೆಡ್ ಯಂಗ್ ಮೆನ್' ಮತ್ತು 'ವಿಕಸನ', ಡಾ. ಟಿ.ಎಂ.ಎ. ಪೈ ಕಾಲೇಜ್ ಆಫ್ ಎಜುಕೇಷನ್, ಎಂಬ ಎರಡು ಸಂಸ್ಥೆಗಳು, ಅಂಗವಿಕಲ ಮಕ್ಕಳ ಸೇವೆ ಮತ್ತು ಅವರಿಗೆ ತರಬೇತಿ ನೀಡುವ ಸಲುವಾಗಿ ಇವೆ. ಹೆಜಮಾಡಿ ಬಸ್ತಿಪದ್ಪು ಸ್ಟೇಡಿಯಮ್ ಮತ್ತು ಗ್ರೀನ್ ಪಾರ್ಕ್ ಅಸೋಸಿಯೇಷನ್, ಸಮುದಾಯ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಕ್ರೀಡೆಗಳಿಗಾಗಿ ಇದ್ದರೆ ಕುಂದಾಪುರ ತಾಲೂಕು, ಕೆದೂರಿನ ಸ್ಫೂರ್ತಿ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಹಕಾರಿ ಶಾಂತಿಧಾಮ, ಶಿವಳ್ಳಿ (ಪೇರಂಪಳ್ಳಿ)ಯ 'ಭಾರತೀಯ ವಿಕಾಸ ಟ್ರಸ್ಟ್' ಹಾಗೂ ಮಣಿಪಾಲದ ಮಣಿಪಾಲ್ ಇಂಡಸ್ಟ್ರಿಯಲ್ ಟ್ರಸ್ಟ್‌ಗಳು, ಮಹಿಳೆ ಮತ್ತು ಮಕ್ಕಳ ಪ್ರಗತಿಯಲ್ಲದೆ, ಕಲೆ ಮತ್ತು ಸಂಸ್ಕೃತಿ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಕಾರ್ಯಪ್ರವೃತ್ತವಾಗಿವೆ. ಹಿರಿಯಡ್ಕದ 'ಸಿಂಡಿಕೇಟ್ ಅಗ್ರಿಕಲ್ಚರ್ ಮತ್ತು ರೂರಲ್ ಡೆವಲಪ್‌ಮೆಂಟ್ ಫೌಂಡೇಷನ್' ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಾಗಿವೆ.

ನಂದನಾ ಶೆಟ್ಟಿಯವರು, ಕುಂದಾಪುರ ತಾಲೂಕಿನ ತಲ್ಲೂರಿನಲ್ಲಿರುವ 'ದುಡಿಯುವ ಮಕ್ಕಳ ಸಂಘ' (ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್) ಎಂಬ ಸಂಸ್ಥೆಯನ್ನು ಉತ್ತಮವಾಗಿ ನಡೆಸುತ್ತಿದ್ದು, ಮಕ್ಕಳ ವಿದ್ಯೆಗೆ ಬೆಂಬಲ, ಬಾಲ ಕಾರ್ಮಿಕರ ಬಿಡುಗಡೆ, ಅರ್ಧದಲ್ಲಿ ಶಾಲೆ ಬಿಡುವ ಮಕ್ಕಳ ಮರು ಓದು ಮತ್ತು ಅವರುಗಳ ಪುನರ್ವಸತಿ ಇವೇ ಮುಂತಾದ ಮಕ್ಕಳ ಎಲ್ಲ ರೀತಿಯ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹಾರ ನೀಡುವ ಪ್ರಯತ್ನ ಮಾಡುತ್ತಿದ್ದಾರೆ. ಕಾರ್ಕಳ ಬಳಿಯ ಮಾಳದ ಪಂಡಿತಾ ರಮಾಬಾಯಿಯವರು ದೀನದಲಿತರಿಗಾಗಿ ದುಡಿದ ಕ್ರಾಂತಿಕಾರಿ ಮಹಿಳೆ. ೧೯೫೦ ರಿಂದ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ನರ ಆಶ್ರಯದಲ್ಲಿ ನಡೆಯುವ ಮಿಶನರಿ ಸಂಸ್ಥೆಯಲ್ಲಿ ನಿರ್ಗತಿಕರಿಗೆ ಆಶ್ರಯ ನೀಡಲಾಗುತ್ತದೆ. ಕಾರ್ಕಳದಲ್ಲಿರುವ ಗೌಡ ಸಾರಸ್ವರ ಭುವನೇಂದ್ರರ ಬಾಲಕಾಶ್ರಮ; ೧೯೩೪ರಲ್ಲಿ ಹರಿಜನ ಮಹಿಳೆಯರ ಆಶ್ರಮ; ೧೯೪೩ರಲ್ಲಿ

ಜೈ ಬಾಹುಬಲಿ ಶ್ರಾವಕಾಶ್ರಮ; ೧೯೪೭ರಲ್ಲಿ ಆರಂಭವಾದ ಭುಜಬಲಿ ಬ್ರಹ್ಮಚರ್ಯಾಶ್ರಮ–ಇವು ಬಡ ಮಕ್ಕಳ ವಿದ್ಯೆಗೆ ಆಸರೆ ನೀಡುವ ಆಶ್ರಮಗಳಾಗಿವೆ. ೧೯೩೪ರಲ್ಲಿ ಆರಂಭವಾದ ಶಬರಿ ಆಶ್ರಮವು, ವಾರ್ಡನ್ ತೀರಿಕೊಂಡ ಮೇಲೆ, ಕೆಲಕಾಲ ಸ್ಥಗಿತಗೊಂಡು, ೧೯೭೨ರಿಂದ ಪುನಃ ಕ್ರಿಯಾಶೀಲವಾಗಿದ್ದು, ಈಗ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ನಿಲಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಗೌಡ ಸಾರಸ್ವತ ಜನಾಂಗದವರಿಂದ ೧೯೭೩ರಿಂದ ಸುಕೃತೀಂದ್ರ ತೀರ್ಥ ನಿಲಯವನ್ನು ಬಡ ವಿದ್ಯಾರ್ಥಿಗಳಿಗಾಗಿ ನಡೆಸಲಾಗುತ್ತಿದೆ.

ಬ್ರಹ್ಮಾವರ ಮತ್ತು ಕುಂದಾಪುರಗಳಲ್ಲಿರುವ ಸಮಾಜ ಕಲ್ಯಾಣ ಮಂಡಳಿಗಳು, ಸಾಧನ ಸಂಸ್ಥೆ, ಮಣಿಪಾಲ್‌ನಲ್ಲಿರುವ ಮಾಹಿಯಾ, ಕುಂದಾಪುರ ತಾಲೂಕು, ಕೋಟೇಶ್ವರದ ಕೊರಗರ ಶ್ರೇಯೋಭಿವೃದ್ಧಿ ಸಂಸ್ಥೆ, ರೆಡ್ ಕ್ರಾಸ್ ಸಂಸ್ಥೆ, ಇವು ಈ ಜಿಲ್ಲೆಯಲ್ಲಿರುವ ಇನ್ನಿತರ ಸೇವಾ ಸಂಸ್ಥೆಗಳಾಗಿವೆ.

* * * * *